Bennett & Coleman
THE TIMES OF INDIA
www.vijaykarnataka.com
ಸೋಮವಾರ,29 ಜೂನ್ 2026 | ಪುಟಗಳು: 12 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 179
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

SAPTHAGIRI NPS UNIVERSITY
UNMATCHED EXCELLENCE, UNLIMITED POTENTIAL
& IBM Innovation Centre for Education
Proudly Presents
Industry Immersion Program for the Age of AI
B.E CSE & Data Science
with Global IBM Certification in AI
ADMISSION OPEN AY 2026-27
Unlock powerful career opportunities with globally recognized
Elite IBM Mastery badge in AI
Combine core Engineering knowledge with globally recognized Certification from IBM
B.E | BBA | BCA | B.COM
MBA | MCA | MTECH
Dr. K.P Gopalkrishna
Chairman, National Public School, President- Sapthagiri NPS University
9900072632
#14/5, Chikkasandra, Hesarghatta Main Rd, Bengaluru - 560 057
admissions@snpsu.edu.in
www.snpsu.edu.in

ವಿಕ ಹೊಂಗಿರಣ

ಜಗತ್ತು ನಾಶವಾಗುವುದು ಕೆಟ್ಟದ್ದನ್ನು ಮಾಡುವವರಿಂದಲ್ಲ, ಬದಲಿಗೆ, ಕೇಡು ಬಗೆಯುವುದನ್ನು ನೋಡಿಯೂ ಏನೂ ಮಾಡದೆ ಸುಮ್ಮನಿರುವವರಿಂದ.

- ಅಲ್ಬರ್ಟ್ ಐನ್‌ಸ್ಟೀನ್

SBI
The banker to every Indian
ಗೃಹ ಸಾಲ
• ಯಾವುದೇ ಮರೆಮಾಚಲಾದ ಶುಲ್ಕಗಳಿಲ್ಲ
• ಯಾವುದೇ ಸಂಸ್ಕರಣಾ ಶುಲ್ಕಗಳಿಲ್ಲ
• ಸ್ಪರ್ಧಾತ್ಮಕ ಬಡ್ಡಿದರಗಳು
ಭೇಟಿ ನೀಡಿ: homeloans.sbi
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹132/- ಕೋಲಾರ 132/- ತುಮಕೂರು 130/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹172/-
ಕೋಲಾರ 172/- ತುಮಕೂರು 170/-
ವಿಥ್ ಸ್ಕಿನ್ ₹243/- ಕೋಲಾರ 243/- ತುಮಕೂರು 240/-
ವಿಥೌಟ್ ಸ್ಕಿನ್ ₹277/- ಕೋಲಾರ 277/- ತುಮಕೂರು 274/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಸಾವಿರಕ್ಕೂ ಅಧಿಕ ಹುದ್ದೆಗಳಿಗೆ ಶೀಘ್ರ ಸರಣಿ ಅಧಿಸೂಚನೆ | ವೇಳಾಪಟ್ಟಿ ಪ್ರಕಟಿಸಲು ಕೆಪಿಎಸ್‌ಸಿ ಸಿದ್ಧತೆ | ಉದ್ಯೋಗಾಕಾಂಕ್ಷಿಗಳಿಗೆ ಶುಭ ಸುದ್ದಿ

ಜುಲೈ ನೇಮಕಾತಿ ಧಮಾಕಾ

■ **ಶ್ರೀಕಾಂತ್ ಹುಣಸವಾಡಿ** ಬೆಂಗಳೂರು
Srikanth.G@timesofindia.com

ಕರ್ನಾಟಕ ಲೋಕಸೇವಾ ಆಯೋಗ ಜುಲೈ ತಿಂಗಳಲ್ಲಿ 400 ಗೆಜೆಟೆಡ್ ಪ್ರೊಬೇಷನರಿ ಹುದ್ದೆ, ಸುಮಾರು 115 ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆ ಸೇರಿ ಒಂದು ಸಾವಿರಕ್ಕೂ ಅಧಿಕ ಹುದ್ದೆಗಳ ನೇಮಕಕ್ಕೆ ಸರಣಿ ಅಧಿಸೂಚನೆಗಳನ್ನು ಹೊರಡಿಸಲು ಸಿದ್ಧತೆ ಮಾಡಿಕೊಂಡಿದೆ.

ತ್ವರಿತವಾಗಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ನೀಲನಕ್ಷೆ ರೂಪಿಸಿಕೊಂಡಿರುವ ಆಯೋಗ, ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ ಜತೆಗೆ ವಿವಿಧ ಸಚಿವಾಲಯ/ ಇಲಾಖೆಗಳಲ್ಲಿ ಖಾಲಿಯಿರುವ ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ ಮತ್ತು 'ಸಿ' ಗುಂಪಿನ ಹುದ್ದೆಗಳೂ ಸೇರಿದಂತೆ ಸಾವಿರಾರು ಹುದ್ದೆಗಳಿಗೆ ಕಾಲಮಿತಿಯ ನೇಮಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ತಯಾರಿ ನಡೆಸಿದೆ. ಹಾಗಾಗಿ, ನಾಗರಿಕ ಸೇವಾ ಆಕಾಂಕ್ಷಿಗಳು ಹಾಗೂ ಸರಕಾರಿ ಸೇವೆಯ ಕನಸು ಹೊಂದಿರುವ ಯುವ ಜನತೆ ಆಯೋಗದ ಪರೀಕ್ಷೆಗಳನ್ನು ಎದುರಿಸಿ, ಉದ್ಯೋಗ ಗಿಟ್ಟಿಸಿಕೊಳ್ಳಲು ಅಗತ್ಯ ತಯಾರಿ ಮಾಡಿಕೊಳ್ಳಬಹುದಾಗಿದೆ. ನಿಗದಿತ ವೇಳಾಪಟ್ಟಿಯಂತೆ ನೇಮಕ ಪ್ರಕ್ರಿಯೆ ಪೂರ್ಣಗೊಳಿಸುವ ಮೂಲಕ ಕೆಪಿಎಸ್‌ಸಿ ತನಗೆ ಅಂಟಿರುವ 'ವಿಳಂಬ ನೇಮಕಾತಿ'ಯ ಕಳಂಕವನ್ನೂ ತೊಡೆದುಕೊಳ್ಳಲು ಮುಂದಾಗಿದೆ.

»03

> ಕರ್ನಾಟಕ ಲೋಕಸೇವಾ ಆಯೋಗ ಈಗಾಗಲೇ ವಿವಿಧ ನೇಮಕಾತಿ ಸಂಬಂಧ ಅಧಿಸೂಚನೆಗಳನ್ನು ಪ್ರಕಟಿಸಲು ಎಲ್ಲಾ ಸಿದ್ಧತೆ ನಡೆಸಿದೆ. ಸರಕಾರದ ಇಲಾಖೆಗಳಿಂದ ಪ್ರಸ್ತಾವ ಬಂದ ಹಾಗೆ ಅಧಿಸೂಚನೆ ಹೊರಡಿಸಿ ನೇಮಕ ಪ್ರಕ್ರಿಯೆ ಕೈಗೊಳ್ಳಲಾಗುವುದು.
>
> **-ಕೆ. ಜ್ಯೋತಿ** ಕಾರ್ಯದರ್ಶಿ, ಕೆಪಿಎಸ್‌ಸಿ

ಯಾವ್ಯಾವ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ?

- ವಿವಿಧ ಇಲಾಖೆಗಳಲ್ಲಿನ ಪ್ರಥಮ ದರ್ಜೆ ಸಹಾಯಕರು (ಎಫ್‌ಡಿಎ)
- ನಾನಾ ಇಲಾಖೆಗಳಲ್ಲಿನ ದ್ವಿತೀಯ ದರ್ಜೆ ಸಹಾಯಕರು (ಎಸ್‌ಡಿಎ)
- ಪದವಿ ವಿದ್ಯಾರ್ಹತೆಯ ಗ್ರೂಪ್ 'ಸಿ' ಹುದ್ದೆಗಳು
- 400 ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆಗಳು
- 115 ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್
- ಲೆಕ್ಕ ಪರಿಶೋಧನಾ ಇಲಾಖೆಯಲ್ಲಿನ ಸಹಾಯಕ ನಿಯಂತ್ರಕರು ಮತ್ತು ಲೆಕ್ಕಪರಿಶೋಧನಾಧಿಕಾರಿ

ಕೆಎಎಸ್ ಫಲಿತಾಂಶ ಸದ್ಯಕ್ಕಿಲ್ಲ

ಈ ಮಧ್ಯೆ, 2024ನೇ ಸಾಲಿನ 384 ಗೆಜೆಟೆಡ್ ಪ್ರೊಬೇಷನರ್ ನೇಮಕ ಪ್ರಕ್ರಿಯೆ ಅಂತಿಮ ಘಟ್ಟ ತಲುಪಿದೆ. ಸಂದರ್ಶನ ಪ್ರಕ್ರಿಯೆ ಮುಗಿದು ತಾತ್ಕಾಲಿಕ ಆಯ್ಕೆ ಪಟ್ಟಿ ಸಿದ್ಧವಾಗಿದ್ದರೂ ಆಯೋಗಕ್ಕೆ ಅದನ್ನು ಪ್ರಕಟಿಸಲಾಗುತ್ತಿಲ್ಲ. ಮೀಸಲು ವಿವಾದದ ಪ್ರಕರಣದಲ್ಲಿ ಫಲಿತಾಂಶ ಪ್ರಕಟಣೆಗೆ ಹೈಕೋರ್ಟ್ ನಿರ್ಬಂಧ ವಿಧಿಸಿದೆ. ಕಳೆದ ವಾರ ಆಯೋಗ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮನವಿ ಮಾಡಿದರೂ ಅನುಮತಿ ನೀಡಿಲ್ಲ. ನ್ಯಾಯಾಲಯದಿಂದ ಅನುಮೋದನೆ ಸಿಗದ ಹೊರತು ಆಯೋಗ ಸದ್ಯಕ್ಕೆ ಫಲಿತಾಂಶ ಪ್ರಕಟಿಸುವಂತಿಲ್ಲ. ಹಾಗಾಗಿ, ಆಯೋಗ ಸುಮ್ಮನೆ ಕೂರದೆ ಹೊಸ ನೇಮಕ ಪ್ರಕ್ರಿಯೆ ಕೈಗೆತ್ತಿಕೊಂಡಿದೆ.

ALVA'S Education Foundation
ALVA'S ACADEMY FOR EXCELLENCE
VIDYAGIRI, MOODUBIDIRE, D.K. - 574227
ADMISSIONS OPEN
NEET LONG TERM 2027
NEET RANK ENHANCEMENT PROGRAM
31 YEARS experience in COACHING for competitive exams
CHAMPIONS OF SUCCESS
SHIVAPRASAD G C AIIMS MANGALAGIRI ANDRA PRADESH
MOHAN D AIIMS RAMANATHPURAM MADHURAI, TAMILNADU
LIKHA TADAP AIIMS KALYANI KOLKATA
TUSHAR G PATEL AIIMS DEOGHAR, JHARKHAND
AKSHAY M HEGDE AIIMS BATHINDA, PUNJAB
PREKSHA M S JIPMER PONDICHERRY
MANY MORE ...
COMPETITIVE EDGE
• Experienced & Rank producing Faculties
• Total 2200 Academic Hours
• Exposure to 7000 MCQ per subject
• Weekly NEET Mock Tests
• One to One Doubt Clearing Sessions
• Focus on Shortcut Tricks

Year	MBBS Admissions
2025	456
2024	448
2023	392
2022	377

UPCOMING BATCH COMMENCEMENTS 30 JUNE, 5 JULY & 9 JULY, 2026
88844 77588 | 88844 99737

ಶ್ರದ್ಧೆ ಮತ್ತು ಪರಂಪರೆಯ ಬೇರುಗಳು ಶಾಶ್ವತವಾಗಿ ಉಳಿದುಕೊಳ್ಳುತ್ತವೆ ಎಂಬುದನ್ನು ದೃಢಪಡಿಸಿದ ಅನಂತ್ ಅಂಬಾನಿ

ತಿರುಮಲದಲ್ಲಿ ಮುಡಿ ಸಮರ್ಪಿಸಿ, ಸುಪ್ರಭಾತ ಸೇವೆ ಸಲ್ಲಿಸಿದ ಅನಂತ್ ಅಂಬಾನಿ

ತಿರುಮಲ: ರಿಲಯನ್ಸ್ ಇಂಡಸ್ಟ್ರೀಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅನಂತ್ ಅಂಬಾನಿ ಅವರು ಭಾನುವಾರ ಮುಂಜಾನೆ ತಿರುಮಲದ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ಸುಪ್ರಭಾತ ಸೇವೆ ಸಲ್ಲಿಸಿದರು. ಆ ಮೂಲಕ ಭಕ್ತಿ ಮತ್ತು ಶ್ರದ್ಧೆಯನ್ನು ಅವರು ಮತ್ತೊಮ್ಮೆ ದೃಢಪಡಿಸಿದರು.

ಅನಂತ್ ಅಂಬಾನಿ ಅವರು ಶನಿವಾರ ತಡರಾತ್ರಿ 1 ಗಂಟೆಗೆ ತಿರುಮಲಕ್ಕೆ ಆಗಮಿಸಿದರು. ದೇವಾಲಯಕ್ಕೆ ಭೇಟಿ ನೀಡುವ ಲಕ್ಷಾಂತರ ಭಕ್ತರು ಆಚರಿಸುವ, ಶರಣಾಗತಿ ಮತ್ತು ಭಕ್ತಿಯ ಸಂಕೇತವಾದ, ವೆಂಕಟೇಶ್ವರ ಸ್ವಾಮಿಗೆ ಮುಡಿ ಸಮರ್ಪಣೆ ಮಾಡುವ ಶತಮಾನಗಳಷ್ಟು ಹಳೆಯ ಸಂಪ್ರದಾಯವನ್ನೂ ಅವರು ಪೂರೈಸಿದರು. ಜಗತ್ತು ಎಷ್ಟೇ ಬದಲಾದರೂ, ನಂಬಿಕೆ ಮತ್ತು ಮೂಲ ಬೇರುಗಳು ಶಾಶ್ವತವಾಗಿ ಉಳಿದುಕೊಳ್ಳುತ್ತವೆ ಎಂಬುದಕ್ಕೆ ಅವರ ಈ ಭೇಟಿ ಸಾಕ್ಷಿಯಾಯಿತು.

ನಂತರ ಬೆಳಗಿನ ಜಾವ 3.30ಕ್ಕೆ ಅನಂತ್ ಅಂಬಾನಿ ಅವರು ಪವಿತ್ರ 'ಸುಪ್ರಭಾತ ಸೇವೆ'ಯಲ್ಲಿ ಪಾಲ್ಗೊಂಡರು. ದರ್ಶನದ ನಂತರ, ದೇವಾಲಯದ ಅರ್ಚಕರು ಅವರಿಗೆ ವೇದ ಮಂತ್ರಗಳ ಮೂಲಕ ಆಶೀರ್ವದಿಸಿದರು. ತಿರುಮಲ ತಿರುಪತಿ ದೇವಸ್ಥಾನಗಳ (ಟಿಟಿಡಿ) ಕಾರ್ಯನಿರ್ವಾಹಕ ಅಧಿಕಾರಿ ಅವರಿಗೆ ಪವಿತ್ರ ಸ್ಮರಣಿಕೆ ಹಾಗೂ ಪ್ರಸಾದವನ್ನು ನೀಡಿ ಗೌರವಿಸಿದರು.ಬಳಿಕ ಅನಂತ್ ಅಂಬಾನಿ ಅವರು ದೇವಾಲಯದ ಗೋಶಾಲೆಯಲ್ಲಿ ಕೆಲಸಮಯ ಕಳೆದರು. ಅಲ್ಲಿನ ಗೋವುಗಳು ಮತ್ತು ದೇವಾಲಯದ ಆನೆಗಳೊಂದಿಗೂ ಸಮಯ ಕಳೆದರು. ಅಲ್ಲಿಂದ ತಿರುಪತಿಗೆ ತೆರಳಿ ಪದ್ಮಾವತಿ ಅಮ್ಮನವರ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿ, ತಮ್ಮ ತೀರ್ಥಯಾತ್ರೆಯನ್ನು ಸಂಪನ್ನಗೊಳಿಸಿದರು. ಬೆಳಗ್ಗೆ 6.30 ಗಂಟೆಗೆ ತಿರುಪತಿಯಿಂದ ನಿರ್ಗಮಿಸಿದರು.

ದೇಶದ ಅತ್ಯಂತ ಪವಿತ್ರ ಯಾತ್ರಾ ಸ್ಥಳಗಳಲ್ಲಿ ಒಂದಾದ ತಿರುಪತಿಯಲ್ಲಿ ನಡೆದ ಮುಂಜಾನೆಯ ಧಾರ್ಮಿಕ ವಿಧಿವಿಧಾನಗಳಿಗೆ ಸಾವಿರಾರು ಭಕ್ತರು ಸಾಕ್ಷಿಯಾದರು. ಈ ಭೇಟಿಯು ಭಾರತದ ಆಧ್ಯಾತ್ಮಿಕ ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ಪರಂಪರೆಯ ಬಗೆಗಿನ ಅನಂತ್ ಅಂಬಾನಿ ಅವರ ನಿರಂತರ ಬದ್ಧತೆಯನ್ನು ಪ್ರತಿಬಿಂಬಿಸಿತು.

ಕರ್ನಾಟಕದ ಅಡಕೆ ತಡೆಯಬೇಡಿ: ಮಹಾರಾಷ್ಟ್ರ ಸಿಎಂ

ಬೆಂಗಳೂರು: ಗುಣಮಟ್ಟ ತಪಾಸಣೆ ಹೆಸರಿನಲ್ಲಿ ಕರ್ನಾಟಕದ ಅಡಕೆ ಲಾರಿಗಳನ್ನು ಚೆಕ್‌ಪೋಸ್ಟ್‌ಗಳಲ್ಲಿ ತಡೆಯದಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅಲ್ಲಿನ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಕೆಲ ದಿನಗಳಿಂದ ಮಹಾರಾಷ್ಟ್ರದ ನಾನಾ ಭಾಗದಲ್ಲಿ ಕರ್ನಾಟಕದ ಅಡಕೆ ಹೊತ್ತ ಲಾರಿಗಳನ್ನು ತಡೆದು ನಿಲ್ಲಿಸಲಾಗಿದ್ದು, ಇದರಿಂದ ಬೆಳೆಗಾರರು ಆತಂಕಕ್ಕೊಳಗಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್ ಅವರೊಂದಿಗೆ ಈ ಬಗ್ಗೆ ಮಾತುಕತೆ ನಡೆಸಿದ್ದರು.

"ಗುಣಮಟ್ಟ ತಪಾಸಣೆ ಕಾರಣವೊಡ್ಡಿ ಏಕಾಏಕಿಯಾಗಿ ಅಡಕೆ ಲಾರಿಗಳನ್ನು ತಡೆಯಲಾಗುತ್ತಿದೆ. ಇದರಿಂದಾಗಿ ಅಡಕೆ ಆವಕದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದೆ. ನಿರ್ದಿಷ್ಟ ಸಮಸ್ಯೆಯಿದ್ದರೆ ಅದನ್ನು ಗಮನಕ್ಕೆ ತಂದು ಬಗೆಹರಿಸಿಕೊಳ್ಳಬೇಕು. ಬದಲಾಗಿ ಸಾರಾಸಗಟಾಗಿ ಅಡಕೆ ಹೊತ್ತೊಯ್ಯುವಾಗ ಲಾರಿಗಳನ್ನು ಮಾರ್ಗ ಮಧ್ಯೆ ತಡೆದು ನಿಲ್ಲಿಸುವುದು ಸೂಕ್ತವಲ್ಲ," ಎಂದು ಜೋಶಿ ಅವರು ಫಡ್ನವಿಸ್ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದರು.

ಬಳಿಕ ಮಹಾರಾಷ್ಟ್ರದ ಅಧಿಕಾರಿಗಳಿಗೆ ಈ ಸಂಬಂಧ ಸೂಚನೆ ಕೊಟ್ಟಿರುವ ಫಡ್ನವಿಸ್, ಕರ್ನಾಟಕದ ಅಡಕೆ ಲಾರಿಗಳು ಮುಂದಕ್ಕೆ ಸಂಚರಿಸಲು ಅವಕಾಶ ಮಾಡಿಕೊಡಬೇಕು ಎಂದು ಸೂಚಿಸಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಮತ್ತೆ ಯುದ್ಧಭೀತಿ »12

ವಿರೋಧದ ನಡುವೆಯೂ ಶಿವಶರಣರ ಸಮಾವೇಶ »04

ಅಯೋಧ್ಯೆ ಕಾಣಿಕೆ ಹಗರಣ: 8 ಆರೋಪಿಗಳ ನಿವಾಸಗಳ ಮೇಲೆ ದಾಳಿ »12

Muthoot Finance
ಗೋಲ್ಡ್ ಲೋನ್
ಮ್ಯಾಕ್ಸ್ ವ್ಯಾಲ್ಯೂ ಸ್ಪೀಡ್ ಸೇವಿಂಗ್ಸ್
GET UP TO 85%* OF GOLD VALUE
@ ಅತ್ಯಂತ ಕಡಿಮೆ ಬಡ್ಡಿ ದರಗಳಲ್ಲಿ
☑ EMI/ಮಾಸಿಕ ಬಡ್ಡಿ ಮರುಪಾವತಿ ಯೋಜನೆಗಳಿಗೆ ಗರಿಷ್ಠ ಸಾಲದ ಮೌಲ್ಯ (85%* ವರೆಗೆ)
☑ ಅನುಕೂಲಕರ ಮರುಪಾವತಿ ಆಯ್ಕೆಗಳು
ಹೆಚ್ಚಿನ ಮಾಹಿತಿಗಾಗಿ ಇಂದೇ ನಿಮ್ಮ ಸಮೀಪದ ಮತ್ತೂಟ್ ಫೈನಾನ್ಸ್ ಶಾಖೆಗೆ ಭೇಟಿ ನೀಡಿ
1800 202 1212
*T & C Apply

ಪ್ರಶ್ನೆ: ವ್ಯಾಪಾರದಲ್ಲಿ ಪ್ರಗತಿ ಕಾಣುತ್ತೇನೆಯೆ?

ಜನ್ಮದಿನಾಂಕ: 23.09.1989 **ನಕ್ಷತ್ರ:** ಆಶ್ಲೇಷ

ಪರಿಹಾರ: ಲಗ್ನದಲ್ಲಿ ಗುರು ಇರುವುದರಿಂದ ಒಳ್ಳೆಯ ರೀತಿಯಲ್ಲಿ ವ್ಯಾಪಾರ ನಡೆಸಿದರೆ ಹಣ ಹರಿದು ಬಂದು ತೃಪ್ತಿಯಿಂದ ಜೀವನ ನಡೆಸಲು ಅನುಗ್ರಹಿಸುತ್ತಾರೆ. 'ಶಿವಾಯ ಗುರುವೇ ನಮಃ' ಎಂಬ ವಾಕ್ಯದಂತೆ ಈಶ್ವರನ ಆರಾಧನೆ ಮಾಡಿರಿ. ಪಾರ್ವತಿ ಸಾಂಬಸದಾಶಿವನ ದರ್ಶನ ಪಡೆಯಿರಿ. ಇಚ್ಛಿತ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುತ್ತವೆ.

ನೀವೂ ಪ್ರಶ್ನೆ ಕೇಳಬಹುದು...

ನೀವು ನಿಮ್ಮ ವೈಯಕ್ತಿಕ ಪ್ರಶ್ನೆಯನ್ನು ಇಲ್ಲಿ ಕೇಳಬಹುದು. **ರಾಜಗುರು ಬಿ.ಎಸ್. ದ್ವಾರಕನಾಥ್** ಅವರು ನಿಮ್ಮ ಒಂದು ಪ್ರಶ್ನೆಗೆ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಯನ್ನು ಜನ್ಮದಿನಾಂಕ, ಸಮಯ (ಬೆಳಗ್ಗೆ/ಮಧ್ಯಾಹ್ನ/ರಾತ್ರಿ), ಹುಟ್ಟಿದ ಸ್ಥಳ, ರಾಶಿ-ನಕ್ಷತ್ರದೊಂದಿಗೆ ಈ ಕೆಳಗಿನ ನಂಬರ್‌ಗೆ ವಾಟ್ಸ್ಆ್ಯಪ್ ಮಾಡಿ. ದಿನಕ್ಕೊಬ್ಬರ ಪ್ರಶ್ನೆಗೆ ಉತ್ತರ ಪ್ರಕಟಿಸಲಾಗುವುದು.

ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 29-06-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಜ್ಯೇಷ್ಠ.
ಪಕ್ಷ: ಶುಕ್ಲ. **ಮಳೆ ನಕ್ಷತ್ರ:** ಆರಿದ್ರಾ.
ನಿತ್ಯನಕ್ಷತ್ರ: ಮೂಲ.
ತಿಥಿ: ಪೂರ್ಣಿಮಾ.
ಯೋಗ: ಶುಕ್ಲ. **ಕರಣ:** ಭದ್ರ.
ವಾರ: ಸೋಮವಾರ.

ರಾಹು ಕಾಲ: ಬೆ. 7.30 - 9.00
ಗುಳಿಕ ಕಾಲ: ಮ. 1.30-3.00
ಯಮಗಂಡ ಕಾಲ: ಬೆ. 10.30-12.00
ಸೂರ್ಯ ಉದಯ: ಬೆ. 5.57
ಸೂರ್ಯ ಅಸ್ತ: ಸಂ. 6.48

ತೆರಿಗೆ ಕಡಿಮೆಯಾದರೂ ಜನರ ಆರೋಗ್ಯ ಮುಖ್ಯ ಎಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಅಮಲು ಪದಾರ್ಥವಿದ್ದರೆ ಪಾನ್ ಮಸಾಲಾ ಬ್ಯಾನ್

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದಲ್ಲಿ ಮಾರಾಟವಾಗುತ್ತಿರುವ ಗುಟ್ಕಾ, ಪಾನ್ ಮಸಾಲಾಗಳಲ್ಲಿ ಅಮಲು ಬರುವ ಪದಾರ್ಥಗಳ ಬೆರಕೆ ಕಂಡುಬಂದರೆ ಅವುಗಳನ್ನು ನಿಷೇಧಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದರು.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 31ನೇ ಸಂಸ್ಥಾಪನಾ ದಿನಾಚರಣೆ ಹಾಗೂ ನಶಾಮುಕ್ತ ಭಾರತ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

''ಪಾನ್ ಮಸಾಲಾ, ಗುಟ್ಕಾ, ಅಡಕೆ ಮತ್ತಿತರ ಪದಾರ್ಥಗಳಲ್ಲಿ ಅಮಲು ಬರುವ ವಸ್ತುಗಳನ್ನು ಬೆರಕೆ ಮಾಡಿ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಇದು ನಿಜವಾಗಿದ್ದರೆ ಇಂತಹ ಕೆಲಸವನ್ನು ತಕ್ಷಣ ನಿಲ್ಲಿಸಬೇಕು. ಇಲ್ಲದಿದ್ದರೆ ಸರಕಾರಕ್ಕೆ ತೆರಿಗೆ ಕಡಿಮೆಯಾದರೂ ಚಿಂತೆಯಿಲ್ಲ, ಅಂತಹ ಉತ್ಪನ್ನಗಳ ಮಾರಾಟ ನಿಷೇಧ ಮಾಡಲಾಗುವುದು,'' ಎಂದರು.

''ಮಾದಕದ್ರವ್ಯ ಮುಕ್ತ ಕರ್ನಾಟಕ ರೂಪಿಸುವುದು ನಮ್ಮ ಗುರಿ. ಅದಕ್ಕಾಗಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಮಾದಕ ವ್ಯಸನ ತಡೆಯುವುದು ದೊಡ್ಡ ಸವಾಲಾಗಿದೆ. ನಾವೆಲ್ಲರೂ ಒಂದಾಗಿ ಯುವ ಪೀಳಿಗೆ ಈ ವ್ಯಸನದ ಸುಳಿಗೆ ಸಿಲುಕದಂತೆ ತಡೆಯೋಣ. ಇದು ಎಲ್ಲರ ಕರ್ತವ್ಯವಾಗಿದೆ. ನೀವು ಜೀವ ರಕ್ಷಣೆಯ ವೃತ್ತಿ ಆಯ್ಕೆ ಮಾಡಿಕೊಂಡಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ,'' ಎಂದು ಹೇಳಿದರು.

ಬೆಂಗಳೂರಿನಲ್ಲಿ ಭಾನುವಾರ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 31ನೇ ಸಂಸ್ಥಾಪನಾ ದಿನಾಚರಣೆ ಹಾಗೂ ನಶಾಮುಕ್ತ ಭಾರತ ಅಭಿಯಾನ ಕಾರ್ಯಕ್ರಮದಲ್ಲಿ ಗಣ್ಯರು ಭಾಗವಹಿಸಿದ್ದರು.

ರಾಜ್ಯದಲ್ಲೇ ಹೆಚ್ಚು ಮೆಡಿಕಲ್ ಕಾಲೇಜು: ''ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ದೇಶದಲ್ಲೇ ಅತಿ ದೊಡ್ಡ ಆರೋಗ್ಯ ವಿಶ್ವವಿದ್ಯಾಲಯವಾಗಿದ್ದು, ಅತಿ ಹೆಚ್ಚು ವೈದ್ಯರನ್ನು ಸಮಾಜಕ್ಕೆ ನೀಡಿದೆ. ರಾಜ್ಯದಲ್ಲಿ 70 ವೈದ್ಯಕೀಯ ಕಾಲೇಜುಗಳಿದ್ದು, ದೇಶದ ಬೇರೆ ಯಾವುದೇ ರಾಜ್ಯದಲ್ಲಿ ಇಷ್ಟು ವೈದ್ಯ ಕಾಲೇಜುಗಳಿಲ್ಲ, ರಾಜೀವ್ ಗಾಂಧಿ ವಿವಿಯನ್ನು ಆರಂಭಿಸಿದ ವೀರಪ್ಪ ಮೊಯ್ಲಿ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ,'' ಎಂದರು.

''ವೈದ್ಯಕೀಯ ಶಿಕ್ಷಣ ಎಲ್ಲರಿಗೂ ಸಿಗುವಂತಾಗಬೇಕು. ಬೆಂಗಳೂರಿನ ಹವಾಮಾನ ದೇಶದ ಬೇರೆ ಯಾವುದೇ ಭಾಗದಲ್ಲಿ ಇಲ್ಲ, ಹೀಗಾಗಿ, ಇದನ್ನು ಹವಾನಿಯಂತ್ರಿತ ನಗರ ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಇರುವಷ್ಟು ಆಸ್ಪತ್ರೆಗಳು ಬೇರೆ ಯಾವ ರಾಜ್ಯದಲ್ಲೂ ಇಲ್ಲ, ಕರ್ನಾಟಕ ದೇಶದ ವೈದ್ಯಕೀಯ ರಾಜಧಾನಿಯೂ ಆಗಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯ ನೂತನ ಕ್ಯಾಂಪಸ್‌ಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಶೀಘ್ರದಲ್ಲೇ ಸ್ಥಳಾಂತರವಾಗಲಿದೆ,'' ಎಂದು ಸಿಎಂ ಪ್ರಕಟಿಸಿದರು.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್, ಆಂಧ್ರಪ್ರದೇಶದ ರಾಜ್ಯಪಾಲ ನ್ಯಾ. ಎಸ್.ಅಬ್ದುಲ್ ನಜೀರ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್, ಕುಲಸಚಿವ ಅರ್ಜುನ್ ಒಡೆಯರ್, ಡಾ.ರಿಯಾಜ್ ಬಾಷಾ ಉಪಸ್ಥಿತರಿದ್ದರು.

ಮಾದಕವಸ್ತುಗಳ ಮಟ್ಟ ಹಾಕಿ

ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮಾತನಾಡಿ, ''ಮಾದಕವಸ್ತುಗಳು ಕೇವಲ ಒಬ್ಬ ವ್ಯಕ್ತಿಯನ್ನು ನಾಶ ಮಾಡುವುದಿಲ್ಲ, ಬದಲಾಗಿ ದೇಶದ ಉತ್ಪಾದನಾ ಸಾಮರ್ಥ್ಯ, ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತದೆ. ಮಾದಕ ವಸ್ತುಗಳನ್ನು ಮಟ್ಟ ಹಾಕುವುದು ಪ್ರತಿಯೊಬ್ಬರ ಕರ್ತವ್ಯ. ಇದಕ್ಕಾಗಿ ಎಲ್ಲರೂ ಕೈಜೋಡಿಸಬೇಕು,'' ಎಂದು ಕರೆ ನೀಡಿದರು. ''ಶಾಲಾ, ಕಾಲೇಜುಗಳಲ್ಲಿ ಮಾದಕವಸ್ತುಗಳ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕು. ಈಗಾಗಲೇ ದಿಲ್ಲಿ ವಿಶ್ವವಿದ್ಯಾಲಯ ಮಾದಕದ್ರವ್ಯ ಮುಕ್ತ ಕ್ಯಾಂಪಸ್ ಎಂದು ಘೋಷಿಸಿದೆ. ಅದೇ ರೀತಿ ಬೆಂಗಳೂರು ಸೇರಿದಂತೆ ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕ್ಯಾಂಪಸ್ ನಶಾಮುಕ್ತವಾಗಬೇಕು,'' ಎಂದು ಸಲಹೆ ನೀಡಿದರು. ''ನಶಾಮುಕ್ತ ಅಭಿಯಾನ, ಯುವ ಶುದ್ಧಿ ಅಭಿಯಾನ ಉನ್ನತ ಶಿಕ್ಷಣದ ಜತೆಗೆ ನೇರ ಸಂಬಂಧ ಹೊಂದಿದೆ. ವಿವಿಗಳು ಪದವಿ ನೀಡುವ ಜತೆಗೆ ಭವಿಷ್ಯದ ಯುವನಾಯಕರಲ್ಲಿ ಮೌಲ್ಯಗಳನ್ನು ಬೆಳೆಸಬೇಕು,'' ಎಂದು ಮನವಿ ಮಾಡಿದರು.

ಮಾದಕ ವ್ಯಸನ ದೇಶಕ್ಕೆ ಮಾರಕ

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮಾತನಾಡಿ, ''ಮಾದಕ ವ್ಯಸನ ಎನ್ನುವುದು ಕುಟುಂಬ, ಸಮಾಜ ಹಾಗೂ ದೇಶದ ಭವಿಷ್ಯಕ್ಕೆ ಮಾರಕವಾಗಿದೆ. ಶಿಕ್ಷಣ ಸಂಸ್ಥೆಗಳು ನಶಾಮುಕ್ತ ಕ್ಯಾಂಪಸ್ ನಿರ್ಮಿಸಿ ವ್ಯಸನಗಳಿಂದ ಯುವಜನರನ್ನು ರಕ್ಷಿಸಬೇಕು,'' ಎಂದು ಸಲಹೆ ನೀಡಿದರು.

ಆರೋಗ್ಯ ಕ್ಷೇತ್ರದಲ್ಲಿ ರಾಜ್ಯ ಬಲಿಷ್ಠ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ಆರೋಗ್ಯ ಕ್ಷೇತ್ರ ಬಲಿಷ್ಠವಾಗಿದ್ದು, ಹೊರಗಿನಿಂದ ಜನರು ಹೆಲ್ತ್ ಟೂರಿಸಂಗೆ ಬರುತ್ತಿದ್ದಾರೆ. ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಸದೃಢವಾಗಿದ್ದು, ಆದ್ಯತೆ ಮೇರೆಗೆ ಅವುಗಳ ಅಭಿವೃದ್ಧಿ ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಸದಾಶಿವನಗರದ ತಮ್ಮ ನಿವಾಸದಲ್ಲಿ ಭಾನುವಾರ ಪಲ್ಸ್ ಪೋಲಿಯೊ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ''ಕರ್ನಾಟಕದಷ್ಟು ಗುಣಮಟ್ಟದ ಆರೋಗ್ಯ ಸೇವೆ ಭಾರತದಲ್ಲಿ ಎಲ್ಲಿಯೂ ಇಲ್ಲ. ಆರೋಗ್ಯಕರ ಕರ್ನಾಟಕ ನಿರ್ಮಾಣಕ್ಕೆ ಸರಕಾರವು ಪ್ರತಿ ಹಂತದಲ್ಲಿ ಕಾರ್ಯಕ್ರಮ ರೂಪಿಸಿದೆ. ರಾಜ್ಯದ ಆರೋಗ್ಯ ಸೇವಾ ಕ್ಷೇತ್ರ ಶ್ರೇಷ್ಠತೆ ಸಾಧಿಸಿರುವ ಕಾರಣಕ್ಕೆ ಇಲ್ಲಿನ ಹೆಲ್ತ್ ಟೂರಿಸಂ ಬೆಳವಣಿಗೆಯಾಗಿದೆ,'' ಎಂದರು.

''ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ 13,940 ವೈದ್ಯರು, 1.07 ಲಕ್ಷ ಆರೋಗ್ಯ ಸೇವೆ ಸಿಬ್ಬಂದಿ ತಯಾರಾಗುತ್ತಾರೆ. ಇಡೀ ಭಾರತದಲ್ಲಿ ಇಷ್ಟು ಗುಣಮಟ್ಟದ ವೈದ್ಯಕೀಯ ಸೇವೆ ಎಲ್ಲೂ ಇಲ್ಲ. ನಮ್ಮ ರಾಜ್ಯದ ಕಾಲೇಜುಗಳಲ್ಲಿ ಓದಿ ವೈದ್ಯರಾದವರು ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ನಮ್ಮ ಸರಕಾರ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಸ್ತಾವನೆಗಳಿಗೆ ಆದ್ಯತೆ ಮೇರೆಗೆ ಒಪ್ಪಿಗೆ ನೀಡುತ್ತಿದೆ,'' ಎಂದು ಹೇಳಿದರು.

''ಮಕ್ಕಳ ಭವಿಷ್ಯಕ್ಕಾಗಿ ಸರಕಾರ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮ ರೂಪಿಸಿದ್ದು, ಈ ಬಾರಿ 60.84 ಲಕ್ಷ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡಲು ಸರಕಾರ ತೀರ್ಮಾನಿಸಿದೆ. 36,686 ಲಸಿಕಾ ಕೇಂದ್ರಗಳು, 988 ಸಂಚಾರಿ ಕೇಂದ್ರಗಳು, 2,125 ಪಾಯಿಂಟ್‌ಗಳೂ ಸೇರಿದಂತೆ ಒಟ್ಟು 1,14,213 ಲಸಿಕಾ ಕಾರ್ಯಕರ್ತರು ಕೆಲಸ ಮಾಡುತ್ತಿದ್ದಾರೆ. ಅನೇಕ ಎನ್‌ಜಿಒಗಳು ಅಭಿಯಾನಕ್ಕೆ ಕೈಜೋಡಿಸಿವೆ. ದೇಶ ಸೇವೆಯ ಈ ಕಾರ್ಯಕ್ರಮಕ್ಕೆ ಎಲ್ಲರ ಸಹಕಾರ ಅಗತ್ಯ,'' ಎಂದರು.

ಪಲ್ಸ್ ಪೋಲಿಯೊ ಲಸಿಕೆ ಕಾರ್ಯಕ್ರಮಕ್ಕೆ ಸಿಎಂ ಚಾಲನೆ

ಮೊಮ್ಮಗಳಿದ್ದಾಳೆಂದು...

''ನನ್ನ ಮೊಮ್ಮಗಳಿಗೆ ಒಂದು ತಿಂಗಳು. ಹೀಗಾಗಿ, ಪೋಲಿಯೊ ಕಾರ್ಯಕ್ರಮ ಚಾಲನೆಗೆ ಆರೋಗ್ಯ ಸಚಿವ ಖಾದರ್ ನನ್ನ ಮನೆಯನ್ನೇ ಆಯ್ಕೆ ಮಾಡಿದ್ದಾರೆ. ಮುಖ್ಯಮಂತ್ರಿ ಮನೆಯಿಂದ ಈ ಅಭಿಯಾನ ಆರಂಭವಾಗಲಿ ಎಂಬುದು ಖಾದರ್ ಅವರ ಸದಾಶಯ. ಅವರು ಬಹಳ ಬುದ್ಧಿವಂತರು,'' ಎಂದು ಸಿಎಂ ಸಂತಸ ವ್ಯಕ್ತಪಡಿಸಿದರು.

ಮಾಜಿ ಸಿಎಂ ಸಿದ್ದರಾಮಯ್ಯ ನಿವಾಸದಲ್ಲಿ ಭರ್ಜರಿ ಬಾಡೂಟ

ಮೈಸೂರು: ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ ಬಳಿಕ ಮೊದಲ ಬಾರಿಗೆ ಮೈಸೂರಿಗೆ ಭೇಟಿ ನೀಡಿದ ಹಿನ್ನೆಲೆಯಲ್ಲಿ ಭಾನುವಾರ ನಗರದ ಟಿ.ಕೆ.ಲೇಔಟ್‌ನಲ್ಲಿರುವ ಅವರ ನಿವಾಸದಲ್ಲಿ ಭರ್ಜರಿ ಬಾಡೂಟ ಏರ್ಪಡಿಸಲಾಗಿತ್ತು.

ಮೈಸೂರು ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಎಸ್‌ಐಆರ್ ಸಮಾವೇಶದಲ್ಲಿ ಪಾಲ್ಗೊಂಡಿರುವ ಪ್ರತಿನಿಧಿಗಳಿಗಾಗಿ ಈ ವಿಶೇಷ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಇದಕ್ಕಾಗಿ ನಿವಾಸದ ಮುಂಭಾಗದಲ್ಲಿ ಬೃಹತ್ ಜರ್ಮನ್ ಟೆಂಟ್ ನಿರ್ಮಿಸಿ, ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. ಸಿದ್ದರಾಮಯ್ಯ ಅವರ ಮೈಸೂರು ನಿವಾಸದಲ್ಲಿ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಬಾಡೂಟ ಆಯೋಜಿಸಿರುವುದು ಇದೇ ಮೊದಲ ಬಾರಿಗೆ ಎನ್ನಲಾಗಿದೆ. ಪಕ್ಷದ ಆಯ್ದ ಪದಾಧಿಕಾರಿಗಳಿಗೆ ಆಹ್ವಾನ ನೀಡಲಾಗಿತ್ತು. ಸಸ್ಯಾಹಾರ ಭೋಜನವೂ ಇತ್ತು.

ವೀರಲೋಕ ಪುಸ್ತಕ ಸಂತೆ ಸಮಾರೋಪದಲ್ಲಿ ಮಲ್ಲೇಪುರಂ ಜಿ.ವೆಂಕಟೇಶ್

ಮಕ್ಕಳ ಕೈಯಲ್ಲಿ ಪುಸ್ತಕ ಹಿಡಿಸೋಣ

■ ವಿಕ ಸುದ್ದಿಲೋಕ ತುಮಕೂರು

ಮಕ್ಕಳ ಕೈಯಲ್ಲಿ ಪುಸ್ತಕ ಹಿಡಿಸುವ ಪ್ರಯತ್ನ ಮಾಡಬೇಕು. ಆಗ ಅವರು ಪುಸ್ತಕ ಓದುವ ಅಭ್ಯಾಸ ರೂಢಿಸಿಕೊಳ್ಳುವರು ಎಂದು ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ್ ಹೇಳಿದರು.

ನಗರದ ಅಮಾನಿಕೆರೆಯಲ್ಲಿ ಭಾನುವಾರ ವೀರಲೋಕ ಪುಸ್ತಕ ಸಂತೆ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ''ಮಕ್ಕಳಿಗೆ ಪುಸ್ತಕ ಓದುವ ಅಭ್ಯಾಸ ಮಾಡಿಸಬೇಕು. ಅದು ಓದುಗರನ್ನು ತಲುಪುವ ಮಾರ್ಗ,'' ಎಂದರು.

''ಪುಸ್ತಕ ಲೋಕಕ್ಕೆ ಜಾತಿ, ಧರ್ಮ ಏನೂ ಇಲ್ಲ, ವ್ಯಕ್ತಿ ವ್ಯಕ್ತಿಯಾಗುವುದಲ್ಲ, ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು. ಪುಸ್ತಕವಿಲ್ಲದೆ ವ್ಯಕ್ತಿತ್ವ ರೂಪಿತಗೊಳ್ಳುವುದಿಲ್ಲ, ಪ್ರತಿಯೊಬ್ಬರ ಮನೆಯಲ್ಲೂ ಪುಸ್ತಕಗಳು ಇರಬೇಕು. ಪುಸ್ತಕದಿಂದ ಬರುವ ಭಾವಲೋಕಕ್ಕೆ ಯಾವುದೂ ಸಾಟಿಯಿಲ್ಲ,'' ಎಂದರು.

''ಗ್ರಂಥಾಲಯಗಳಿಗೆ ಸಹಾಯಧನ ನೀಡುವುದು, ರಿಯಾಯಿತಿ ದರದಲ್ಲಿ ಪುಸ್ತಕ ಪೂರೈಸುವ ಹೊಣೆಗಾರಿಕೆ ಸರಕಾರ ಮತ್ತು ನಮ್ಮೆಲ್ಲರದ್ದು. ಪುಸ್ತಕ ಓದು ಬೇರೆಯದ್ದೇ ಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ಸಂಗೀತ ಮತ್ತು ಸಾಹಿತ್ಯ ಬದುಕಿನ ಜಾತ್ರೆಯಲ್ಲಿ ನೆಮ್ಮದಿ, ಶಾಂತಿ ನೀಡುತ್ತವೆ. ಅಂತಹ ಒಂದು ನೆಮ್ಮದಿಯನ್ನು ವೀರಲೋಕ ಪುಸ್ತಕ ಸಂತೆ ನೀಡಿದೆ. ಪುಸ್ತಕ ಸಂತೆ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸೇರಿ ಮಾಡಬೇಕಾದ ಕೆಲಸ. ಅಂತಹದ್ದನ್ನು ಏಕವ್ಯಕ್ತಿಯಾಗಿ ವೀರಕಪುತ್ರ ಎಂ.ಶ್ರೀನಿವಾಸ ಮಾಡುತ್ತಿದ್ದಾರೆ,'' ಎಂದು ಶ್ಲಾಘಿಸಿದರು.

ಪುಸ್ತಕ ಸಂತೆ ಸಂಚಾಲಕ ಆರ್.ಕೆ. ಶ್ರೀನಿವಾಸ್ ಇದ್ದರು.

ವಿಧಾನಸಭೆಯಲ್ಲಿ ಗಮನ ಸೆಳೆಯುವೆ

ಶಾಸಕ ಬಿ.ಸುರೇಶ್‌ಗೌಡ ಮಾತನಾಡಿ, ''ಶಾಸಕರ ಅನುದಾನದಲ್ಲಿ ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸಿ, ಪುಸ್ತಕಗಳನ್ನು ನೀಡಿದ್ದೇನೆ. ಕಾಲೇಜು ದಿನಗಳಲ್ಲಿ ಅಂಕಕ್ಕಷ್ಟೇ ಓದುತ್ತಿದ್ದೆ. ಸಾಹಿತಿಗಳ ಸಂಪರ್ಕದಿಂದ ಪುಸ್ತಕ ಓದುವ ಅಭ್ಯಾಸ ರೂಢಿಸಿಕೊಂಡೆ. ಮೊಬೈಲ್ ಬಿಟ್ಟು ಪುಸ್ತಕ ಸಂಸ್ಕೃತಿ ಬೆಳೆಸಬೇಕು. ಅಂಕಗಳಿಗಷ್ಟೇ ಓದು ಸೀಮಿತವಾಗಬಾರದು. ಪುಸ್ತಕ ಓದಿನಿಂದ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ,'' ಎಂದರು. ''ಎಲ್ಲದರಲ್ಲೂ ನಾವು ನಂಬರ್ 1 ಇದ್ದೇವೆ. ಆದರೆ ಪುಸ್ತಕ ಓದುವಲ್ಲಿ ಹಿಂದಿದ್ದೇವೆ. ಇದಕ್ಕೆ ಕಾರಣ ಕರ್ನಾಟಕ ಸರಕಾರ. ಕಳೆದ 4 ವರ್ಷದಿಂದ ಪುಸ್ತಕ ಖರೀದಿ ಮಾಡಿಲ್ಲ, ಸಾಹಿತ್ಯ ಕ್ಷೇತ್ರವನ್ನು ನಿರ್ಲಕ್ಷಿಸಿದೆ. ಸಾಹಿತ್ಯ ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡುವಂತೆ ವಿಧಾನಸಭೆಯಲ್ಲಿ ಗಮನ ಸೆಳೆಯುತ್ತೇನೆ,'' ಎಂದರು.

ಸ್ವಾಭಿಮಾನ ಶೂನ್ಯದ ಸಂದರ್ಭದಲ್ಲಿ ಪುಸ್ತಕ ಸಂತೆ ಮಹತ್ವ ಪಡೆದಿದೆ. ಓದುಗರಿಲ್ಲವೆಂಬ ಸುಳ್ಳನ್ನು ತೆಗೆದು ಹಾಕಿದ್ದೇವೆ. ತುಮಕೂರಿಗರ ಓದಿನ ಹಸಿವು ನಿವಾರಣೆ ಆಗಿದೆ.

– **ವೀರಕಪುತ್ರ, ಎಂ. ಶ್ರೀನಿವಾಸ್** ಪುಸ್ತಕ ಸಂತೆ ರೂವಾರಿ

ಪುಸ್ತಕ ಒಬ್ಬ ವ್ಯಕ್ತಿ ಇದ್ದಂತೆ. ಒಂದೊಂದು ಪುಸ್ತಕದಲ್ಲಿ ಒಂದೊಂದು ಜೀವನ ತೆರೆದುಕೊಂಡಿರುತ್ತದೆ. ಪುಸ್ತಕ ಕೊಳ್ಳಲು ಜನ ಸಿದ್ಧರಿದ್ದಾರೆ. ಅದಕ್ಕೆ ಬೇಕಾದ ವ್ಯವಸ್ಥೆ ರೂಪಿಸಲು ಸರಕಾರ ಮುಂದೆ ಬರಬೇಕು.

– **ಅಗ್ರಹಾರ ಕೃಷ್ಣಮೂರ್ತಿ** ಲೇಖಕ

ಪುಸ್ತಕ ಸಂತೆ ಯಶಸ್ವಿಯಾಗಿದೆ. ಸುಮಾರು 60 ಲಕ್ಷ ರೂ. ಮೌಲ್ಯದ ಪುಸ್ತಕಗಳು ಖರೀದಿ ಆಗಿವೆ. 1.25 ಲಕ್ಷ ಪುಸ್ತಕ ಪ್ರೇಮಿಗಳು ಭೇಟಿ ನೀಡಿದ್ದಾರೆ.

– **ಕೆ.ಎಸ್.ಸಿದ್ದಲಿಂಗಪ್ಪ** ಜಿಲ್ಲಾಧ್ಯಕ್ಷ, ಕಸಾಪ

ಕಾರು ಸ್ಫೋಟಿಸಿಕೊಂಡು ಯುವಕ ಸಜೀವ ದಹನ ಪ್ರಕರಣ | ಪೊಲೀಸರ ಮುಂದೆ ರಮ್ಯಾ ಹೇಳಿಕೆ

ಚಾಕುವಿನಿಂದ ಕತ್ತು ಕೊಯ್ಯಲು ಬಂದಾಗ ತಪ್ಪಿಸಿಕೊಂಡೆ

■ ವಿಕ ಸುದ್ದಿಲೋಕ ತುಮಕೂರು

ಕಾರು ಸ್ಫೋಟಿಸಿಕೊಂಡು ಪ್ರೇಮಿ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಫೋಟಕ ಪತ್ತೆಯಾಗಿದ್ದು, ಮಾದರಿಯನ್ನು ಎಫ್‌ಎಸ್‌ಎಲ್‌ಗೆ ರವಾನಿಸಲಾಗಿದೆ.

ಶಿರಾ ತಾಲೂಕಿನ ಜೋಗಿಹಳ್ಳಿ ಸಮೀಪ ಕಾರು ಸ್ಫೋಟದ ಸ್ಥಳದಲ್ಲಿ ಶನಿವಾರ ತಡರಾತ್ರಿ ಸ್ಫೋಟಕ ಪತ್ತೆಯಾಗಿದೆ. ಪಟಾಕಿ ಮದ್ದು ತುಂಬಿದ್ದ ಮಾಹಿತಿ ಸಿಕ್ಕಿದ್ದು, ಜಿಲೆಟಿನ್ ಇತ್ತಾ ಎಂಬ ಶಂಕೆಯೂ ವ್ಯಕ್ತವಾಗಿದೆ. ಸುಲಿದ ಮೊಟ್ಟೆ ಮಾದರಿ ಮೃದುವಾಗಿದ್ದ ವಸ್ತುವಿನಲ್ಲಿ ಮದ್ದು ತುಂಬಿಸಿ ಮೇಲ್ಭಾಗವನ್ನು ದಾರದಲ್ಲಿ ಕಟ್ಟಲಾಗಿತ್ತು.

ಕಾರಿನೊಂದಿಗೆ ಸ್ಫೋಟಿಸಿಕೊಂಡು ಸಜೀವ ದಹನಗೊಂಡ ನಾಗೇಂದ್ರನ ಮರಣೋತ್ತರ ಪರೀಕ್ಷೆ ಭಾನುವಾರ ಪೂರ್ಣಗೊಂಡಿದ್ದು, ಕುಟುಂಬದವರಿಗೆ ಮೃತದೇಹ ಹಸ್ತಾಂತರಿಸಲಾಯಿತು. ಆಂಬ್ಯುಲೆನ್ಸ್‌ನಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಹೆಬ್ಬುಳ ಗ್ರಾಮಕ್ಕೆ ಮೃತದೇಹ ರವಾನಿಸಲಾಯಿತು.

ರಮ್ಯಾ ವಿಚಾರಣೆ: ಪ್ರಾಣಾಪಾಯದಿಂದ ಪಾರಾದ ಯುವತಿ ರಮ್ಯಾ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ಭಾನುವಾರ ಪೊಲೀಸರು ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಂಡಿದ್ದಾರೆ. ವಿಚಾರಣೆ ವೇಳೆ ರಮ್ಯಾ, ತನ್ನನ್ನು ನಾಗೇಂದ್ರ ಬಲವಂತವಾಗಿ ಬೆಂಗಳೂರಿನಿಂದ ಕರೆತಂದ ಬಗ್ಗೆ ಮಾಹಿತಿ ನೀಡಿದ್ದಾರೆಂದು ತಿಳಿದಿದೆ.

ಎಫ್‌ಎಸ್‌ಎಲ್‌ಗೆ ಸ್ಫೋಟಕ ರವಾನೆ

''ಶನಿವಾರ ಬೆಳಗ್ಗೆ 7.30 ಸುಮಾರು ನನ್ನ ಬಾಡಿಗೆ ಮನೆಗೆ ಬಂದ ನಾಗೇಂದ್ರ ನೀನು ಪ್ರೀತಿಸಿ ಮೋಸ ಮಾಡಿದ್ದೀಯ. ನಿನ್ನನ್ನು ಜೀವಂತ ಬಿಡಲ್ಲವೆಂದು ಚಾಕು ತೆಗೆದುಕೊಂಡು ಹತ್ತಿರ ಬಂದ. ನನ್ನ ಗೆಳತಿ ಇಲ್ಲಿ ಗಲಾಟೆ ಮಾಡಬೇಡ, ಮರ್ಯಾದೆಯಿಂದ ಹೊರಗೆ ಹೋಗು ಎಂದು ಹೇಳಿದಳು. ಆಗ ಆತ ಆಕೆಗೆ ಚಾಕುವಿನಿಂದ ತಿವಿಯಲು ಹೋದ. ಆವಳಿಗೆ ಏನೂ ಮಾಡಬೇಡ, ನಾನು ನಿನ್ನೊಂದಿಗೆ ಬರುತ್ತೇನೆ, ಮದುವೆಯಾಗುತ್ತೇನೆಂದು ಹೇಳಿದೆ. ಮನೆಯಲ್ಲೇ ಕುಳಿತು ಕ್ಯಾಬ್ ಬುಕ್ ಮಾಡಿದ. ಬಳಿಕ ಆತನೊಂದಿಗೆ ಹೊರಟೆ,'' ಎಂದು ರಮ್ಯಾ ಹೇಳಿಕೆ ನೀಡಿದ್ದಾರೆ.

ಮಧ್ಯಾಹ್ನ 1.30ರ ಸುಮಾರಿಗೆ ಬೆಂಗಳೂರು ಪೊಲೀಸರು ಕ್ಯಾಬ್ ಚಾಲಕನಿಗೆ ಫೋನ್ ಮಾಡಿದ್ದರಿಂದ ಕಾರು ನಿಲ್ಲಿಸಿದರು. ಆ ವೇಳೆ ನಾಗೇಂದ್ರ ಏಕಾಏಕಿ ಬ್ಯಾಗ್‌ನಿಂದ ಚಾಕು ತೆಗೆದು ನನ್ನ ಎಡಗೈ ತೋಳಿನ ಭಾಗ ಕೊಯ್ದ. ಸಾಯಿಸುವ ಉದ್ದೇಶದಿಂದ ಕುತ್ತಿಗೆ ಕೊಯ್ಯಲು ಬಂದಾಗ ತಪ್ಪಿಸಿಕೊಂಡಿದ್ದಕ್ಕೆ ತಲೆಯ ಹಿಂಭಾಗಕ್ಕೆ ಚಾಕುವಿನಿಂದ ಪೆಟ್ಟು ಬಿತ್ತು. ತಕ್ಷಣ ಚಾಲಕ ಕೆಳಗೆ ಇಳಿದರು. ನಾಗೇಂದ್ರ ಚಾಲಕನಿಗೂ ಹೊಡೆದ. ಬಾಂಬ್ ತೆಗೆದು ಲೈಟರ್‌ನಿಂದ ಹಚ್ಚಲು ಪ್ರಯತ್ನಿಸಿದ. ಅದನ್ನು ಕಿತ್ತು ಕಾರಿನಲ್ಲಿ ಹಾಕಿ ಕೂಡಲೇ ಹೊರಬಂದೆ. ಚಾಲಕ ಹಾಗೂ ಅಲ್ಲಿದ್ದ ಕೆಲವರು ನಾಗೇಂದ್ರನನ್ನೂ ಹೊರಗೆ ಎಳೆದುಕೊಂಡರು. ನಾಗೇಂದ್ರ ಇನ್ನೊಂದು ಬಾಂಬ್‌ಗೆ ಲೈಟರ್‌ನಿಂದ ಹಚ್ಚಲು ಪ್ರಯತ್ನಿಸಿದಾಗ ಜನ ದೂರ ಓಡಿದರು. ನಾನು ಎಷ್ಟು ಹೇಳಿದರೂ ಕೇಳಲಿಲ್ಲ. ಆಷ್ಟೊತ್ತಿಗೆ ನನಗೆ ಹೆಚ್ಚು ರಕ್ತ ಬರುತ್ತಿದ್ದರಿಂದ ಬೇರೆಯವರೊಂದಿಗೆ ಮುಂದೆ ಹೋದೆ, ಚಾಲಕನಿಗೂ ದೂರ ಹೋಗುವಂತೆ ತಿಳಿಸಿದೆ,'' ಎಂದು ರಮ್ಯಾ ಪೊಲೀಸರಿಗೆ ತಿಳಿಸಿದ್ದಾರೆ.

ಆದರೆ ಚಾಲಕ ಪ್ರವೀಣ್, ''ನಾನೇ ಬಾಂಬ್ ಕಿತ್ತು ಹೊರಗೆ ಎಸೆದಿದ್ದೆ,'' ಎಂದಿದ್ದರು. ರಮ್ಯಾ ತಾನು ಕಸಿದು ಕಾರೊಳಗೆ ಎಸೆದಿರುವುದಾಗಿ ಹೇಳಿರುವುದು ಗೊಂದಲಕ್ಕೆ ಕಾರಣವಾಗಿದೆ.

KSIIDC
ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.49, 4ನೇ ಮಹಡಿ, ಪೂರ್ವ ಭಾಗ, "ಖನಿಜ ಭವನ", ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01. ದೂರವಾಣಿ: 22258131-133, 22254330
ಇ–ಮೇಲ್: murthy.ksiidc@gmail.com ವೆಬ್‌ಸೈಟ್: https://ksiidc.karnataka.gov.in

ಇ–ಹರಾಜು ಪ್ರಕಟಣೆ

ನಂದಿನಿ ಬಡಾವಣೆ, ಎಸ್‌ಎಫ್‌ಹೆಚ್‌ಎಸ್ ಎಕ್ಸ್‌ಟೆನ್ಷನ್, ಬೆಂಗಳೂರು –560096 ಇಲ್ಲಿರುವ ಬ್ಲಾಕ್ ಸಂಖ್ಯೆ 47 ಮತ್ತು ಬ್ಲಾಕ್ ಸಂಖ್ಯೆ 59 ರಲ್ಲಿರುವ 08 ಎಲ್‌ಐಜಿ ವಸತಿ ಫ್ಲಾಟ್‌ಗಳ ಮಾರಾಟ

ಕೆಎಸ್‌ಐಐಡಿಸಿ ಸಂಸ್ಥೆಯು ನಂದಿನಿ ಲೇಔಟ್‌ನ ಎಸ್‌ಎಫ್‌ಹೆಚ್‌ಎಸ್ ಎಕ್ಸ್‌ಟೆನ್ಷನ್, ಬೆಂಗಳೂರು –560096 ರಲ್ಲಿರುವ ಬ್ಲಾಕ್ ಸಂಖ್ಯೆ 47 ಮತ್ತು 59 ರ ನೆಲಮಹಡಿಯಲ್ಲಿರುವ ತಲಾ 41.83 ಚದರ ಮೀಟರ್ ವಿಸ್ತೀರ್ಣದ 08 ಎಲ್‌ಐಜಿ ಫ್ಲಾಟ್‌ಗಳನ್ನು (ಫ್ಲಾಟ್‌ಗಳ ಸಂಖ್ಯೆ ಎಲ್‌ಎಫ್–47/1, 47/2, 47/3, ಹಾಗೂ 47/4 ಮತ್ತು 59/1, 59/2, 59/3 ಮತ್ತು 59/4) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ತನ್ನ ಉದ್ಯೋಗಿಗಳ ವಸತಿ ಬಳಕೆಗಾಗಿ ಖರೀದಿಸಿತ್ತು. ಈಗ ಕೆಎಸ್‌ಐಐಡಿಸಿ ಸಂಸ್ಥೆಯು ಈ 08 ವಸತಿ ಫ್ಲಾಟ್‌ಗಳನ್ನು **"ಎಲ್ಲಿ ಹೇಗಿದೆಯೋ ಹಾಗೇ ಆಧಾರದ ಮೇಲೆ"** ಇ–ಹರಾಜು ಮೂಲಕ ಮಾರಾಟ ಮಾಡಲು ನಿರ್ಧರಿಸಿದೆ.

ಮೀಸಲು ಬೆಲೆ: ಪ್ರತಿ ಫ್ಲಾಟ್‌ಗೆ **ರೂ. 42,52,020/– (ಪ್ರತಿ ಫ್ಲಾಟ್‌ಗೆ ನಲವತ್ತೆರಡು ಲಕ್ಷ ಐವತ್ತೆರಡು ಸಾವಿರ ಇಪ್ಪತ್ತು ರೂಪಾಯಿಗಳು ಮಾತ್ರ)**

ಇಎಂಡಿ: ಪ್ರತಿ ಫ್ಲಾಟ್‌ಗೆ **ರೂ. 2,00,000/– (ಎರಡು ಲಕ್ಷ ರೂಪಾಯಿಗಳು ಮಾತ್ರ)**

ಎ) ಫ್ಲಾಟ್‌ಗಳ ಪರಿಶೀಲನೆ: **06.07.2026 ಬೆಳಗ್ಗೆ 11.00 ಗಂಟೆಯಿಂದ ಸಂಜೆ 4.30 ಗಂಟೆ ವರೆಗೆ** ಮೇಲೆ ತಿಳಿಸಿದ ಸ್ಥಳದಲ್ಲಿ.

ಬಿ) ಇ–ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: **13.07.2026 ರಂದು ಸಂಜೆಯ 5.00 ರ ವರೆಗೆ**

ಸಿ) ಲೈವ್ ಬಿಡ್ಡಿಂಗ್ ಪ್ರಾರಂಭವಾಗುವ ದಿನಾಂಕ: **29.07.2026 ರಂದು ಬೆಳಗ್ಗೆ 11.00 ಗಂಟೆಯಿಂದ.**

ಡಿ) ಬಿಡ್ಡಿಂಗ್ ಮುಕ್ತಾಯಗೊಳಿಸಲು ಅಂತಿಮ ದಿನಾಂಕ: **30.07.2026, ಬೆಳಗ್ಗೆ 11.00 ಗಂಟೆ ವರೆಗೆ (ಡೆಲ್ಟಾ ಸಮಯ 5.00 ನಿಮಿಷಗಳು)**

ಮಾರಾಟಕ್ಕೆ ನಿಯಮ ಮತ್ತು ನಿಬಂಧನೆಗಳು: ಇ–ಹರಾಜು ಮತ್ತು ಇತರೆ ವಿವರಗಳಿಗೆ ಸಂಬಂಧಿಸಿದ ಸಾಮಾನ್ಯ ನಿಯಮ ಮತ್ತು ನಿಬಂಧನೆಗಳಿಗೆ ಲಾಗ್ ಆನ್ ಆಗಿ https://ksiidc.karnataka.gov.in ಮತ್ತು https://kppp.karnataka.gov.in

ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ, ಇ–ಆಡಳಿತ ಕೇಂದ್ರ, ಎಂ.ಎಸ್.ಬಿಲ್ಡಿಂಗ್, ಡಾ.ಅಂಬೇಡ್ಕರ್ ವೀಧಿ, ಗೇಟ್‌ನಂ. 2, ಕೊಠಡಿ ಸಂಖ್ಯೆ 146, 146ಎ, 108, 1 ನೇ ಮಹಡಿ ಮತ್ತು ನೆಲ ಮಹಡಿ, ಎಂಎಸ್ ಬಿಲ್ಡಿಂಗ್, ಕೆ.ಆರ್.ವೃತ್ತ, ಬೆಂಗಳೂರು –560001 ಇಲ್ಲಿಗೆ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ಅಥವಾ ದೂ. ಸಂ. 080 46010000/080 68948777 ಸಂಪರ್ಕಿಸಿ.

ಕೆಎಸ್‌ಐಐಡಿಸಿ ಫ್ಲಾಟ್‌ಗೆ ಸಂಬಂಧಿಸಿದ ವಿಚಾರಣೆಗೆ ಸಂಪರ್ಕಿಸಿ: ಡಿಜಿಎಂ, ಕೆಎಸ್‌ಐಐಡಿಸಿ **ಮೊಬೈಲ್ ಸಂಖ್ಯೆ 98458 33566.**

ಸಹಿ/–
ಇ–ಹರಾಜು ಪ್ರಾಧಿಕಾರ

ಸಿನಿಮಾ ನಿರ್ದೇಶಕ, ಪತ್ರಕರ್ತ ಎನ್.ಎಸ್.ಶಂಕರ್ ಇನ್ನಿಲ್ಲ

ಬೆಂಗಳೂರು: ಪತ್ರಕರ್ತ, ಲೇಖಕ, ಸಿನಿಮಾ ನಿರ್ದೇಶಕ ಎನ್.ಎಸ್.ಶಂಕರ್ ಭಾನುವಾರ ಬೆಂಗಳೂರಿನಲ್ಲಿ ನಿಧನರಾದರು. ಸಂಜೆ ಸುಮನಹಳ್ಳಿ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿತು.



ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ನಿದ್ರೆಯಲ್ಲಿದ್ದಾಗಲೇ ಹೃದಯಾಘಾತದಿಂದ ಕೊನೆಯುಸಿರೆಳೆದರು. ಕೆಲ ದಿನಗಳ ಹಿಂದೆಯಷ್ಟೇ ತಮ್ಮ ಹೆಂಡತಿಯನ್ನು ಕಳೆದುಕೊಂಡು ನೋವಿನಲ್ಲಿದ್ದರು. ಈಗ ಅವರ ನಿಧನದಿಂದ ಕನ್ನಡ ಸಿನಿಮಾ, ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಕೊಂಡಿಯೊಂದು ಕಳಚಿದಂತಾಗಿದೆ.

ಶಿವಮೊಗ್ಗ ಜಿಲ್ಲೆಯ ಸೊರಬದಲ್ಲಿ ಜನಿಸಿದ್ದ ಎನ್.ಎಸ್.ಶಂಕರ್, ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಬಾಲ್ಯ ಕಳೆದರು. ಆನಂತರ ಮೈಸೂರು ಮತ್ತು ಬೆಂಗಳೂರಿನಲ್ಲಿ ತಮ್ಮ ಶಿಕ್ಷಣ ಪೂರೈಸಿದ್ದರು.

ಲಂಕೇಶ್ ಪತ್ರಿಕೆಯ ಒಡನಾಟದಲ್ಲಿ ಬೆಳೆದ ಅವರು, ತೀಕ್ಷ್ಣ ಬರಹಗಳ ಮೂಲಕ ಗುರುತಿಸಿಕೊಂಡಿದ್ದರು. ತಮ್ಮ ಚೊಚ್ಚಲ ಸಿನಿಮಾ 'ಉಲ್ಟಾಪಲ್ಟಾ' (1997) ಮೂಲಕ ಇಡೀ ಚಂದನವನ ತಿರುಗಿ ನೋಡುವಂತೆ ಮಾಡಿದ್ದರು. ವಿಲಿಯಂ ಶೇಕ್ಸ್‌ಪಿಯರ್ ಅವರ ಪ್ರಸಿದ್ಧ ಕೃತಿ 'ದಿ ಕಾಮಿಡಿ ಆಫ್ ಎರರ್ಸ್' ಆಧಾರಿತ ಈ ಹಾಸ್ಯ ಪ್ರಧಾನ ಚಿತ್ರ ಕನ್ನಡ ಸಿನಿಮಾ ಇತಿಹಾಸದಲ್ಲಿ ಒಂದು ವಿಶಿಷ್ಟ ಮೈಲುಗಲ್ಲಾಗಿ ಉಳಿದಿದೆ.

ಶಂಕರ್ ಕಲೆ, ಸಿನಿಮಾ, ರಾಜಕೀಯ ಮತ್ತು ಸಮಾಜದ ವಿವಿಧ ಆಯಾಮಗಳ ಕುರಿತು 20ಕ್ಕೂ ಹೆಚ್ಚು ಮಹತ್ವದ ಪುಸ್ತಕಗಳನ್ನು ಬರೆದಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ 'ಈಗ' ಎಂಬ ಮೂರು ಸಣ್ಣ ಕಥೆಗಳ ಆಂಥಾಲಜಿ ಸಿನಿಮಾ ಪ್ರೊಡಕ್ಷನ್ ಕೆಲಸಗಳಲ್ಲೂ ತೊಡಗಿಸಿಕೊಂಡಿದ್ದರು. ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಜ್ಯೂರಿ ಮೆಂಬರ್ ಆಗಿದ್ದರು. ಅವರಿಗೆ 2024ರಲ್ಲಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು.

ಹುಸಿ ಬಾಂಬ್ ಬೆದರಿಕೆ

ಮೈಸೂರು: ನಗರದ ಎರಡು ಹೋಟೆಲ್‌ಗಳಿಗೆ ಭಾನುವಾರ ಬೆಳಗ್ಗೆ ಬಾಂಬ್ ಬೆದರಿಕೆ ಇ–ಮೇಲ್ ಸಂದೇಶ ಬಂದ ಹಿನ್ನೆಲೆಯಲ್ಲಿ ಆತಂಕ ಉಂಟಾಗಿತ್ತು. ತಪಾಸಣೆ ನಂತರ ಬೆದರಿಕೆ ಹುಸಿ ಎಂದು ಗೊತ್ತಾಯಿತು.

ನಜರ್‌ಬಾದ್‌ನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಬೆಳಗ್ಗೆ 11ರ ಹೊತ್ತಿಗೆ ರಾಸಾಯನಿಕ ಬಾಂಬ್ ಸ್ಫೋಟಗೊಳ್ಳಲಿದೆ ಎಂಬ ಇ–ಮೇಲ್ ಬಂದಿತ್ತು. ಅತಿಥಿಗಳು ಹಾಗೂ ಸಿಬ್ಬಂದಿಯನ್ನು ಸ್ಥಳಾಂತರಿಸಿ ಬಾಂಬ್ ನಿಷ್ಕ್ರಿಯ ದಳ, ಶ್ವಾನದಳದೊಂದಿಗೆ ಪೊಲೀಸರು ಶೋಧ ನಡೆಸಿದರು. ಇ–ಮೇಲ್ ಸಂದೇಶದಲ್ಲಿ ಹೆಸರಿಸಲಾಗಿದ್ದ ಮತ್ತೊಂದು ಹೋಟೆಲ್‌ನಲ್ಲಿಯೂ ಶೋಧ ನಡೆಸಿದರು. ಯಾವುದೇ ಸ್ಫೋಟ ವಸ್ತು ಪತ್ತೆಯಾಗಲಿಲ್ಲ. ಇ–ಮೇಲ್ ಕಳುಹಿಸಿದ ವ್ಯಕ್ತಿ 'ಅನಂತಮ್ ಅರಿಯುಪ್ಪನ್' ಎಂದು ಪರಿಚಯಿಸಿಕೊಂಡಿದ್ದು, ತಮಿಳುನಾಡಿನ ರಾಜಕೀಯ ಪಕ್ಷವೊಂದರ ನಾಯಕ ಎಂದು ಹೇಳಿಕೊಂಡಿದ್ದ.

ಮಾಳಿಗೆ ಮೇಲೆ ಅರೋಮಾ ಥೆರಫಿ

■ ಸೋಮಶೇಖರ ಕಿಲಾರಿ
ಬೆಂಗಳೂರು
somashekar.mahadevappa@timesofindia.com

ಹೂವು ಮರದ ತಾಯಿ, ಬೀಜದ ಪೂರ್ವರೂಪ. ಹೂವಿರದ ಜಗತ್ತು ಕಲ್ಪಿಸುವುದೂ ಕಷ್ಟ. ಪರಿಸರ ಈಗಿನ ಸ್ಥಿತಿಗೆ ಬೆಳೆದು ಬಂದಿರುವುದರ ಹಿಂದೆ ಹೂವಿನ ಪಾತ್ರ ದೊಡ್ಡದಿದೆ. ಕಾಡು, ಕಾನನ, ಮಳೆ, ಬೆಳೆ ಸೇರಿ ಇಡೀ ಜೀವ ಜಗತ್ತು ನಿಂತಿರುವುದೇ ಈ ಹೂವಿನ ಜೀವದ್ರವ್ಯದ ಹಾಸಿನ ಮೇಲೆ. ಹೂವು ಅರಳದಿದ್ದರೆ ಈ ಜಗತ್ತಿನಲ್ಲಿ ಆಹಾರ ಧಾನ್ಯಗಳಿಗಾಗಿ ಹಾಹಾಕಾರ ಸೃಷ್ಟಿಯಾಗುತ್ತದೆ. ನಮ್ಮ ಅಗತ್ಯದ ಅಡುಗೆ ಎಣ್ಣೆಯಲ್ಲಿ ಸೂರ್ಯಕಾಂತಿಯ ಪಾಲು ದೊಡ್ಡದಿದೆ. ಈ ಸೂರ್ಯಕಾಂತಿ ಮೊಗ್ಗರಳಿ ಸೂರ್ಯನತ್ತ ಮುಖ ತಿರುಗುವಾಗ ಒಡಲ ತುಂಬ ಪೋಲನ್ (ಪರಾಗ) ತುಂಬಿಕೊಂಡಿರುತ್ತದೆ. ಈ ಪರಾಗವು ಹೂವಿನಿಂದ ಹೂವಿಗೆ ವರ್ಗಗೊಂಡರೆ ಮಾತ್ರ ಕಾಳು ಕಟ್ಟುತ್ತದೆ. ಆ ಪರಾಗಸ್ಪರ್ಶವು ದುಂಬಿ, ಜೇನು ನೊಣ, ಇತರೆ ಕೀಟ ಮತ್ತು ಗಾಳಿಯಿಂದ ಸಾಧ್ಯವಾಗುತ್ತದೆ. ಕಾಳಿನಿಂದಲೇ ಜೀವಸಂಕುಲ ಉಳಿಯುತ್ತದೆ. ಕೊನೆಗೆ ಜೇನುನೊಣ ಉಳಿಯಬೇಕಾದರೂ ಹೂವು ಅನಿವಾರ್ಯ. ಇಂತಹ ಹೂ ಗಿಡಮರ, ಸಸ್ಯ ಸಂಪತ್ತು ಬೆಳೆಸಿ ಉಳಿಸುವುದು ಕೂಡ ಪರಿಸರ ಸಂರಕ್ಷಣೆಯ ಮಹತ್ವದ ಕಾರ್ಯ.

ಮನಃಶಾಂತಿ ಮತ್ತು ಮನೆಶಾಂತಿ ಎರಡಕ್ಕೂ ಹೂ ಬೇಕು ಎಂಬ ತಿಳಿವಳಿಕೆಯಿಂದ ಬೀದರ್‌ನ ಚಿಟಗುಪ್ಪಾ ಪಟ್ಟಣದ ವ್ಯಾಪಾರಿ ಗಜಾನನ ವಿಶ್ವಕರ್ಮ, ತಮ್ಮ ಸಾವಿರ ಚದರ ಅಡಿಯ ಪುಟ್ಟ ಮಾಳಿಗೆ ಮೇಲೆ 60 ವಿಧದ ಹೂ ಸಸಿ ಬಳ್ಳಿಗಳನ್ನು ಬೆಳೆಸಿದ್ದಾರೆ.

ಹೂ ತೋಟದಿಂದ ಏನೆಲ್ಲ ಲಾಭ?

- ಚೆಲುವಿನ ನೋಟದಿಂದ ಮನಃಶಾಂತಿ
- ಪರಿಸರದಲ್ಲಿ ಪರಿಮಳದ ಅರೋಮಾ
- ಜೇನುನೊಣಗಳ ಆಕರ್ಷಣೆ
- ಜೇನ್ನೊಣಗಳಿಂದ ಗಾಳಿ ಪರಿಶುದ್ಧಗೊಳ್ಳುತ್ತದೆ
- ಸಹಜ ಅರೋಮಾ ಥೆರಫಿಯಿಂದ ಅನೇಕ ಆರೋಗ್ಯ ಸಮಸ್ಯೆಗಳು ನಿವಾರಣೆಯಾಗುತ್ತವೆ

ಬೆಳಗಿನ ವೇಳೆ ಆ ಮಾಳಿಗೆ ಹತ್ತಿ ಹೂಗಳನ್ನು ನೋಡುವುದೆಂದರೆ ಸ್ವರ್ಗಸುಖ. ಕೆಂಪು, ಬಿಳಿ, ಹಳದಿ, ಹಸಿರು, ನೀಲಿ ನಳನಳಿಸುವ ನೂರಾರು ರಂಗು. ''ನನಗೆ ಈ ಹೂಗಳ ಹಿಂದಿರುವ ಸೈನ್ಸ್ ಬಗ್ಗೆ ಅಷ್ಟಾಗಿ ಆಸಕ್ತಿ ಇಲ್ಲ, ಆದರೆ, ಹೂವು ಈ ಜಗದ ಅದ್ಭುತ ಸೃಷ್ಟಿ. ಅದು ನೋಡುತ್ತಿದ್ದರೆ ನೂರು ನೋವುಗಳು ದೂರ ಸರಿಯುತ್ತವೆ. ದೇವರ ದರ್ಶನವಾಗುತ್ತದೆ. ಸುಖ ಎನ್ನುವುದರ ಮೂರ್ತರೂಪವೇ ಹೂವು,'' ಎನ್ನುತ್ತಾರೆ ಗಜಾನನ.

ಸ್ಥಳೀಯವಾಗಿ ಸಿಗದ ಈ ವೈವಿಧ್ಯಮಯ ಹೂ ಸಸಿಗಳನ್ನು ಆನ್‌ಲೈನ್ ಮೂಲಕ ಬೇರೆಡೆಯಿಂದ ತರಿಸಿಕೊಂಡು ಪೋಷಿಸುತ್ತಿದ್ದಾರೆ. ಸಾವಯವ ಗೊಬ್ಬರದ ಟಬ್‌ಗಳಲ್ಲಿ ಹಾಕಿರುವ ಹೂ ಸಸಿಗಳಿಗೆ ನಿತ್ಯ ಒಮ್ಮೆ ನೀರುಣಿಸುತ್ತಾರೆ. ಹೂಗಳು ಅರಳುವುದರಿಂದ ಸಂಜೆ ಹೊತ್ತಿಗೆ ಇಡೀ ಏರಿಯಾದಲ್ಲಿ ಪರಿಮಳ ಹರಡುತ್ತದೆ. ದುಂಬಿ, ಜೇನ್ನೊಣಗಳ ಝೇಂಕಾರ ಕೇಳಿಸುತ್ತದೆ. ಇದು ಎಲ್ಲರೂ ಸುಲಭವಾಗಿ ಮಾಡಬಹುದಾದ ಮನಃಶಾಂತಿಯ ತೋಟ, ಪರಿಸರದ ಪೂಜೆ.

ನನ್ನ ಭೂಮಿ ಹೆಜ್ಜೆ – ವಿಕ ಅಭಿಯಾನ

ನಿಮ್ಮ ಸುತ್ತಲೂ ಇಂತಹ ಪರಿಸರ ಸಂರಕ್ಷಣೆಯ ಕುತೂಹಲಕಾರಿ ಯಶೋಗಾಥೆಗಳು ಗಮನಕ್ಕೆ ಬಂದರೆ ಬರೆದು ಈ ನಂಬರ್‌ಗೆ ವಾಟ್ಸ್ಆ್ಯಪ್ ಮಾಡಿ. **63664 22240**

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

2008ರ ಕ್ಷೇತ್ರ ಪುನರ್ ವಿಂಗಡಣೆಯಿಂದ ಮತದಾರರ ಮತಗಟ್ಟೆ, ಗುರುತಿನ ಚೀಟಿ ಮಾಹಿತಿ ಬದಲು

ಎಸ್ಐಆರ್‌ಗೆ 2002ರ ಮಾಹಿತಿ ಸವಾಲು

■ **ಪ್ರಮೋದ ಹರಿಕಾಂತ** ಕಾರವಾರ
pramod.harikant@timesofindia.com

ರಾಜ್ಯದಲ್ಲಿ 2002ರಲ್ಲಿ ನಡೆದಿದ್ದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್)ಯ ದಾಖಲೆಗಳನ್ನು ಈಗಿನ ಎಸ್ಐಆರ್‌ನಲ್ಲಿ ಉಲ್ಲೇಖವಾಗಿ ಪರಿಗಣಿಸಲಾಗುತ್ತಿದೆ. 2008ರ ಕ್ಷೇತ್ರ ಪುನರ್ ವಿಂಗಡಣೆಗೆ ಒಳಗಾದ ಸಾವಿರಾರು ಮತದಾರರಿಗೆ ತಮ್ಮ 23 ವರ್ಷ ಹಳೆಯ ಮಾಹಿತಿ ಹುಡುಕುವ ಸವಾಲು ಎದುರಿದೆ.

ರಾಜ್ಯದಲ್ಲಿ ಜೂ.30ರಿಂದ ಎಲ್ಲ ಮತದಾರರಿಗೂ ಎನ್ಯುಮರೇಷನ್ ಅರ್ಜಿ ವಿತರಣೆ ಆರಂಭವಾಗುತ್ತಿದೆ. ಮತಗಟ್ಟೆ ಅಧಿಕಾರಿಗಳೇ ಮನೆಗೆ ಬಂದು ಅರ್ಜಿ ಕೊಡುತ್ತಾರೆ. ಆ ಎನ್ಯುಮರೇಷನ್ ಅರ್ಜಿಯಲ್ಲಿ ಮತದಾರರು 2002ರಲ್ಲಿ ನಡೆದ ಎಸ್ಐಆರ್ ವೇಳೆಯ ಗುರುತಿನ ಚೀಟಿಯ ಮಾಹಿತಿ ಭರ್ತಿ ಮಾಡಬೇಕು. ಆ ಸಂದರ್ಭದಲ್ಲಿ 18 ವರ್ಷ ಆಗಿರದೇ ಇದ್ದವರು ಈಗ ಎನ್ಯುಮರೇಷನ್ ಅರ್ಜಿಯಲ್ಲಿ ತಮ್ಮ ತಂದೆಯ 2002ರ ಅವಧಿಯ ಗುರುತಿನ ಚೀಟಿಯ ಮಾಹಿತಿ ತುಂಬಬೇಕು. ತಂದೆ ಇಲ್ಲದೇ ಇದ್ದರೆ ಅಜ್ಜನ ಮಾಹಿತಿ.

ಕ್ಷೇತ್ರಗಳಲ್ಲಿ ಬದಲಾವಣೆ: ಆದರೆ, ರಾಜ್ಯದಲ್ಲಿ 2008ರಲ್ಲಿ ವಿಧಾನಸಭಾ ಮತಕ್ಷೇತ್ರಗಳ ಪುನರ್ ವಿಂಗಡಣೆ ಆಗಿದೆ. ವಿಧಾನಸಭಾ ಕ್ಷೇತ್ರಗಳ ಸಂಖ್ಯೆ ಈಗಿದ್ದಷ್ಟೇ (224) ಇದ್ದರೂ ಕ್ಷೇತ್ರಗಳ ಗಡಿ ಬದಲಾಗಿವೆ. ಕೆಲ ಕ್ಷೇತ್ರಗಳು ಪಕ್ಕದ ಕ್ಷೇತ್ರದೊಂದಿಗೆ ವಿಲೀನವಾದರೆ, ಇನ್ನೂ ಕೆಲ ಕ್ಷೇತ್ರಗಳು ಮೀಸಲು ಹೆಸರಿನಲ್ಲಿ ಹೊಸದಾಗಿ ರಚನೆ ಆಗಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲ ವಿಧಾನಸಭಾ ಕ್ಷೇತ್ರಗಳ ತಾಲೂಕುಗಳೇ ಬದಲಾಗಿವೆ. ಕಾರವಾರ- ಜೋಯಿಡಾ ತಾಲೂಕು ಸೇರಿ ಇದ್ದ ವಿಧಾನಸಭಾ ಕ್ಷೇತ್ರ 2008ರಲ್ಲಿ ಕಾರವಾರ- ಅಂಕೋಲಾ ತಾಲೂಕು ಸೇರಿ ಆಗಿದೆ. ಹೀಗೆ ರಾಜ್ಯಾದ್ಯಂತ ಕ್ಷೇತ್ರಗಳ ಗಡಿ ಆಚೀಚೆ ಆಗಿ ಮತದಾರರ ಮತಗಟ್ಟೆ ಸಂಖ್ಯೆಯಲ್ಲೂ ವ್ಯತ್ಯಾಸ ಆಗಿವೆ.

ಎಸ್ಐಆರ್‌ಗಾಗಿ 23 ವರ್ಷಗಳ ಹಳೆಯ ಮತಗಟ್ಟೆ, ವಿಧಾನಸಭಾ ಕ್ಷೇತ್ರದ ಸಂಖ್ಯೆ ಎಲ್ಲವನ್ನೂ ಪತ್ತೆ ಮಾಡಿ ಎನ್ಯುಮರೇಷನ್‌ನಲ್ಲಿ ತುಂಬಬೇಕು. ಆ ಮಾಹಿತಿ ಪತ್ತೆ ಮಾಡುವುದೇ ಮಹತ್ವದ ಕೆಲಸ. ಅದಕ್ಕಾಗಿ ಚುನಾವಣಾ ಆಯೋಗ 2002ರ ಮತದಾರರ ಪಟ್ಟಿಯನ್ನು ಆಯೋಗದ ಆನ್‌ಲೈನ್‌ನಲ್ಲಿ ಪ್ರಕಟಿಸಿದೆ. ಮಾಹಿತಿ ಪತ್ತೆ ಮಾಡಲು ಬಿಎಲ್ಒಗಳಿಗೂ ತರಬೇತಿ ನೀಡಲಾಗಿದೆ. ತಿಳಿವಳಿಕೆ ಇಲ್ಲದೇ ಇರುವವರಿಗೆ ಇದು ಸಮಸ್ಯೆ ಆಗಬಹುದು ಎನ್ನುವ ಆತಂಕ ಇದೆ.

ಎನ್ಯುಮರೇಷನ್ ಕಡ್ಡಾಯ

ಎಸ್ಐಆರ್ ಸಲುವಾಗಿ 2002ರ ಮತದಾರರ ಪಟ್ಟಿ ಮತ್ತು ಈಗಿನ ಮತದಾರರ ಪಟ್ಟಿ ಮ್ಯಾಪಿಂಗ್ ಮಾಡಲಾಗಿದೆ. ಎಸ್ಐಆರ್‌ನಲ್ಲಿ ಎಲ್ಲ ಮತದಾರರು ಕಡ್ಡಾಯವಾಗಿ ಎನ್ಯುಮರೇಷನ್ ಅರ್ಜಿ ಭರ್ತಿ ಮಾಡಬೇಕು. ಅರ್ಜಿಯಲ್ಲಿ ಮತದಾರರ ಗುರುತಿನ ಚೀಟಿಯ ಮಾಹಿತಿಯಾದ ವಿಧಾನಸಭಾ ಕ್ಷೇತ್ರ ಸಂಖ್ಯೆ, ಮತಗಟ್ಟೆ ಸಂಖ್ಯೆ ಮತ್ತು ಕ್ರಮ ಸಂಖ್ಯೆ ನಮೂದಿಸಬೇಕು. ಅದೇ ಮತದಾರರ ಅಸ್ತಿತ್ವ ನಿರ್ಧರಿಸಲಿದೆ. ಅದೇ ಎನ್ಯುಮರೇಷನ್ ಅರ್ಜಿಯಲ್ಲಿ ಉಲ್ಲೇಖವಾಗಿ 2002ರಲ್ಲಿ ಎಸ್ಐಆರ್ ಆದಾಗ ಇದ್ದ ಮತಗಟ್ಟೆ, ಗುರುತಿನ ಚೀಟಿ ಮಾಹಿತಿ ಭರ್ತಿ ಮಾಡಬೇಕು. ಈ ಅರ್ಜಿಯನ್ನು ಭರ್ತಿ ಮಾಡಿದ ನಂತರ ಒಂದು ಪ್ರತಿಯನ್ನು ಬಿಎಲ್ಒಗಳಿಗೆ ಹಿಂತಿರುಗಿಸಬೇಕು. ಹಿಂತಿರುಗಿಸದೇ ಇದ್ದರೆ ಮತದಾರರ ಪಟ್ಟಿಯಿಂದ ಹೆಸರು ಅಳಿಸಿ ಹೋಗಲಿದೆ.

ತಪ್ಪಾದರೆ ಏನಾಗುತ್ತದೆ?

ಎನ್ಯುಮರೇಷನ್ ಅರ್ಜಿಯಲ್ಲಿ 2002ರ ಎಸ್ಐಆರ್ ಮತದಾರರ ಚೀಟಿಯ ಮಾಹಿತಿ ತಪ್ಪಾಗಿ ನಮೂದಿಸಿದರೆ ಮ್ಯಾಪಿಂಗ್ ತಪ್ಪಾಗುತ್ತದೆ. ಮತದಾರರ ಹೆಸರು ಕರಡು ಪ್ರತಿಯಲ್ಲಿ ಸೇರಿದರೂ ಅಂತಿಮ ಆಗುವುದಿಲ್ಲ. ಆಗ ತಹಸೀಲ್ದಾರ್ ಕೊಡುವ ನೋಟಿಸ್‌ಗೆ ಹೊಸದಾಗಿ ದಾಖಲೆ ಕೊಟ್ಟು ಸರಿ ಮಾಡಿಕೊಳ್ಳಬೇಕಾಗುತ್ತದೆ. 2002ರ ಎಸ್ಐಆರ್ ನಂತರ ಮತದಾರರ ಚೀಟಿಯ ಮಾಹಿತಿ ಪತ್ತೆ ಮಾಡುವುದು ಕಷ್ಟವಲ್ಲ. ಬಿಎಲ್ಒಗಳ ಬಳಿ ಇರುವ ಆ್ಯಪ್‌ನಲ್ಲಿ ಸುಲಭವಾಗಿ ಪತ್ತೆಯಾಗುತ್ತದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ ತಿಳಿಸಿದರು.

ಎನ್ಯುಮರೇಷನ್ ಅರ್ಜಿಯಲ್ಲಿ 2002ರ ಎಸ್ಐಆರ್ ಮತದಾರರ ಚೀಟಿಯ ಮಾಹಿತಿ ಉಲ್ಲೇಖಿಸಬೇಕು. ಬಿಎಲ್ಒಗಳು ಆ ಮಾಹಿತಿ ಹುಡುಕಿ ಕೊಡುತ್ತಾರೆ. ಮತದಾರರು ಕೂಡ ಚುನಾವಣಾ ಆಯೋಗದ ವೆಬ್‌ಸೈಟ್‌ಗೆ ಹೋಗಿ ಸುಲಭವಾಗಿ ಪತ್ತೆ ಮಾಡಬಹುದು. ಎಸ್ಐಆರ್ ಸರಳವಾಗಿದೆ.

-ಸಾಜೀದ್ ಮುಲ್ಲಾ ಹೆಚ್ಚುವರಿ ಜಿಲ್ಲಾಧಿಕಾರಿ

ಎಸ್ಐಆರ್ ನಿರ್ಲಕ್ಷಿಸಿದರೆ ಅಪಾಯ

■ **ವಿಕ ಸುದ್ದಿಲೋಕ** ಮೈಸೂರು

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಬಗ್ಗೆ ಜಾಗೃತಿ ವಹಿಸದಿದ್ದರೆ ಮಾರಣಹೋಮ ನಡೆಯಲಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಜೆಕೆ ಮೈದಾನಲ್ಲಿ ಭಾನುವಾರ ಕಾಂಗ್ರೆಸ್ ಪಕ್ಷದಿಂದ ನಡೆದ ಮೈಸೂರು ವಿಭಾಗೀಯ ಎಸ್ಐಆರ್ ಜಾಗೃತಿ ಸಮಾವೇಶದಲ್ಲಿ ಮಾತನಾಡಿದರು. ''ದೇಶದಲ್ಲಿ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಿದ್ದು, ಸರ್ವಾಧಿಕಾರಕ್ಕಾಗಿ ಬಿಜೆಪಿ ಏನಾದರೂ ಮಾಡಲು ಸಿದ್ಧವಾಗಿದೆ. ಈ ಬಗ್ಗೆ ಎಚ್ಚರ ತಪ್ಪಿದರೆ ನಿಮ್ಮನ್ನೇ ಮುಗಿಸಲಿದೆ,'' ಎಂದು ನಾಯಕರು ಮತ್ತು ಮುಖಂಡರಿಗೆ ಎಚ್ಚರಿಕೆ ನೀಡಿದರು.

''ನಮ್ಮ ರಾಜಕೀಯ ಮುಗಿಯಿತು, ನೀವು ಎಚ್ಚರಿಕೆ ವಹಿಸದೇ ಇದ್ದರೆ ಅಪಾಯ ಎದುರಾಗಲಿದೆ,'' ಎಂದು ಹೇಳುವ ಮೂಲಕ ಪರೋಕ್ಷವಾಗಿ ಚುನಾವಣಾ ರಾಜಕೀಯದಿಂದ ಹಿಂದೆ ಸರಿಯುತ್ತಿರುವ ಮುನ್ಸೂಚನೆ ನೀಡಿದರು.

''ಇಡೀ ದೇಶದ 141 ಕೋಟಿ ಜನಸಂಖ್ಯೆಯಲ್ಲಿ 96 ಕೋಟಿ ಮತದಾರರಿದ್ದಾರೆ. ನಮ್ಮಲ್ಲಿ ಬಹಳಷ್ಟು ಜನ ಸಾವಿರ ಮತಗಳ ಅಂತರದಿಂದ ಗೆದ್ದವರು ಇದ್ದಾರೆ. ಕೇವಲ ಒಂದು ಮತದಿಂದ ನಮ್ಮ ಅಭ್ಯರ್ಥಿ ಸೋತಿದ್ದು ಕೂಡ ಇದೆ. ಇಂತಹ ಕಡೆ ನಾಲ್ಕೈದು ಸಾವಿರ ಮತಗಳನ್ನು ಕಿತ್ತು ಹಾಕಿದರೆ ನಮ್ಮವರ ಗೆಲುವು ಕಷ್ಟ. ಎಸ್ಐಆರ್ ನಡೆಯುತ್ತಿರುವುದು ಇದು ಮೊದಲ ಬಾರಿಯಲ್ಲ. 1950ರಲ್ಲಿ ಚುನಾವಣಾ ಆಯೋಗ ರಚನೆಯಾಗಿ, 1952ರಲ್ಲಿ ಪ್ರಥಮ ಚುನಾವಣೆ ನಡೆಯಿತು. ಆಗಾಗ ಆಯೋಗವು ಮತದಾರರ ಪಟ್ಟಿ ಪರಿಷ್ಕರಣೆ ಮಾಡುತ್ತ ಬಂದಿದೆ. ಆದರೆ ಅರ್ಹ ಮತದಾರರನ್ನು ಕೈಬಿಡುವ ಅಧಿಕಾರ ಆಯೋಗಕ್ಕೆ ಇಲ್ಲ. ಜನರ ಬಹುಮತದ ಮೂಲಕ ಗೆದ್ದವರು ಮಾತ್ರ ಅಧಿಕಾರ ನಡೆಸಲು ಯೋಗ್ಯರು, ಮೋಸ ಮಾಡಿದವರಲ್ಲ,'' ಎಂದು ಹೇಳಿದರು.

''ಈಗ ದೇಶದಲ್ಲಿ ಸಂವಿಧಾನಬದ್ಧ ಚುನಾವಣಾ ಆಯೋಗ ಇಲ್ಲ ಎನ್ನುವುದನ್ನು ಮರೆಯಬೇಡಿ. 2019ರಲ್ಲಿ ಬಿಜೆಪಿಯ 303 ಅಭ್ಯರ್ಥಿಗಳು ಗೆದ್ದಿದ್ದರು. 2024ರಲ್ಲಿ ಈ ಸಂಖ್ಯೆ 240ಕ್ಕೆ ಇಳಿದಿದೆ. ಇದಕ್ಕೆ ಬೆಲೆಯೇರಿಕೆ, ವಚನ ಭ್ರಷ್ಟತೆ, ನಿರುದ್ಯೋಗ ಕಾರಣ. ಈ ಫಲಿತಾಂಶವನ್ನು ಮುಂದಿನ ದಿನಗಳಲ್ಲಿ ಎಸ್ಐಆರ್ ಮೂಲಕ ಬದಲಾಯಿಸಲು ಹೊರಟಿದ್ದಾರೆ. ಬಿಜೆಪಿಯವರು ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿಗಳು. 13 ರಾಜ್ಯಗಳಲ್ಲಿ, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಆಗಿದೆ. ಹರಿಯಾಣ, ಪಶ್ಚಿಮ ಬಂಗಾಳ, ಮಹಾರಾಷ್ಟ್ರದಲ್ಲಿ ಫಲಿತಾಂಶ ಏನಾಗಿದೆ? ಅವರು ಅಧಿಕಾರದಲ್ಲಿ ಉಳಿಯಲು ಏನು ಬೇಕಾದರೂ ಮಾಡಲು ಹೇಸುವುದಿಲ್ಲ,'' ಎಂದು ದೂರಿದರು.

ಮತ್ತೊಮ್ಮೆ ಸ್ವಾತಂತ್ರ್ಯ ಹೋರಾಟ: ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಮಾತನಾಡಿ, ''ಎಸ್ಐಆರ್‌ನಿಂದಾಗಿ ದೇಶದಲ್ಲಿ ಮತ್ತೊಮ್ಮೆ ಸ್ವಾತಂತ್ರ್ಯ ಹೋರಾಟ ನಡೆಸುವಂತಹ ಸನ್ನಿವೇಶ ನಿರ್ಮಾಣವಾಗಿದೆ. ನಾವ್ಯಾರೂ ಭಯೋತ್ಪಾದಕರಲ್ಲ. ಮತದಾನವೇ ಸಾರ್ವಜನಿಕರ ಕೈಯಲ್ಲಿ ಇರುವ ಅಸ್ತ್ರವಾಗಿದೆ. ಅದನ್ನು ಬಿಜೆಪಿಯವರು ಎಸ್ಐಆರ್ ನೆಪದಲ್ಲಿ ಕಿತ್ತುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ಉಳಿಸಿಕೊಳ್ಳಲು ಮತ್ತೊಮ್ಮೆ ಹೋರಾಟ ನಡೆಸಬೇಕಾಗಿದೆ,'' ಎಂದು ಕರೆ ನೀಡಿದರು.

ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಸಂಸದ ಸುನೀಲ್ ಬೋಸ್ ಇದ್ದರು.

ಮಾಜಿ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ

ಜುಲೈ ನೇಮಕಾತಿ ಧಮಾಕಾ

» ಮೊದಲ ಪುಟದಿಂದ

ತಾತ್ಕಾಲಿಕ ವೇಳಾಪಟ್ಟಿ: ಶೇ.50ರಷ್ಟು ಮೀಸಲು ಆದೇಶಕ್ಕೆ ಒಳಪಟ್ಟು ಹೊಸ ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಲು ನ್ಯಾಯಾಲಯದಿಂದ ಸದ್ಯ ಯಾವುದೇ ತಡೆ ಇಲ್ಲ. ಹಾಗಾಗಿ, ಆಯೋಗ ಈಗಾಗಲೇ (ಜೂನ್ 5) ಯಾವ್ಯಾವ ಇಲಾಖೆಗಳ ಸಂಬಂಧ ನೇಮಕ ಪ್ರಕ್ರಿಯೆ ಆರಂಭಿಸಲಾಗುವುದೆಂದು ತಾತ್ಕಾಲಿಕ ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಿ, ಈಗ ಅಂತಿಮ ವೇಳಾಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ.

''ತಾತ್ಕಾಲಿಕ ವೇಳಾಪಟ್ಟಿಯಂತೆ ಜುಲೈ ತಿಂಗಳಲ್ಲಿ ಬಹುತೇಕ ಎಲ್ಲಾ ನೇಮಕಾತಿಗಳ ಅಧಿಸೂಚನೆಗಳು ಹೊರಬೀಳಲಿವೆ. ವಿವಿಧ ಇಲಾಖೆಗಳಿಂದ ಪ್ರಸ್ತಾವ ಸ್ವೀಕರಿಸಿದ ಕೂಡಲೇ ಆಯೋಗ ನಿರ್ದಿಷ್ಟ ಹುದ್ದೆಗಳನ್ನು ಭರ್ತಿ ಮಾಡಲು ಪರೀಕ್ಷಾ ದಿನಾಂಕ ಸೇರಿ ಇಡೀ ನೇಮಕ ಪ್ರಕ್ರಿಯೆಯ ನಿರ್ದಿಷ್ಟ ವೇಳಾಪಟ್ಟಿಯ ಅಧಿಸೂಚನೆಗಳನ್ನು ಪ್ರಕಟಿಸಲಿದೆ. ಅದಕ್ಕಾಗಿ ಆಯೋಗ ಏನೇನು ಸಿದ್ಧತೆಗಳು ಬೇಕೋ ಅವುಗಳನ್ನು ಮಾಡಿಕೊಳ್ಳುತ್ತಿದೆ,'' ಎಂದು ಆಯೋಗದ ಕಾರ್ಯದರ್ಶಿ ಕೆ.ಜ್ಯೋತಿ ತಿಳಿಸಿದ್ದಾರೆ.

ಮೂರು ವಿಧಾನಗಳ ಪರೀಕ್ಷೆ: ಆಯೋಗ ಖಾಲಿ ಹುದ್ದೆಗಳನ್ನು ತುಂಬಲು ಮೂರು ವಿಧಾನಗಳ ಪರೀಕ್ಷಾ ಪದ್ಧತಿ ಅನುಸರಿಸಲು ತೀರ್ಮಾನಿಸಿದೆ. ಅದರಂತೆ ಮೊದಲನೆಯದಾಗಿ, ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳಿಗೆ ಪೂರ್ವಭಾವಿ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಪ್ರಕ್ರಿಯೆಗಳನ್ನು ನಡೆಸಲಿದೆ. ಎರಡನೇಯದಾಗಿ, ಕೆಲವು ಇಲಾಖೆಗಳ 'ಎ' ವೃಂದದ ಹುದ್ದೆಗಳಿಗೆ ಕೇವಲ ಪರೀಕ್ಷೆಗಳನ್ನು ನಡೆಸಿ, ಜ್ಯೇಷ್ಠತೆ ಆಧಾರದಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಮೂರನೆಯದಾಗಿ ತಾಂತ್ರಿಕ ಪರಿಣತಿ ಅವಶ್ಯಕತೆ ಇರುವಂತಹ ಕೆಲವು ಗ್ರೂಪ್ 'ಬಿ' ಹುದ್ದೆಗಳಿಗೆ ಕೇವಲ ಪರೀಕ್ಷೆಗಳನ್ನು ನಡೆಸಿ ಆಯ್ಕೆ ಪ್ರಕ್ರಿಯೆ ನಡೆಸಲು ಆಯೋಗ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಒಟ್ಟಾರೆ ಡಿಸ್ಕ್ರಿಪ್ಟೀವ್ ವಿಧಾನದ ಎಲ್ಲಾ ಪರೀಕ್ಷೆಗಳನ್ನು ಆಯೋಗ ನಡೆಸಬೇಕು ಮತ್ತು ಒಎಂಆರ್ ಪದ್ಧತಿಯಲ್ಲಿ ಉತ್ತರಿಸುವಂತಹ ಪರೀಕ್ಷೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ) ನಡೆಸಬೇಕೆಂದು ಸರಕಾರ ಸೂಚಿಸಿದೆ.

ರೈತರ ಸಮ್ಮುಖವೇ ಮಾತುಕತೆ: ಎಚ್‌ಡಿಕೆ ಪಟ್ಟು

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಡದಿ ಬಿಕ್ಕಟ್ಟಿನ ಬಗ್ಗೆ ಸಿಎಂ ಅವರೊಂದಿಗೆ ಚರ್ಚಿಸಲು ಈಗಲೂ ಸಿದ್ಧ. ಆದರೆ, ವಿಧಾನಸೌಧದಲ್ಲಿ ಅಲ್ಲ, ರೈತರ ಸಮ್ಮುಖದಲ್ಲೇ ಚರ್ಚೆ ನಡೆಯಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪುನಃ ಪಟ್ಟು ಹಾಕಿದ್ದಾರೆ.



ಜೆಡಿಎಸ್ ಕಚೇರಿ ಜೆಪಿ ಭವನದಲ್ಲಿ ಭಾನುವಾರ ಮಾತನಾಡಿದ ಅವರು, ''ಸಿಎಂ ಚರ್ಚೆಗೆ ಬಂದರೆ ನಾನೂ ಬರುತ್ತೇನೆ. ಬಿಡದಿ ರೈತರ ಸಂಕಷ್ಟದ ಬಗ್ಗೆ ಸಿಎಂ ಅವರಿಗೆ ಪತ್ರ ಬರೆದೆ. ಅದಕ್ಕೆ ಅವರು ಈವರೆಗೂ ಉತ್ತರ ನೀಡಿಲ್ಲ, ರೈತರ ನಡುವೆ ಕೂತು ಚರ್ಚಿಸಲು ಕರೆದರೆ ಅವರು ಬರಲೇ ಇಲ್ಲ, ಈಗಾದರೂ ಸಿಎಂ ಚರ್ಚೆಗೆ ಬಂದರೆ ನಾನೂ ಬರುತ್ತೇನೆ,'' ಎಂದು ಸವಾಲು ಹಾಕಿದರು.

''ಈ ವಿಚಾರವಾಗಿ ಸ್ಥಳಕ್ಕೆ ತೆರಳಿ ರೈತರೊಂದಿಗೆ ಕುಳಿತು ಚರ್ಚಿಸಬೇಕು. ಅದನ್ನು ಬಿಟ್ಟು ಬಿಡದಿ ಭಾಗಕ್ಕೆ ಸಂಬಂಧ ಇಲ್ಲದವರನ್ನು ಹೊರಗಿನಿಂದ ಕರೆತಂದು ಪ್ರತಿಭಟನೆ ಮಾಡಿಸುತ್ತಿದ್ದಾರೆ. ಭೂಮಿ ಕಳೆದುಕೊಳ್ಳುತ್ತಿರುವ ರೈತರನ್ನು ಹೊರಗಿಟ್ಟು ನಾಲ್ಕು ಗೋಡೆಗಳ ನಡುವೆ ಸಭೆ ನಡೆಸುವ ಅಗತ್ಯವಿಲ್ಲ. ಅಂತಹ ಸಭೆಗಳಿಂದ ಯಾವುದೇ ಉಪಯೋಗ ಇಲ್ಲ,'' ಎಂದು ಸ್ಪಷ್ಟಪಡಿಸಿದರು.

ಮುಗಿದ ಅಧ್ಯಾಯ: ವಿಧಾನ ಪರಿಷತ್ ಚುನಾವಣೆ ಅಡ್ಡ ಮತದಾನ ಪ್ರಕರಣ ಕುರಿತು ವರದಿಗಾರರ ಪ್ರಶ್ನೆಗೆ, ''ಅದರ ಬಗ್ಗೆ ಈಗಾಗಲೇ ಮಾತನಾಡಿದ್ದೇನೆ. ಈ ವಿಚಾರ ಇಲ್ಲಿಗೇ ಬಿಟ್ಟುಬಿಡಿ. ಮುಗಿದ ಅಧ್ಯಾಯಕ್ಕೆ ಮಹತ್ವ ಕೊಡುವ ಅಗತ್ಯವಿಲ್ಲ,'' ಎಂದರು.

ಜೆಡಿಎಸ್‌ನಿಂದ ಕಾನೂನು ಹೋರಾಟ ನಿಶ್ಚಿತ

''ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್‌ನಿಂದ ಕಾನೂನು ಹೋರಾಟ ಶತಃಸಿದ್ಧ. ನಮ್ಮ ಪಕ್ಷ ರೈತರ ಜತೆಗೆ ನಿಲ್ಲುತ್ತದೆ. 475 ದಿನಗಳಿಂದ ರೈತರು ಹೋರಾಟ ನಡೆಸುತ್ತಿದ್ದಾರೆ. ಅಂತಿಮವಾಗಿ ಕೋರ್ಟ್‌ನಲ್ಲೇ ತೀರ್ಮಾನ ಆಗಬೇಕಾಗಿದೆ,'' ಎಂದು ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಮುಂದಿನ ಬಾರಿ ಕೇಂದ್ರದಲ್ಲೂ ನಮ್ದೆ ಸರಕಾರ

ಬೆಂಗಳೂರು: 2028ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ಬರುವುದು ಖಚಿತ. 2029ರಲ್ಲಿ ಕೇಂದ್ರದಲ್ಲೂ ಕಾಂಗ್ರೆಸ್ ಸರಕಾರ ಬರುವುದು ನಿಶ್ಚಿತ ಎಂದು ಸಿಎಂ ಡಿ.ಕೆ.ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಭವನದ ಭಾರತ್ ಜೋಡೊ ಸಭಾಂಗಣದಲ್ಲಿ ಭಾನುವಾರ ನಡೆದ ಎಐಟಿಯುಸಿ(ಇಂಟೆಕ್) 316ನೇ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ''ಇಂಟೆಕ್‌ನಿಂದ ದೇಶದ ಶ್ರಮಿಕರ, ಕಾರ್ಮಿಕರ ಬಲ ಹೆಚ್ಚಾಗಿದೆ. ಇಂದಿರಾ ಗಾಂಧಿಯವರು ಪಕ್ಷದ ಅಧ್ಯಕ್ಷರಾಗಿದ್ದಾಗ ಇಂಟೆಕ್, ಎನ್‌ಎಸ್‌ಯುಐ, ಯುವ, ಮಹಿಳಾ ಘಟಕಗಳು ಕಾಂಗ್ರೆಸ್‌ನ 4 ಆಧಾರ ಸ್ತಂಭಗಳು ಎಂದು ಹೇಳಿದ್ದರು. ನಾನು ವಿದ್ಯಾರ್ಥಿ ನಾಯಕನಾಗಿ ನಂತರ ಮುಖ್ಯವಾಹಿನಿ ರಾಜಕೀಯಕ್ಕೆ ಬಂದವನು. ನನಗೆ ಸಂಘಟನೆಯ ಶಕ್ತಿಯ ಬಗ್ಗೆ ಅರಿವಿದೆ,'' ಎಂದು ಹೇಳಿದರು.

ಕಾರ್ಮಿಕರಿಂದ ಪ್ರಗತಿ: ''ಕೃಷಿಕ, ಶಿಕ್ಷಕ, ಸೈನಿಕ, ಕಾರ್ಮಿಕರಿಲ್ಲದೆ ಸಮಾಜ ಮುನ್ನಡೆಯದು. ಈ ದೇಶಕ್ಕೆ ಕಾರ್ಮಿಕರ ಶ್ರಮ, ಶಕ್ತಿ, ಬದ್ಧತೆ ಸಾಕಷ್ಟು ಕೊಡುಗೆ ನೀಡಿದೆ,'' ಎಂದರು.

''ಜೂನ್ 30ರಿಂದ ಎಸ್ಐಆರ್ ಪ್ರಾರಂಭವಾಗುತ್ತಿದೆ. ಶ್ರಮಿಕರ, ಕಾರ್ಮಿಕರ ಮತಗಳನ್ನು ಡಿಲಿಟ್ ಮಾಡಲಾಗುತ್ತಿದೆ. ಎಲ್ಲರೂ ಇದರ ಬಗ್ಗೆ ಎಚ್ಚರದಿಂದ ಇರಬೇಕು,'' ಎಂದು ಸೂಚಿಸಿದರು.

''ನಮ್ಮ ಗ್ಯಾರಂಟಿ ಯೋಜನೆಗಳು ಕಾರ್ಮಿಕರ, ಮಹಿಳೆಯರ ಹಾಗೂ ಜನಸಾಮಾನ್ಯರ ಪರವಾಗಿವೆ. ಗ್ಯಾರಂಟಿಯನ್ನು ಪ್ರಧಾನಿ ಅವರಿಂದ ಹಿಡಿದು ಎಲ್ಲರೂ ಟೀಕಿಸಿದರು. ದೇಶದಲ್ಲಿ ಬೆಲೆ ಏರಿಕೆ ಆಗಿದ್ದರಿಂದ ಜನರ ಹಿತಕ್ಕಾಗಿ ಗ್ಯಾರಂಟಿ ಯೋಜನೆ ಜಾರಿಗೊಳಿಸಲಾಯಿತು. 50 ಸಾವಿರ ಕೋಟಿ ರೂ. ಗೂ ಹೆಚ್ಚು ಹಣ ಪ್ರತಿ ವರ್ಷ ಖರ್ಚು ಮಾಡಲಾಗುತ್ತಿದೆ. ಟೀಕಿಸಿದವರೇ ನಂತರ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿದ್ದಾರೆ. ನನ್ನ ಮೇಲೆ ನಂಬಿಕೆಯಿಟ್ಟಿರುವ ಪಕ್ಷ ಜವಾಬ್ದಾರಿ ನೀಡಿದೆ. ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುತ್ತೇನೆ,'' ಎಂದು ಹೇಳಿದರು.

ವಿರೋಧದ ನಡುವೆಯೂ ಶಿವಶರಣರ ಸಮಾವೇಶ

ಕನ್ಹೇರಿ ಶ್ರೀ ಸೇರಿ ನೂರಾರು ಸ್ವಾಮೀಜಿಗಳು ಭಾಗಿ | ಬಸವಕಲ್ಯಾಣದಲ್ಲಿ ಪೊಲೀಸ್ ಬಿಗಿ ಭದ್ರತೆ

■ **ವಿಕ ಸುದ್ದಿಲೋಕ** ಬಸವಕಲ್ಯಾಣ (ಬೀದರ್)

ತೀವ್ರ ವಿರೋಧದ ನಡುವೆಯೂ ಪಟ್ಟಣದಲ್ಲಿ ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶ ಭಾನುವಾರ ಅದ್ದೂರಿಯಾಗಿ ಜರುಗಿತು.

ಮಠಾಧೀಶರ ಒಕ್ಕೂಟ, ಹಿಂದೂ ಸರ್ವ ಸಮಾಜಗಳ ಒಕ್ಕೂಟದ ಆಶ್ರಯದಲ್ಲಿ ಮತ್ತು ಕೊಲ್ಲಾಪುರದ ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಹಲವು ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು.

ಕಾರ್ಯಕ್ರಮದಲ್ಲಿ ನಾನಾ ಮಠಗಳ ಮಠಾಧೀಶರು ಮತ್ತು ಹಿಂದೂ ಸಮಾಜದ ಮುಖಂಡರು ಮಾತನಾಡಿ, ''ವಿಶ್ವಗುರು ಬಸವಣ್ಣನವರು ಹಾಗೂ ಶಿವಶರಣರು ಸಮಾಜದ ಸಮಾನತೆ ಮತ್ತು ಧಾರ್ಮಿಕ ಜಾಗೃತಿಗಾಗಿ ಶ್ರಮಿಸಿದವರು. ಅವರ ತತ್ವಗಳು ಇಡೀ ಹಿಂದೂ ಸಮಾಜಕ್ಕೆ ದಾರಿದೀಪವಾಗಿವೆ. ಸಮಾಜವನ್ನು ಒಡೆಯುವ ಶಕ್ತಿಗಳ ವಿರುದ್ಧ ಒಗ್ಗೂಡಬೇಕಿದೆ,'' ಎಂದು ಕರೆ ನೀಡಿದರು.

''ಬಸವಾದಿ ಶರಣರು ಸಮಾಜದಲ್ಲಿದ್ದ ಮೂಢನಂಬಿಕೆ ಮತ್ತು ಅಸಮಾನತೆ ಹೋಗಲಾಡಿಸಲು ಶ್ರಮಿಸಿದರೇ ಹೊರತು, ಅವರು ಎಂದಿಗೂ ಸನಾತನ ಧರ್ಮದಿಂದ ಬೇರೆಯಾಗಲಿಲ್ಲ. ಶಿವನೇ ಸನಾತನ ಧರ್ಮದ ಮೂಲ ಪುರುಷ. ಹೀಗಾಗಿ ಶರಣರ ಪರಂಪರೆ ಮತ್ತು ಹಿಂದೂ ಧರ್ಮ ಬೇರ್ಪಡಿಸಲು ಸಾಧ್ಯವಿಲ್ಲ,'' ಎಂದರು.

''ಲಿಂಗಾಯತ, ವೀರಶೈವ ಸೇರಿ ಹಿಂದೂ ಸಮಾಜದ ಎಲ್ಲ ವರ್ಗದವರು ಒಟ್ಟಾಗಿ ಸಾಗಿದಾಗ ಮಾತ್ರ ಶರಣರು ಕನಸು ಕಂಡ ಕಲ್ಯಾಣ ರಾಜ್ಯ ನಿರ್ಮಿಸಲು ಸಾಧ್ಯ,'' ಎಂದರು.

ಸಮಾವೇಶದಲ್ಲಿ ಭಾಗಿಯಾಗಲು ಕನ್ಹೇರಿ ಶ್ರೀಗಳಿಗೆ ಕಲಬುರಗಿ ಹೈಕೋರ್ಟ್ ಪೀಠ ಷರತ್ತುಬದ್ಧ ಅನುಮತಿ ನೀಡಿದ್ದರಿಂದ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರೂ ವೇದಿಕೆಯಲ್ಲಿ ಭಾಷಣ ಮಾಡಲಿಲ್ಲ.

ತಡೋಳಾದ ರಾಜೇಶ್ವರ ಶಿವಾಚಾರ್ಯರು, ಬೀದರ್‌ನ ಚಿದಂಬರಾಶ್ರಮದ ಡಾ.ಶಿವಕುಮಾರ ಸ್ವಾಮೀಜಿ, ತ್ರಿಪುರಾಂತದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಹವಾ ಮಲ್ಲಿನಾಥ ಮಹಾರಾಜರು, ಹುಡುಗಿಯ ವಿರೂಪಾಕ್ಷ ಸ್ವಾಮೀಜಿ, ಜಯಶಾಂತಲಿಂಗ ಸ್ವಾಮೀಜಿ, ಶಾಂತವೀರ ಶಿವಾಚಾರ್ಯರು, ಶಿವಶರಣಪ್ಪ ವಾಲಿ, ಗುಂಡುರೆಡ್ಡಿ ಕಮಲಾಪುರೆ ಹಾಜರಿದ್ದರು.

ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿ ಭಾನುವಾರ ನಡೆದ ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶವನ್ನು ಕೊಲ್ಲಾಪುರದ ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

> ಸಮಾವೇಶದಲ್ಲಿ ಮಾತನಾಡದಂತೆ ಕನ್ಹೇರಿಯ ಕಾಡಸಿದ್ದೇಶ್ವರ ಶ್ರೀಗಳಿಗೆ ನಿರ್ಬಂಧನೆ ಹೇರಿದ್ದು ಸಾಧುವಲ್ಲ. ಸಂತರು ಮತ್ತು ಶರಣರ ಬಾಯಿ ಮುಚ್ಚಿಸಬೇಡಿ. ರಾಜ್ಯದ ಗೃಹ ಸಚಿವರ ಬಾಯಿ ಮುಚ್ಚಿಸಿದರೆ ಮಾತ್ರ ರಾಜ್ಯದಲ್ಲಿ ಶಾಂತಿ ನೆಲೆಸಲು ಸಾಧ್ಯ.
>
> **-ಸಿದ್ಧಲಿಂಗ ಸ್ವಾಮೀಜಿ** ಆಂದೋಲಾ ಮಠ

ಸಮಾವೇಶ ವಿರೋಧಿಸಿ ಪ್ರತಿಭಟನೆ

ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶ ವಿರೋಧಿಸಿ ಚಲೋ ಬಸವಕಲ್ಯಾಣ ಹೋರಾಟ ಸಮಿತಿ, ಸೌಹಾರ್ದ ಕರ್ನಾಟಕ ವೇದಿಕೆ, ರಾಷ್ಟ್ರೀಯ ಬಸವ ದಳ, ಬಸವ ಕೇಂದ್ರ ಸೇರಿ ನಾನಾ ಸಂಘಟನೆಗಳಿಂದ ಭಾನುವಾರ ನಗರದಲ್ಲಿ ಪ್ರತಿಭಟನೆ ನಡೆಯಿತು. ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಪ್ರಮುಖರು, ''ಜಾತಿ ವ್ಯವಸ್ಥೆ ನಿರ್ಮೂಲನೆ ಮಾಡಿ ಸಮಾನತೆ ಸಾರಿದ ಬಸವಾದಿ ಶಿವಶರಣರಿಗೂ ಹಾಗೂ ವರ್ಣಾಶ್ರಮ ವ್ಯವಸ್ಥೆ ಸಾರುವ ಸನಾತನ ಧರ್ಮಕ್ಕೂ ಯಾವುದೇ ಸ್ವಾಮ್ಯತೆ ಇಲ್ಲ. ಹೀಗಾಗಿ ಬಸವಾದಿ ಶಿವಶರಣರ ಹೆಸರಿನೊಂದಿಗೆ ಹಿಂದೂ ಸಮಾವೇಶ ಜೋಡಿಸುವುದು ಸರಿಯಲ್ಲ,'' ಎಂದು ಕಿಡಿಕಾರಿದರು.

ಅವಧಿಗೂ ಮುನ್ನ ಸಿಎಂ ಕೆಳಗಿಳಿಸಲು ಯತ್ನ: ಆರೋಪ

■ **ವಿಕ ಸುದ್ದಿಲೋಕ** ಕಲಬುರಗಿ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಅವಧಿಗೂ ಮುನ್ನವೇ ಕುರ್ಚಿಯಿಂದ ಕೆಳಗಿಳಿಸಲು ಕಾಂಗ್ರೆಸ್ ಪಕ್ಷದ ಒಳಗಿನ ಕೆಲವು ಶಕ್ತಿಗಳು ಯತ್ನಿಸುತ್ತಿವೆ ಎಂದು ಬ್ರಹ್ಮಶ್ರೀ ನಾರಾಯಣ ಗುರುಶಕ್ತಿ ಪೀಠದ ಪ್ರಣವಾನಂದ ಸ್ವಾಮೀಜಿ ಅವರು ಗಂಭೀರ ಆರೋಪ ಮಾಡಿದರು.

''ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಹಾಗೂ ಸಂಘಟಿಸಲು ಸಿಎಂ ಶಿವಕುಮಾರ್ ಅಪಾರವಾಗಿ ಶ್ರಮಿಸಿದ್ದಾರೆ. ಆದರೆ, ಈಗ ಪಕ್ಷದ ಕೆಲವು ಆಂತರಿಕ ಶಕ್ತಿಗಳು ವ್ಯವಸ್ಥಿತವಾಗಿ ಅವರ ವಿರುದ್ಧ ಪಿತೂರಿ ನಡೆಸುತ್ತಿದ್ದಾರೆ,'' ಎಂದು ಸುದ್ದಿಗೋಷ್ಠಿಯಲ್ಲಿ ಆಪಾದಿಸಿದರು.

'' ನಾವೆಲ್ಲರೂ ಶೀಘ್ರದಲ್ಲೇ ಸಭೆ ನಡೆಸಿ, ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಸೂಕ್ತ ಸಲಹೆಗಳನ್ನು ನೀಡಲಿದ್ದೇವೆ,'' ಎಂದರು.



ಮಹಾಸಭೆ ನಿರ್ಣಯ: ಮಡಿವಾಳ, ಸವಿತಾ ಸಮಾಜ, ಈಡಿಗ, ಉಪ್ಪಾರ, ಗಾಂಗಿಕುಲ ಸೇರಿ ಕೆಟಗರಿ 1 ಮತ್ತು 2ರಲ್ಲಿರುವ ಅತ್ಯಂತ ಸಣ್ಣ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕುಲಶಾಸ್ತ್ರ ಅಧ್ಯಯನ ನಡೆಸಲು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅತಿ ಹಿಂದುಳಿದ ಮಠಾಧೀಶರ ಮಹಾಸಭೆ ಚಿಂತನ ಶಿಬಿರದಲ್ಲಿ ಕೈಗೊಳ್ಳಲಾಗಿದೆ.

ಗಾಣಿಗರ ಪೀಠದ ಪ್ರಣವಾನಂದಪುರಿ ಸ್ವಾಮೀಜಿ, ಬಸವನಾಗಿದೇವ ಶರಣರು, ವಿಶ್ವಕರ್ಮ ಸಮಾಜದ ದೊಡ್ಡೇಂದ್ರ ಸ್ವಾಮೀಜಿ, ಕುಂಬಾರ ಸಮುದಾಯದ ಬಸವ ಮೂರ್ತಿ ಸ್ವಾಮೀಜಿ, ಕುಂಬಾರ ಗುಂಡಯ್ಯ ಸ್ವಾಮೀಜಿ, ಮಾದಿಗ ಸಮುದಾಯದ ಶಿವಮೂರ್ತಿ ಸ್ವಾಮೀಜಿ ಸೇರಿ 25ಕ್ಕೂ ಹೆಚ್ಚು ಅತಿ ಹಿಂದುಳಿದ ಸಮುದಾಯಗಳ ಮಠಾಧೀಶರು ಇದ್ದರು.

ಶಾಂತವೀರಶ್ರೀ ನಿಧನ

ರಾಮದುರ್ಗ (ಬೆಳಗಾವಿ): ಪಟ್ಟಣದ ಶಿವಮೂರ್ತೇಶ್ವರ ಮಠದ ಪೀಠಾಧಿಪತಿ ಶಾಂತವೀರ ಸ್ವಾಮೀಜಿ (74) ಭಾನುವಾರ ಹೃದಯಾಘಾತದಿಂದ ಲಿಂಗೈಕ್ಯರಾದರು.



ಮೂಲತಃ ರಾಮದುರ್ಗ ತಾಲೂಕಿನ ಅವರಾದಿ ಗ್ರಾಮದವರಾದ ಶ್ರೀಗಳು, 1993ರಲ್ಲಿ ಶಿವಮೂರ್ತೇಶ್ವರ ಮಠದ ಪೀಠಾಧ್ಯಕ್ಷರಾದರು. ಸವದತ್ತಿ ಹೊಸಮಠ, ಹಂಪಿ ಹೊಳಿಯ ಮಹಾಲಿಂಗೇಶ್ವರ ವಿರಕ್ತ ಮಠ, ಶಿವಪೇಟೆಯ ಮುರುಘೇಂದ್ರ ವಿರಕ್ತ ಮಠದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು.

ಉತ್ತರ ಕನ್ನಡದ ಹಲವೆಡೆ ಮಳೆ ಅಬ್ಬರ

■ **ವಿಕ ಸುದ್ದಿಲೋಕ** ಕಾರವಾರ

ಉತ್ತರ ಕನ್ನಡ ಜಿಲ್ಲೆಯ ಹಲವೆಡೆ ಭಾನುವಾರ ಮಳೆ ಅಬ್ಬರಿಸಿದೆ. ಕಾರವಾರ ನಗರದಲ್ಲಿ ಮೂರು ತಾಸು ಭರ್ಜರಿ ಮಳೆ ಆಗಿದೆ. ಜಿಲ್ಲೆಯ ಸಾಲ್ಕೋಡು ಪ್ರದೇಶದಲ್ಲಿ 124.0 ಮಿ.ಮೀ. ಮಳೆ ದಾಖಲಾಗಿದೆ.

ಗೋಕರ್ಣದಲ್ಲಿ ನಾಲ್ಕು ತಾಸು ಮಳೆ ಅಬ್ಬರಿಸಿದ್ದು, ಜನಜೀವನ ಅಸ್ತವ್ಯಸ್ತಗೊಂಡಿತ್ತು. ಮಹಾಬಲೇಶ್ವರ ದೇಗುಲದ ತೀರ್ಥ ಹರಿದು ಹೋಗುವ ಜಾಗದಲ್ಲಿ ಅಡೆತಡೆ ಉಂಟಾಗಿ ಗರ್ಭಗುಡಿ ಜಲಾವೃತವಾಗಿತ್ತು. ಹೀಗಾಗಿ ಭಕ್ತರಿಗೆ ಹೊರಗಿನಿಂದ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಕೇಣಿ-ತದಡಿ ರಾಜ್ಯ ಹೆದ್ದಾರಿಯ ಗಂಗಾವಳಿಯ ಜನವಸತಿ ಪ್ರದೇಶಕ್ಕೆ ನೀರು ನುಗ್ಗಿತ್ತು.

ಕುಕ್ಕೆಯಲ್ಲಿ ಮಳೆ: ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಭಾನುವಾರ ಸುರಿದ ಮಳೆ ನಡುವೆಯೂ ಭಕ್ತರು ದರ್ಶನಕ್ಕಾಗಿ ಸರತಿಯಲ್ಲಿ ಗಂಟೆಗಟ್ಟಲೆ ಕಾದು ನಿಂತಿದ್ದರು.

ಧಾರಾಕಾರವಾಗಿ ಸುರಿದ ಮಳೆಗೆ ಉತ್ತರಕನ್ನಡ ಜಿಲ್ಲೆ ಕುಮಟಾ-ಸಿದ್ದಾಪುರ ರಾಜ್ಯ ಹೆದ್ದಾರಿ ಹಾರೋಡಿ ಕ್ರಾಸ್ ಸಮೀಪ ಮುಳುಗಡೆಯಾಗಿ ಸಂಚಾರಕ್ಕೆ ಅಡೆತಡೆಯಾಗಿದೆ.

ಸಿಡಿಲು ಬಡಿದು ವ್ಯಕ್ತಿ ಸಾವು

ಬಾಗಲಕೋಟೆ: ಜಿಲ್ಲೆಯ ಮುಧೋಳ ತಾಲೂಕು ಕಸಬಾಜಂಬಗಿಯಲ್ಲಿ ಸಿಡಿಲು ಬಡಿದು ಭೀಮಪ್ಪ ಬಸಪ್ಪ ಬಾದಾಮಿ (48) ಮೃತಪಟ್ಟಿದ್ದಾರೆ.

ಕಟ್ಟಡ ಕುಸಿದು ಇಬ್ಬರ ಸಾವು

ದೇವದುರ್ಗ (ರಾಯಚೂರು): ಪಟ್ಟಣದ ಹೊಸ ಬಸ್ ನಿಲ್ದಾಣ ಮುಂಭಾಗದ ವಾಣಿಜ್ಯ ಕಟ್ಟಡದ ಮೇಲ್ಭಾಗ ಭಾನುವಾರ ಕುಸಿದು ಇಬ್ಬರು ಯುವಕರು ಮೃತಪಟ್ಟು, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಕ್ಯಾದಿಗೇರಾ ಗ್ರಾಮದ ನಾಗರಾಜ ಚಿದಾನಂದಪ್ಪ (21), ಸಮುದ್ರ ಗ್ರಾಮದ ರವಿಕುಮಾರ ಯಲ್ಲಪ್ಪ (20) ಮೃತರು. ಗಾಯಾಳುಗಳನ್ನು ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಟ್ಟಡ ಕುಸಿತದಿಂದ ನಾಲ್ಕು ಬೈಕ್‌ಗಳು ಜಖಂಗೊಂಡಿವೆ.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಹಾಸ್ಟೆಲ್‌ನಲ್ಲಿ ವಾಸವಿದ್ದ ವಿದ್ಯಾರ್ಥಿಗಳು ಬಸ್ ನಿಲ್ದಾಣಕ್ಕೆ ಬಂದಿದ್ದು ಕಟ್ಟಡದ ಕೆಳಗೆ ಬೈಕ್ ನಿಲ್ಲಿಸಿ ಮಾತನಾಡುತ್ತಿದ್ದರು. ಈ ವೇಳೆ ಹಳೆ ಕಟ್ಟಡದ ಚಾವಣಿ ಹಾಗೂ ಕಬ್ಬಿಣದ ಮೆಟ್ಟಿಲು ಕುಸಿದು ಬಿತ್ತು, ತಕ್ಷಣ ಪೊಲೀಸರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ, ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ಕರೆದೊಯ್ದರು.

ಚಂಡಿಕಾ ಹೋಮ

ಉಡುಪಿ ಜಿಲ್ಲೆಯ ಕೊಲ್ಲೂರು ಮೂಕಾಂಬಿಕಾ ದೇವಾಲಯದಲ್ಲಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಭಾನುವಾರ ಚಂಡಿಕಾ ಹೋಮ ನೆರವೇರಿಸಿದರು.

ಮಾಜಿ ಸಿಎಂ ಸಿದ್ದರಾಮಯ್ಯ ಸಾಂತ್ವನ

ತಿ.ನರಸೀಪುರ (ಮೈಸೂರು): ಯುವಕನ ಕಿರುಕುಳದಿಂದ ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡ ಹಳೆ ಕೆಂಪಯ್ಯನ ಹುಂಡಿ ಗ್ರಾಮಕ್ಕೆ ಮಾಜಿ ಸಿಎಂ ಸಿದ್ದರಾಮಯ್ಯ ಭಾನುವಾರ ಭೇಟಿ ನೀಡಿದ್ದರು. ಶಿವಣ್ಣ ಕುಟುಂಬದವರಿಗೆ ಸಾಂತ್ವನ ಹೇಳಿದರು. ಪ್ರಕರಣ ಸಂಬಂಧ ಪೊಲೀಸರು ಕೈಗೊಂಡಿರುವ ಕ್ರಮಗಳ ಬಗ್ಗೆ ಎಸ್ಪಿ ಅವರಿಂದ ಮಾಹಿತಿ ಪಡೆದರು. ''ತಪ್ಪಿತಸ್ಥರು ಯಾರೇ ಆಗಿದ್ದರೂ ಅವರಿಗೆ ಶಿಕ್ಷೆಯಾಗಬೇಕು. ಯಾರನ್ನೂ ತಪ್ಪಿಸಿಕೊಳ್ಳಲು ಬಿಡಬಾರದು,'' ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರಿಗೆ ಸೂಚಿಸಿದರು. ''ಇಂತಹ ಘಟನೆ ನಡೆಯಬಾರದಿತ್ತು. ಈ ಭಾಗದ ಜನಪ್ರತಿನಿಧಿಯಾಗಿ ನೊಂದವರ ನೋವಲ್ಲಿ ನಾವು ಕೂಡ ಭಾಗಿಯಾಗುತ್ತೇವೆ'' ಎಂದರು. ಮಾಜಿ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಸಿ.ಪುಟ್ಟರಂಗಶೆಟ್ಟಿ ಇದ್ದರು.

ಮೂವರು ಆತ್ಮಹತ್ಯೆ ಮಾಡಿಕೊಂಡ ಕುಟುಂಬದವರ ಭೇಟಿ

ಪೊಲೀಸರ ಗಸ್ತು ವಾಹನಕ್ಕೆ ₹36,500 ದಂಡ!

ಮೈಸೂರು: ನಗರದಲ್ಲಿ ಪೊಲೀಸರ ಗಸ್ತು ವಾಹನಕ್ಕೆ ಸಂಚಾರ ನಿಯಮ ಉಲ್ಲಂಘನೆಗಾಗಿ 36,500 ರೂ. ದಂಡ ಬಿದ್ದಿದೆ. ಎರಡು ವರ್ಷಗಳಿಂದ ಸಂಚಾರ ನಿಯಮ ಉಲ್ಲಂಘಿಸಿದ ಪೊಲೀಸರ ಗಸ್ತು ವಾಹನದ ಮೇಲೆ 71 ಪ್ರಕರಣಗಳು ದಾಖಲಾಗಿರುವುದನ್ನು ವಕೀಲರೊಬ್ಬರು ಪತ್ತೆ ಮಾಡಿ ದಂಡ ವಸೂಲಿಗೆ ಬಂದಿದ್ದ ಪೊಲೀಸರನ್ನೇ ಬೆಸ್ತುಬೀಳಿಸಿದರು.

ಶನಿವಾರ ಕೋರ್ಟ್ ಆವರಣದಲ್ಲಿ ವಾಹನ ಸವಾರರಿಗೆ ದಂಡ ಸಂಗ್ರಹದ ಕೌಂಟರ್ ತೆರೆಯಲಾಗಿತ್ತು. ಅಲ್ಲಿಗೆ ಬಂದಿದ್ದ ಪೊಲೀಸರ 112 ಗಸ್ತು ವಾಹನ ನೋಡಿದ ವಕೀಲ ಪುನೀತ್ ಎನ್. ಕುತೂಹಲಕ್ಕಾಗಿ ಆ ವಾಹನದ ನೋಂದಣಿ ಸಂಖ್ಯೆ ನೀಡಿ ದಂಡ ಪರಿಶೀಲಿಸುವಂತೆ ಕೋರಿದರು. ಶೇ.50 ರಿಯಾಯಿತಿ ಘೋಷಿಸಿರುವುದರಿಂದ 18,250 ರೂ. ದಂಡ ಬಾಕಿ ಇರುವುದು ಗೊತ್ತಾಯಿತು. ''ಇದು ನಿಮ್ಮದೇ ವಾಹನದ ದಂಡ,'' ಎಂದು ಹೇಳಿದಾಗ ಪೊಲೀಸರು ನಿರುತ್ತರರಾದರು ಎಂದು ವಕೀಲ ಪುನೀತ್ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಚೆಟ್ಟಳ್ಳಿ ಕಾಫಿ ಸಂಶೋಧನಾ ಕೇಂದ್ರದಲ್ಲಿ ಟಿಶ್ಯೂ ಕಲ್ಚರ್ ಸಂಶೋಧನೆ | ಬೀಜಗಳ ಅವಲಂಬನೆಗೆ ತಿಲಾಂಜಲಿ

ಜೈವಿಕ ತಂತ್ರಜ್ಞಾನದಿಂದ ಕಾಫಿ ತಳಿ ಅಭಿವೃದ್ಧಿ

■ **ಜಗದೀಶ್ ಜೋಡುಬೀಟಿ** ಗೋಣಿಕೊಪ್ಪ (ಕೊಡಗು)
jagadishjodubeeti@gmail.com

ಜೈವಿಕ ತಂತ್ರಜ್ಞಾನದಿಂದ ಕಾಫಿ ತಳಿಯ ಅಭಿವೃದ್ಧಿಗೆ ಕೊಡಗಿನ ಚೆಟ್ಟಳ್ಳಿ ಕಾಫಿ ಸಂಶೋಧನಾ ಕೇಂದ್ರ, ಟಿಶ್ಯೂ ಕಲ್ಚರ್ ಸಂಶೋಧನೆಯ ಮೂಲಕ ಹೊಸ ಪ್ರಯೋಗ ಮಾಡಿದೆ. ಕಾಫಿ ತಳಿಗಳ ಅಭಿವೃದ್ಧಿಗೆ ಈ ಹಿಂದೆ ಇದ್ದ ಬೀಜಗಳ ಅವಲಂಬನೆಗೆ ಬದಲು ಒಂದು ಎಲೆಯಿಂದ ಸಾವಿರಾರು ಕಾಫಿ ಗಿಡಗಳನ್ನು ಉತ್ಪಾದಿಸುವ ಅಚ್ಚರಿಯನ್ನು ಆವಿಷ್ಕರಿಸಿದೆ.

ಹವಾಮಾನ ಬದಲಾವಣೆ, ಹೆಚ್ಚುತ್ತಿರುವ ತಾಪಮಾನ, ಅನಿಯಮಿತ ಮಳೆ, ಹೊಸ ರೋಗಗಳು ಹಾಗೂ ಕೀಟಗಳ ಹಾವಳಿ ಮತ್ತು ಇಳಿಮುಖವಾಗುತ್ತಿರುವ ಉತ್ಪಾದನೆ ಕಾಫಿ ಬೆಳೆಗಾರರಿಗೆ ಸವಾಲಾಗಿ ಪರಿಣಮಿಸಿದೆ. ಸಾಂಪ್ರದಾಯಿಕ ವಿಧಾನಗಳಲ್ಲಿ ಗುಣಮಟ್ಟದ ಸಸಿಗಳ ಲಭ್ಯತೆ ಸೀಮಿತವಾಗಿರುವ ಕಾರಣ ಹೆಚ್ಚು ಇಳುವರಿ ನೀಡುವ, ರೋಗ ನಿರೋಧಕ ಮತ್ತು ಹವಾಮಾನ ವೈಪರೀತ್ಯಗಳನ್ನು ತಡೆದುಕೊಳ್ಳಬಲ್ಲ ಹೊಸ ಕಾಫಿ ತಳಿಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ವಿಜ್ಞಾನಿಗಳು ಮಾಡಿದ್ದಾರೆ.

ಈ ಯೋಜನೆಯನ್ನು ಮೊದಲಿಗೆ ಮೈಸೂರಿನ ಕಾಫಿ ಮಂಡಳಿ ಕೇಂದ್ರದಲ್ಲಿ ಆರಂಭಿಸಲಾಗಿತ್ತು. ಅಲ್ಲಿನ ಯಶಸ್ವಿ ಫಲಿತಾಂಶಗಳ ಹಿನ್ನೆಲೆಯಲ್ಲಿ 2025ರ ಮಾರ್ಚ್‌ನಲ್ಲಿ ಚೆಟ್ಟಳ್ಳಿಗೆ ಸಂಶೋಧನೆ ಸ್ಥಳಾಂತರಿತವಾಯಿತು. ಇಲ್ಲಿ ಅತ್ಯಾಧುನಿಕ ಪ್ರಯೋಗಾಲಯಗಳು, ನಿಯಂತ್ರಿತ ತಾಪಮಾನ ವ್ಯವಸ್ಥೆಗಳು ಹಾಗೂ ಸಸ್ಯ ಬೆಳವಣಿಗೆ ಕೊಠಡಿಗಳನ್ನು ಸ್ಥಾಪಿಸಿ ಸಂಶೋಧನೆಗೆ ಪೂರಕವಾದ ವಾತಾವರಣ ನಿರ್ಮಿಸಲಾಗಿದೆ.

ಕಾಫಿ ತಳಿಗಳ ಅಭಿವೃದ್ಧಿ ಚೆಟ್ಟಳ್ಳಿ ಉಪಕೇಂದ್ರ ಟಿಶ್ಯೂ ಕಲ್ಚರ್ ಪ್ರಯೋಗಕ್ಕೆ ಮುಂದಾಗಿರುವುದು.

ಏನಿದು ಟಿಶ್ಯೂ ಕಲ್ಚರ್?

ಟಿಶ್ಯೂ ಕಲ್ಚರ್ ಸಸ್ಯದ ಒಂದು ಸಣ್ಣ ಜೀವಂತ ಭಾಗವಾದ ಎಲೆ, ಕಾಂಡ ಅಥವಾ ಮೊಗ್ಗನ್ನು ಸಂಪೂರ್ಣ ನೈರ್ಮಲ್ಯಯುತ ಪ್ರಯೋಗಾಲಯ ಪರಿಸರದಲ್ಲಿ ಪೋಷಕಾಂಶಯುಕ್ತ ಮಾಧ್ಯಮದಲ್ಲಿ ಬೆಳೆಸುವ ವೈಜ್ಞಾನಿಕ ವಿಧಾನವಾಗಿದೆ. ಈ ಕೋಶಗಳು ಕ್ರಮೇಣ ವೃದ್ಧಿಹೊಂದಿ ಸಂಪೂರ್ಣ ಗಿಡಗಳಾಗಿ ರೂಪುಗೊಳ್ಳುತ್ತವೆ.

ಬೀಜದಿಂದ ಬೆಳೆದ ಗಿಡಗಳಲ್ಲಿ ಗುಣಲಕ್ಷಣಗಳಲ್ಲಿ ವ್ಯತ್ಯಾಸ ಕಂಡುಬರುವ ಸಾಧ್ಯತೆ ಇದ್ದರೂ, ಟಿಶ್ಯೂ ಕಲ್ಚರ್ ಮೂಲಕ ಉತ್ಪಾದನೆಯಾಗುವ ಗಿಡಗಳು ತಾಯಿ ಗಿಡದ ಎಲ್ಲಾ ಉತ್ತಮ ಗುಣಗಳನ್ನು ಉಳಿಸಿಕೊಳ್ಳುತ್ತವೆ. ಇದರಿಂದ ಸಮಾನ ಬೆಳವಣಿಗೆ, ಉತ್ತಮ ಇಳುವರಿ, ಉತ್ತಮ ಗುಣಮಟ್ಟದ ಕಾಫಿ ಬೀಜಗಳು ಹಾಗೂ ರೋಗ ನಿರೋಧಕ ಶಕ್ತಿ ದೊರೆಯುತ್ತದೆ.

> ಸಂಶೋಧನೆಯ ಜತೆಗೆ ಚೆಟ್ಟಳ್ಳಿ ಕೇಂದ್ರವು ಜೈವಿಕ ತಂತ್ರಜ್ಞಾನ ವಿದ್ಯಾರ್ಥಿಗಳಿಗೆ ತರಬೇತಿ ಹಾಗೂ ಇಂಟರ್ನ್‌ಶಿಪ್ ಕಾರ್ಯಕ್ರಮಗಳನ್ನೂ ನಡೆಸುತ್ತಿದೆ.
>
> **-ಪುತ್ತರಿರ ಕರುಣ್ ಕಾಳಯ್ಯ** ಕೃಷಿಕ, ಚೆಟ್ಟಳ್ಳಿ

> ಟಿಶ್ಯೂ ಕಲ್ಚರ್ ಮೂಲಕ ಬೆಳೆಸಲಾದ ಕಾಫಿ ಸಸಿಗಳನ್ನು ಆಯ್ದ ಬೆಳೆಗಾರರು ಹಾಗೂ ಕಾಫಿ ಮಂಡಳಿಯ ವಿವಿಧ ಘಟಕಗಳಿಗೆ ಪ್ರಾಯೋಗಿಕವಾಗಿ ವಿತರಿಸಲಾಗಿದ್ದು, ಅವುಗಳ ಬೆಳವಣಿಗೆ, ಇಳುವರಿ ಸಾಮರ್ಥ್ಯ ಮತ್ತು ರೋಗ ನಿರೋಧಕತೆಯನ್ನು ವಿವಿಧ ಪರಿಸರಗಳಲ್ಲಿ ಪರೀಕ್ಷಿಸಲಾಗುತ್ತಿದೆ.
>
> **-ಡಾ.ಸಿ.ಬಾಬು** ಮುಖ್ಯಸ್ಥ, ಕಾಫಿ ಉಪ ಸಂಶೋಧನಾ ಕೇಂದ್ರ, ಚೆಟ್ಟಳ್ಳಿ

ಕೊಡಗು ಸೇರಿದಂತೆ ಭಾರತದ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಅತಿಯಾದ ಮಳೆ, ಹೆಚ್ಚುತ್ತಿರುವ ಉಷ್ಣಾಂಶ ಮತ್ತು ಹೊಸ ಕೀಟ, ರೋಗಗಳ ಪರಿಣಾಮ ಹೆಚ್ಚುತ್ತಿರುವುದರಿಂದ, ಇವುಗಳನ್ನು ಎದುರಿಸಬಲ್ಲ ಅರೇಬಿಕಾ ಮತ್ತು ರೋಬಸ್ಟಾ ತಳಿಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಕಾಫಿ ಮಂಡಳಿಯು ಇತ್ತೀಚೆಗೆ ಬಿಡುಗಡೆ ಮಾಡಿರುವ 'ಸಿಸಿಆರ್‌ಐ ಶತಾಬ್ದಿ' ಹಾಗೂ 'ಸುರಕ್ಷಾ' ಅರೇಬಿಕಾ ತಳಿಗಳು ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿವೆ ಎಂದು ವಿಜ್ಞಾನಿಗಳು ಮಾಹಿತಿ ನೀಡಿದ್ದಾರೆ.

TIMES interact
Connecting People, Connecting Needs.
ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ADMINISTRATION

EXECUTIVES

ALWACHSEND TRAINING & PLACEMENT SERVICES PVT. LTD.
• Business Development Manager: 10 year's Experience
• Marketing Manager: 10 year's Experience
• HR: 10 years Experience
• Receptionist: 5 year's Experience
Timings: 10:00 am to 6:00 pm
91873 73117 / 98456 19651
Jayanagar, Bengaluru-41.

MARKETING, ADVERTISING & SALES

SALES

WANTED Sales Men/Girls for Ready Made Blouse Showroom at Chickpete. Age 22 Years to 40 Years Contact Manoj Bafna: 9448121073

MEDICAL

MEDICAL

WANTED FOR Hospital Pharmacy D Pharma Pharmacist Contact: Chaitanya Hospital No,80/117, P&T Colony R.T.Nagar Bangalore: 5600032, Call: 9900520357

OTHER VACANCIES

DRIVERS

WANTED Drivers, Valid Licence with or without Vehicle (Part / Full Time), in & Around Vijay Nagar & Basaveshwaranagar Ct 9845048051

GENERAL

WE are Hiring! Govt. Officials, Senior Citizens, Housewives. Part / Full Time work from Home. Age: 30 to 65, SSLC & Above. Free Training. Good Income + Incentives. 9448957455, 8073937989.

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

SECURITY

ಬೇಕಾಗಿದ್ದಾರೆ: ಸೆಕ್ಯೂರಿಟಿ ಗಾರ್ಡ್ ಸಂಬಳ 11000, ಸೆಕ್ಯೂರಿಟಿ ಸೂಪರ್ ವೈಸರ್ ರೂ. 13000, ಡೆವಲಪ್ಮೆಂಟ್ ಆಫೀಸರ್, ರೂಂ ಊಟ ಉಚಿತ. ವಯಸ್ಸು 25 ರಿಂದ 55, ಬೆತ್ತನಗೆರೆ, ಕೆಂಚನಪುರ, ನೆಲಮಂಗಲ, ಕೆಂಗೇರಿ. ಸಂ: 94495 62316 / 73960 16024.

GDA Security (P) Ltd. Urgently requires experienced Field Officers for security with good communication & field experience Contact: 7760754075 / 9845042347

WORK FROM HOME

GOOD Monthly Income Top MNC In Blr Hiring Rtd Govt, Pvt, Defence, Bank, Teacher, VRS, NRI, IT, CA, Sr.CITIZEN, HOUSEWIFE Age: 30-70 years. Call: 98456 73443 / 70028 08202

JOB WANTED

WANTED Exp Field officer near doddbalapura and office accountant near Bangalore contact: 9845044293

ಪ್ರವಾಸ TRAVEL

TOURS & TRAVELS

16/7/2026 ಗುಜರಾತ್ ಗಿರ್ ಲಯನ್ ಸಫಾರಿ ನಾಲ್ಕು ಜ್ಯೋತಿರ್ಲಿಂಗ ವಿಮಾನ: 29/7/26 ರಾಜಸ್ಥಾನ ಪ್ರವಾಸ: 8/8/2026 ಕಾಶಿ, ಗಯ, ಅಯೋಧ್ಯೆ: 10/8/26 ಪುರಿ ಜಗನ್ನಾಥ, ಕೋಲ್ಕತಾ: 24.7.26 ಶ್ರೀಶೈಲ, ಮಂತ್ರಾಲಯ, ಹೈದರಾಬಾದ್ 18/8/2026 ಥೈಲ್ಯಾಂಡ್ ಮಲ್ಲಿಕಾರ್ಜುನ ಪ್ಯಾಕೇಜ್ ಮೊ: 8496044942, 8277409101

TIMES TRIBUTE PAYING HOMAGE TO THE DEPARTED SOUL ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ಇರ್ಫಾನ್ ಶೇಖ್ 8088815336
irfan.shekh@timesofindia.com

ಶ್ರೇಯಸ್ ಟೂರ್ಸ್ 03.07.26, 22.07.26 10ದಿನ 35,000 ಅಖಂಡ ಆಂಧ್ರ-ತೆಲಂಗಾಣ ರಾಜ್ಯ ಪ್ರವಾಸ. 15.07.26, 01.08.26 15ದಿನ 45000 ಅಖಂಡ ಮಧ್ಯ ಪ್ರದೇಶ ರಾಜ್ಯಪ್ರವಾಸ(ಅಮರಕಂಠಕ, ಮಯ್ಯಾರ್). 22.07.26, 22.08.26 10ದಿನ 35,000 ಅಖಂಡ ಕೇರಳ ರಾಜ್ಯ ಪ್ರವಾಸ. 22.07.26, 28.09.26 5ದಿನ 18,000 ಕಾಶಿ, ಗಯಾ, ಪ್ರಯಾಗ್, ಅಯೋಧ್ಯೆ. 22.07.26, 22.08.26 9ದಿನ 30,000 ಅಖಂಡ ಗುಜರಾತ್ ರಾಜ್ಯ ಪ್ರವಾಸ. 22.07.26, 22.08.26 10ದಿನ 35,000 ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 8073824856, 9606032154

ಸೇವೆಗಳು SERVICES

ASTROLOGY

ನಿಮ್ಮ ಜೀವನದ ಅತ್ಯಂತ ಕಷ್ಟಕರ ಹಾಗೂ ಕಠಿಣ ಸಮಸ್ಯೆಗಳಿಗೆ ಶಾಸ್ತ್ರೋಕ್ತ ಶಾಶ್ವತ ಪರಿಹಾರವಿದೆ ಪಿಎಲ್ ಜೋಶಿ ಬೆಂಗಳೂರು. 9663365085

personal

CHANGE OF NAME

I, 14880284X, Sep/MT, Pradeep Kumar Dwivedi of 1 ATC my mother changed name Vidya Vati to Sheela, for all purpose.

I Yadunatha Mooganahally Veerannagowda S/O, Veeranna Gowda M B R/o N0-24,9th Cross,near Kanteerava Studio, Parimala Nagara,nandini Layout, Bengaluru-560096 have changed my name to Yadunath Mooganahally Veerannagowda.

I, Prashanth Vembar, S/O of V S Pramod Kumar, aged about 38 years, residing at No 306, Apoorva Meadows, Yelahanka, Bangalore, Karnataka 560094 do declare that Prashanth Vembar, Prashanth Pramodkumar Vembar and Prashanth V P refer to the same person. Henceforth, I will use Prashanth Vembar for all legal purposes.

I Aqsa Sehreen D S/O, Dadapeer R/o No.26, 2nd Floor 3rd Cross 4th Main Lalbagh Bangalore-560027 have changed my name to Aqsa Sehreen.

I,CHANDER MOHAN,S/O; SATISH KUMAR GOEL, R/O: NO.204,TOWER1,MANA MACASA EMERALD,2ND FLOOR,SARJAPUR ROAD,BLR-560035. Have changed my name as CHANDER MOHAN GOEL.

I, Mohammed Hayath Amanulla S/o Mohammed Amanulla R/o No 53 2nd Floor Sajida Manzil 4th Main Maruthi HBCS Layout BTM 1st Stage, Bengaluru 560029. Changed my name as Mohammed Hayath.

I, KATYAYANI RAMACHENDRUNI ,WO; VENKATA RAJARAM RAMACHANDRUNI,R/O:REA 403, Block 12, Purva Riviera, Near Spice Garden, Marathahalli,Blr-560037. Have changed my name as KATYAYANI PINGALI.

I, ASHU, S/o NARINDER PAL SINGH, R/o House No. 256, Street No. 1 Near Jimkhana Club 5-B, New Shastri Nagar Mandi Gobindgarh Punjab-14731. I have changed my name to ASHU ARORA vide affidavit dated: 24/06/2026 FOR ALL FUTURE PURPOSES.

I, Khushi Asodariya, residing at 601, N Block, Purva Palm Beach, Hennur, Bangalore, have changed my name from Asodariya Khushi Rajeshbhai to Khushi Asodariya and shall be known as Khushi Asodariya for all purposes.

I, Pari Jain, D/O Manju Ravikumar Jain, aged about 12 years, residing at Leela Palace No 4/6 G-002 East End Beemanna Garden, Shantinagar, Bangalore 560027 declare that Pari Jain and Pari Vishalkumar Patel refer to the same person. Henceforth, I will use Pari Jain for all legal purposes.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

I, Vora Himaben Ashvinkumar , W/O; Brijeshkumar Arvindbhai Savaj, R/O: B-1309, Folium By Sumadhura, Ramagondanahalli, Borewell Rd, Whitefield, Blr - 560066. Have changed my name as Hima Brijeshkumar Savaj.

I, Vasanthkumar s/o Ganganna, Residing at No:107, Sunnagatta Village Alurduddanahalli post Devanahalli Taluk, Bangalore Rural-562110, I Have Changed My Father Name: SIDDAGANGAPPA to GANGANNA,

I, PRIYA DARSINI BRITTO ANGELO, W/o Stephen David Mariasandanam, R/o No 474, 3rd Cross, 4th main Royal Shelters, Devarachikkanahalli, IIMB Post,Bengaluru-560076. I have changed my name to ANGELO PRIYADARSINI BRITTO vide affidavit dated: 20/06/2026 For All Future Purposes.

I, VENKATA RAJARAM RAMACHENDRUNI,S/O; SRIHARI RAO RAMACHANDRUNI, R/O: REA 403, Block 12,Purva Riviera,Near Spice Garden, Marathahalli, Blr -560037.Have changed my name as VENKATA RAJARAM RAMACHANDRUNI.

I, MRMA SULTANA, W/o GANESH HAVANUR, R/o Platinum city apts 5th Floor, C-Block C-5-12 Peenya, near Peenya metro Station Bangalore-560022. I have changed my name to VEDICA vide affidavit dated: 24/06/2026 FOR ALL FUTURE PURPOSES.

I Chittibabu Loganathan S/o Loganathan, aged 46 yrs residing at Valepura Dinne Valepura Bengaluru-560087 have changed my Daughter's name Branda C to "BRINDA C" Vide affidavit date18/06/2026 sworn before notary Yankoba.

I Chittibabu Loganathan S/o Loganathan, aged 46 yrs residing at Valepura Dinne Valepura Bengaluru-560087 have changed my son's name Yesavanth to "YESHWANTH C" Vide affidavit dated 18/06/2026 sworn before notary Yankoba.

I, Rajat balwanth residing at 2112 phoenix one apartment Rajajinagar b'lore 560010 have changed my name to RAAJAT BALWANTH vide affidavit date 26/06/26 before notary C Srinivasa

I, Maskar Shrima Bai, M/o, JC 671050M–Sub Maj–Maskar Namdev Ganapati, R/o, Madyal, Kolhapur, Maharashtra, changed my name to Shrimabai Ganpati Maskar, for all purpose.

I Seema Mann W/o Vineet Mann R/o 72 Chandramouleshwara Layout Hunsamaranahalli Bangalore has changed my name from SEEMA to SEEMA MANN for all future purposes

I, Maskar Ganapati Nana, F/o, JC 671050M–Sub Maj–Maskar Namdev Ganapati, R/o, Madyal, Kolhapur, Maharashtra, changed my name to Ganpati Nana Maskar, for all purpose.

I, Mohd Amanulla S/o Abdul Hakim R/o No 53 Ground Floor Sajida Manzil 4th Main Maruthi HBCS Layout BTM 1st Stage, Bengaluru 560029. Changed my name as Mohamed Amanulla.

I, Pookatil Avinash Nandakumar, S/o Pookattill Nandakumar Parameshwaran, R/o 3014,SS3, Sobha Hill View, Nagegowdanapalya, Bangalore have changed my name to Avinash Nandakumar for all purposes.

I Ramya D/O, Gopal Shetty R/o Slv Grand 305 4th Floor Central Excise Layout, 4th Cross, Shakti Nagar, Sri Balaji Krupa Layout, Rk Hegde Nagar, Bengaluru, Karnataka 560077 have changed my name to Ramya Shetty.

I, Mamata Dey, M/o, 14855153F–Nk/MT–Manoj Kumar Dey, R/o, Howaibari, Khowai, Tripura, changed name to Mamata Rani Dey, for all purpose.

I, Inja Devi, M/o,14851350M-Hav/Clk–Aman Kumar Yadav, R/o, Dharampur, Bela, Varanasi, changed my name from Inja Devi to Inja, for all purpose.

I, Nirupama Samal resident at flat # 009, Tirumala Homes, opp VVIS School, Kodipalya, Kengeri, Bangalore 560060 have changed my name to Nirupama Vijay Rao

I, Abhilasha Srinivasa D/O Srinivasa R/O Tokatimmanadoddi Kaggalahalli Ramanagar 562112, changed my name as Abhilasha Ramesh

I, Ramgulam Yadav, F/o, 14851350M-Hav/Clk–Aman Kumar Yadav, R/o, Dharampur, Bela, Varanasi, changed my name from Ramgulam Yadav to Ram Gulam, for all purpose.

ಇಂದಿನಿಂದ ವಿಂಬಲ್ಡನ್ ಗ್ರ್ಯಾನ್ ಸ್ಲಾಮ್

ಮತ್ತೆ ಕಣಕ್ಕೆ ಸೆರೆನಾ, ವೀನಸ್

ಲಂಡನ್: ವರ್ಷದ ಮೂರನೇ ಗ್ರ್ಯಾನ್ ಸ್ಲಾಮ್ ವಿಂಬಲ್ಡನ್ ಟೆನಿಸ್ ಟೂರ್ನಿ ಇಲ್ಲಿನ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಜೂನ್ 29ರಿಂದ ಜುಲೈ 12ರವರೆಗೆ ನಡೆಯಲಿದೆ. ಅಮೆರಿಕದ ಸೆರೆನಾ ವಿಲಿಯಮ್ಸ್ ಮತ್ತು ಅವರ ಸಹೋದರಿ ವೀನಸ್ ವಿಲಿಯಮ್ಸ್ ಕಣಕ್ಕಿಳಿಯುತ್ತಿರುವುದು ಈ ಬಾರಿಯ ಆಕರ್ಷಣೆಯಾಗಿದೆ. ಈ ಮಧ್ಯೆ, ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಕ್ರಮವಾಗಿ ಕಳೆದ ಬಾರಿ ಚಾಂಪಿಯನ್ ಪಟ್ಟ ಗೆದ್ದಿರುವ ಜನ್ನಿಕ್ ಸಿನ್ನರ್ ಮತ್ತು ಇಗಾ ಸ್ವಿಯಾಟೆಕ್ ಪ್ರಶಸ್ತಿ ಉಳಿಸಿಕೊಳ್ಳುವ ಇರಾದೆಯಲ್ಲಿದ್ದಾರೆ.

ಸದ್ಯ 44 ವರ್ಷದ ಸೆರೆನಾ ಮಹಿಳೆಯರ ಸಿಂಗಲ್ಸ್ ಮಾತ್ರವಲ್ಲದೆ, 46 ವರ್ಷದ ಸಹೋದರಿ ವೀನಸ್ ಜತೆ ಡಬಲ್ಸ್ ವಿಭಾಗದಲ್ಲೂ ಆಡಲಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಸ್ಪರ್ಧಾ ಕಣದಿಂದ ದೂರು ಉಳಿದಿರುವ ಸೆರೆನಾ, ಮತ್ತೆ ಎರಡನೇ ಇನಿಂಗ್ಸ್‌ಗೆ ಅಣಿಯಾಗಿದ್ದಾರೆ.

ಏತನ್ಮಧ್ಯೆ, ಮಾಜಿ ನಂ. 1 ಆಟಗಾರ ನೊವಾಕ್ ಜೊಕೊವಿಕ್ ದಾಖಲೆಯ 25ನೇ ಗ್ರ್ಯಾನ್ ಸ್ಲಾಮ್ ಗೆಲ್ಲುವ ಗುರಿಯೊಂದಿಗೆ ಸ್ಪರ್ಧಿಸುತ್ತಿದ್ದಾರೆ.

ಪ್ರಮೋದ್‌ಗೆ ಸ್ವರ್ಣ

ಡಬ್ಲಿನ್: ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ ಪ್ರಮೋದ್ ಭಗತ್ ಭಾನುವಾರ ಮುಕ್ತಾಯಗೊಂಡ ಬ್ರಿಟಿಷ್ ಮತ್ತು ಐರಿಷ್ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಎಸ್‌ಎಲ್ 3 ವಿಭಾಗದಲ್ಲಿ ಸ್ವರ್ಣ ಪದಕ ಜಯಿಸಿದ್ದಾರೆ. ಫೈನಲ್‌ನಲ್ಲಿ ಅವರು ಸಹ ಆಟಗಾರ ನಿತೇಶ್ ಕುಮಾರ್ ವಿರುದ್ಧ 23-21, 21-14ರಲ್ಲಿ ಜಯ ಗಳಿಸಿ ಪ್ರಶಸ್ತಿಗೆ ಭಾಜನರಾದರು. ಮಿಶ್ರ ಡಬಲ್ಸ್‌ನ ಎಸ್‌ಎಲ್ 3 ಎಸ್‌ಯು5 ವಿಭಾಗದಲ್ಲೂ ಭಗತ್ ಕಂಚಿನ ಪದಕ ಜಯಿಸಿದ್ದಾರೆ. ಈ ಮಧ್ಯೆ, ಕೃಷ್ಣನಾಗರ್ ಮಿಶ್ರ ಡಬಲ್ಸ್‌ನ ಎಸ್‌ಎಚ್ 6 ವಿಭಾಗದಲ್ಲಿ ನಿತ್ಯಾ ಶ್ರೆ ಜತೆ ಬೆಳ್ಳಿ ಪದಕ ಜಯಿಸಿದ್ದಾರೆ.

ನಗಾಲ್‌ಗೆ ಎಟಿಪಿ ಚಾಲೆಂಜರ್ ಕಿರೀಟ

ಹೊಸದಿಲ್ಲಿ: ಭಾರತದ ಟೆನಿಸ್ ಆಟಗಾರ ಸುಮಿತ್ ನಗಾಲ್ ಸುಮಾರು 2 ವರ್ಷಗಳ ತರುವಾಯ ಮೊದಲ ಎಟಿಪಿ ಚಾಲೆಂಜರ್ ಕಿರೀಟ ಗೆದ್ದುಕೊಂಡಿದ್ದಾರೆ. ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅವರು 6-3, 7-5 ಸೆಟ್‌ಗಳಿಂದ ಫ್ರಾನ್ಸ್‌ನ ಫೆಲಿಕ್ಸ್ ಬಾಲ್‌ಶಾ ವಿರುದ್ಧ ಗೆದ್ದು ಇಂಟಾರೊ ಓಪನ್ ಕಿರೀಟಕ್ಕೆ ಮುತ್ತಿಟ್ಟರು. ಇದು ನಗಾಲ್‌ಗೆ ಒಲಿದ 7ನೇ ಎಟಿಪಿ ಸಿಂಗಲ್ಸ್ ಹಾಗೂ 5ನೇ ಕ್ಲೇಕೋರ್ಟ್ ಪ್ರಶಸ್ತಿ ಇದಾಗಿದೆ.

ಭಾರತದ ಟಿ20 ಪ್ರಶಸ್ತಿ ಕನಸು ಭಗ್ನ

ನಿರ್ಣಾಯಕ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಮುಗ್ಗರಿಸಿದ ಹರ್ಮನ್‌ಪ್ರೀತ್ ಬಳಗ

ಲಂಡನ್: ನಿರಾಶಾದಾಯಕ ಪ್ರದರ್ಶನ ನೀಡಿದ ಭಾರತ ತಂಡ ಮಹಿಳೆಯರ ಟಿ20 ವಿಶ್ವಕಪ್‌ನ ತನ್ನ ನಿರ್ಣಾಯಕ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ವಿರುದ್ಧ ಪರಾಭವಗೊಂಡಿತು. ಹೀಗಾಗಿ ಚೊಚ್ಚಲ ಟಿ20 ವಿಶ್ವಕಪ್ ಗೆಲ್ಲುವ ಭಾರತದ ಕನಸು ಈ ಬಾರಿಯೂ ಭಗ್ನಗೊಂಡಿತು.

ಲಾರ್ಡ್ಸ್‌ನಲ್ಲಿ ಭಾನುವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ 4 ವಿಕೆಟ್ ನಷ್ಟಕ್ಕೆ 170 ರನ್ ಕಲೆಹಾಕಿತು. ಇದಕ್ಕೆ ಪ್ರತಿಯಾಗಿ ಆಸ್ಟ್ರೇಲಿಯಾ, ಎಲಿಸ್ ಪೆರ್ರಿ(56) ಮತ್ತು ಆ್ಯಶ್ಲೆಗಾರ್ಡ್ನರ್ (53*) ಅವರ ಸಾಹಸದಿಂದ 19 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 172 ರನ್ ಗಳಿಸಿ ವಿಜಯ ದುಂದುಬಿ ಮೊಳಗಿಸಿತು. ಇದರೊಂದಿಗೆ ಅಜೇಯ ದಾಖಲೆಯೊಂದಿಗೆ ಆಸ್ಟ್ರೇಲಿಯಾ ಸೆಮೀಸ್‌ಗೆ ಮುನ್ನಡೆಯಿತು.

ಹಿಂದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಸೋತ ಕಾರಣ ಆಸ್ಟ್ರೇಲಿಯಾ ವಿರುದ್ಧ ಗೆಲ್ಲಲೇಬೇಕಾದ ಒತ್ತಡದಲ್ಲಿ ಕಣಕ್ಕಿಳಿದ ಭಾರತಕ್ಕೆ ನಿರೀಕ್ಷಿತ ಮಟ್ಟದಲ್ಲಿ ಬ್ಯಾಟಿಂಗ್ ಮಾಡುವಲ್ಲಿ ವಿಫಲಗೊಂಡಿತು. ಸ್ಮೃತಿ(38), ಶಫಾಲಿ(34) ಮತ್ತು ಜೆಮಿಮಾ (34) ಸಣ್ಣ ಮೊತ್ತಕ್ಕೆ ಸೀಮಿತರಾದರೆ ಹರ್ಮನ್‌ಪ್ರೀತ್ 27 ಎಸೆತಗಳಲ್ಲಿ 6, ಫೋರ್, 3 ಸಿಕ್ಸರ್ ಒಳಗೊಂಡ 56 ರನ್ ಗಳಿಸಿ ಔಟಾದರು.

ಆ್ಯಶ್ಲೆಗಾರ್ಡನರ್

ಎಲಿಸ್ ಪೆರ್ರಿ

ಸೆಮಿಫೈನಲ್ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ
ಜೂನ್ 30	ಆಸ್ಟ್ರೇಲಿಯಾ vs ವೆಸ್ಟ್ ಇಂಡೀಸ್	ಲಂಡನ್
ಜುಲೈ 2	ಇಂಗ್ಲೆಂಡ್ vs ದಕ್ಷಿಣ ಆಫ್ರಿಕಾ	ಲಂಡನ್
ಜುಲೈ 5	ಫೈನಲ್	ಲಂಡನ್

ಸಂಕ್ಷಿಪ್ತ ಸ್ಕೋರ್

ಭಾರತ: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 170
ಆಸ್ಟ್ರೇಲಿಯಾ: 19 ಓವರ್‌ಗಳಲ್ಲಿ 4 ವಿಕೆಟ್‌ಗೆ 172.

ಐರ್ಲೆಂಡ್‌ಗೆ ತಲೆಬಾಗಿದ ಭಾರತ

ಬೆಲ್‌ಫಾಸ್ಟ್: ಮತ್ತೊಮ್ಮೆ ಅಗ್ರ ಕ್ರಮಾಂಕದ ಬ್ಯಾಟಿಂಗ್ ವೈಫಲ್ಯ ಕಂಡ ಭಾರತ ತಂಡ 2ನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲೂ 1 ರನ್‌ನಿಂದ ಐರ್ಲೆಂಡ್ ವಿರುದ್ಧ ಪರಾಭವಗೊಂಡಿತು. ಇದರೊಂದಿಗೆ ಇತಿಹಾಸದಲ್ಲಿ ಮೊದಲ ಬಾರಿಗೆ ಐರ್ಲೆಂಡ್ ವಿರುದ್ಧ ಭಾರತ 2 ಪಂದ್ಯಗಳ ಟಿ20 ಸರಣಿಯಲ್ಲಿ 0-2ರಿಂದ ಮುಖಭಂಗ ಅನುಭವಿಸಿತು.

155 ರನ್ ಗುರಿ ಬೆನ್ನಟ್ಟಿದ ಭಾರತ, 20 ಓವರ್‌ಗಳಲ್ಲಿ 153 ರನ್ ಗಳಿಸಲಷ್ಟೇ ಶಕ್ತಗೊಂಡಿತು. ಮೊದಲ ಓವರ್‌ನಲ್ಲಿ ಆರಂಭಿಕರನ್ನು ಕಳೆದುಕೊಂಡ ಭಾರತಕ್ಕೆ ತಿಲಕ್ ವರ್ಮಾ(55) ಆಸರೆಯಾದರೂ ಉಳಿದವರು ಸಾಥ್ ನೀಡಲು ವಿಫಲರಾದರು. ಕೊನೆಯಲ್ಲಿ ಹರ್ಷಿತ್ ರಾಣಾ(21) ಹೋರಾಟ ಫಲ ನೀಡಲಿಲ್ಲ. ಐರ್ಲೆಂಡ್ ಪರ ಶಿಸ್ತಿನ ಬೌಲಿಂಗ್ ಪ್ರದರ್ಶಿಸಿದ ಜೈ ಮುಂಡ್ರಾ ಮತ್ತು ಮ್ಯಾಥ್ಯೂ ಹೋಲ್ಲಾರ್ಡ್ ತಲಾ 3 ವಿಕೆಟ್ ಕಿತ್ತು ಐತಿಹಾಸಿಕ ಸರಣಿ ಗೆಲುವಿಗೆ ಕೊಡುಗೆ ನೀಡಿದರು.

ಜುಲೈ 1ರಿಂದ ಇಂಗ್ಲೆಂಡ್ ಸರಣಿ: ಭಾರತ ಮತ್ತು ಇಂಗ್ಲೆಂಡ್ ವಿರುದ್ಧದ 5 ಪಂದ್ಯಗಳ ಟಿ20 ಸರಣಿ ಜುಲೈ 1ರಿಂದ ಆರಂಭವಾಗಲಿದೆ.

ಸಂಕ್ಷಿಪ್ತ ಸ್ಕೋರ್: ಐರ್ಲೆಂಡ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 154 (ಹ್ಯಾರಿ ಟೆಕ್ಟರ್ 53, ಕಾಲಿಟ್ಜ್ 37, ಡೊಕ್ರೆಲ್ 19; ಪ್ರಿನ್ಸ್ 22ಕ್ಕೆ 3, ದುಬೆ 25ಕ್ಕೆ 2, ಅರ್ಷ್‌ದೀಪ್ 25ಕ್ಕೆ 2); **ಭಾರತ:** 20 ಓವರ್‌ಗಳಲ್ಲಿ 9 ವಿಕೆಟ್‌ಗೆ 153 (ತಿಲಕ್ 55, ದುಬೆ 20, ಹರ್ಷಿತ್ 21; ಹೊಲ್ಲಾರ್ಡ್ 26ಕ್ಕೆ 3, ಮೂಂಡ್ರಾ 32ಕ್ಕೆ 3).

ಕರ್ನಾಟಕಕ್ಕೆ 3 ಚಿನ್ನ ಸೇರಿ 15 ಪದಕ

ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್

■ **ವಿಕ ಸುದ್ದಿಲೋಕ** ಬೆಂಗಳೂರು

ಸ್ಫೂರ್ತಿದಾಯಕ ಪ್ರದರ್ಶನ ನೀಡಿದ ಕರ್ನಾಟಕದ ಅಥ್ಲೀಟ್‌ಗಳು ಭುವನೇಶ್ವರದಲ್ಲಿ ಭಾನುವಾರ ಮುಕ್ತಾಯಗೊಂಡ 65ನೇ ರಾಷ್ಟ್ರೀಯ ಅಂತರ ರಾಜ್ಯ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ 3 ಚಿನ್ನ, ತಲಾ 6 ಬೆಳ್ಳಿ ಮತ್ತು ಕಂಚು ಸೇರಿದಂತೆ ಒಟ್ಟು 15 ಪದಕಗಳನ್ನು ಗೆದ್ದಿದ್ದಾರೆ. ಇದರೊಂದಿಗೆ ಕರ್ನಾಟಕ ಪದಕಪಟ್ಟಿಯಲ್ಲಿ 6ನೇ ಸ್ಥಾನಿಯಾಗಿ ಅಭಿಯಾನ ಕೊನೆಗೊಳಿಸಿದೆ.



ಸುಪ್ರಿಯಾ ಬಿ

ಭಾನುವಾರ ನಡೆದ ಮಹಿಳೆಯರ ಹೈಜಂಪ್ ಸ್ಪರ್ಧೆಯಲ್ಲಿ ಸುಪ್ರಿಯಾ ಬಿ.(1.80 ಮೀ.) ಏಷ್ಯನ್ ಗೇಮ್ಸ್ ಅರ್ಹತೆಯೊಂದಿಗೆ ಬೆಳ್ಳಿ ಗೆದ್ದರೆ, ಮಹಿಳೆಯರ 4x400 ಮೀ. ರಿಲೇ ಸ್ಪರ್ಧೆ'ಯಲ್ಲಿ ಸಿಂಚಲ್, ವಿಜಯಕುಮಾರಿ ಜಿ.ಕೆ, ಪೂವಮ್ಮ ಮತ್ತು ಪ್ರಿಯಾ ಮೋಹನ್ ಒಳಗೊಂಡ ಕರ್ನಾಟಕ ತಂಡ (3:36.18 ಸೆ.) ದ್ವಿತೀಯ ಸ್ಥಾನ ಗಳಿಸಿತು. ಇದೇ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಎ.ಕಶ್ಯಪ, ತೀರ್ಥೇಶ್ ಶೆಟ್ಟಿ, ಮಿಜೊ ಕುರಿಯನ್ ಮತ್ತು ಯಶಸ್ ಒಳಗೊಂಡ ಕರ್ನಾಟಕ ತಂಡ (3:09.51 ಸೆ.) ರಜತ ಪದಕ ಜಯಿಸಿತು.

ಈ ಮಧ್ಯೆ, ಪುರುಷರ 10,000 ಮೀ. ರೇಸ್‌ನಲ್ಲಿ ರಾಜ್ಯದ ಶೈಲೇಶ್ ಕುಶ್ವಾ (30:23.13 ಸೆ.) ಮೂರನೇ ಸ್ಥಾನ ಗಳಿಸಿದರು.

ವಿಜೆಡಿ ನಿಯಮದ ಅನ್ವಯ ಮಂಗಳೂರು ತಂಡಕ್ಕೆ 8 ವಿಕೆಟ್ ಗೆಲುವು

ಕಿಂಗ್ಸ್‌ಗೆ ಮಣಿದ ಯೋಧಾಸ್ ತಂಡ

■ **ಕಲ್ಮೇಶ ಪಟ್ಟಣದವರ** ಹುಬ್ಬಳ್ಳಿ
kalmesh2214@gmail.com

ಆಲ್‌ರೌಂಡ್ ಪ್ರದರ್ಶನ ನೀಡಿದ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡ ವಿಜೆಡಿ ನಿಯಮದನ್ವಯ 8 ವಿಕೆಟ್‌ಗಳಿಂದ ಶಿವಮೊಗ್ಗ ಯೋಧಾಸ್ ತಂಡವನ್ನು ಮಣಿಸಿತು. ಇದರೊಂದಿಗೆ ಮಹಾರಾಜ ಟ್ರೋಫಿ ಟಿ20 ಟೂರ್ನಿಯಲ್ಲಿ ಮೂರನೇ ಗೆಲುವು ಸಾಧಿಸಿದ ಮಂಗಳೂರು ತಂಡ ಒಟ್ಟು 7 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ದ್ವಿತೀಯ ಸ್ಥಾನಕ್ಕೇರಿತು. ಆದರೆ ಯೋಧಾಸ್ ತಂಡ ಸತತ ನಾಲ್ಕನೇ ಸೋಲಿಗೆ ಗುರಿಯಾಯಿತು.

MAHARAJA TROPHY KSCA T20

ಇಲ್ಲಿನ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ಭಾನುವಾರ ಮಳೆಯಿಂದಾಗಿ 17 ಓವರ್‌ಗಳಿಗೆ ಕಡಿತಗೊಂಡ ಪಂದ್ಯದಲ್ಲಿ ಶಿವಮೊಗ್ಗ ನೀಡಿದ 114 ರನ್‌ಗಳ ಗುರಿ ಬೆನ್ನಟ್ಟಿದ ಮಂಗಳೂರು ತಂಡ ಕೇವಲ 12.4 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 118 ರನ್ ಗಳಿಸಿ ಜಯದ ನಗೆ ಬೀರಿತು. ಕಿಂಗ್ಸ್ ಪರ ಮುರಳೀಧರ ವೆಂಕಟೇಶ್ (45; 25 ಎಸೆತ), ನಿಕಿನ್ ಜೋಸ್(31) ಮತ್ತು ಸಿದ್ಧಾರ್ಥ್ ಅಖಿಲ್(22*) ತಂಡದ ಗೆಲುವನ್ನು ಸುಲಭಗೊಳಿಸಿದರು.

ಇದಕ್ಕೂ ಮುನ್ನ ಶಿವಮೊಗ್ಗ ತಂಡದ ಇನಿಂಗ್ಸ್ ವೇಳೆ ಮಳೆ ಸುರಿದ ಕಾರಣ ಆಟವನ್ನು 50 ನಿಮಿಷ ಸ್ಥಗಿತಗೊಳಿಸಿ 20 ಓವರ್‌ಗಳ ಪಂದ್ಯವನ್ನು 17 ಓವರ್‌ಗಳಿಗೆ ಪರಿಷ್ಕೃತಗೊಳಿಸಲಾಯಿತು. ಲವ್ನಿತ್ ಸಿಸೋಡಿಯಾ(35) ಮತ್ತು ಹರ್ಷಿಲ್ ಧರ್ಮಾನಿ(28) ಅವರ ಸಮಯೋಚಿತ ಆಟದ ಹೊರತಾಗಿಯೂ ಯೋಧಾಸ್ ಆಟಗಾರರು ಕಿಂಗ್ಸ್‌ನ ಸಂಘಟಿತ ದಾಳಿಗೆ ನಲುಗಿದರು. ರತನ್ ಬಿ.ಆರ್(16ಕ್ಕೆ 3) ವಿಕೆಟ್ ಕಿತ್ತರೆ, ವಾಸುಕಿ ಕೌಶಿಕ್ 15ಕ್ಕೆ 2 ವಿಕೆಟ್ ಪಡೆದು ಮಿಂಚಿದರು. ಈ ಮಧ್ಯೆ ನಿಖಿನ್ ಜೋಸ್ 4 ಕ್ಯಾಚ್ ಹಿಡಿದು ಗಮನ ಸೆಳೆದರು.

ಸಂತೋಷ್ ಈಳಿಗೇರ

ಸಂಕ್ಷಿಪ್ತ ಸ್ಕೋರ್

ಶಿವಮೊಗ್ಗ ಯೋಧಾಸ್: 17 ಓವರ್‌ಗಳಲ್ಲಿ 8 ವಿಕೆಟ್‌ಗೆ 113 (ಲವ್ನಿತ್ 35, ಹರ್ಷಿಲ್ 28; ರತನ್ 16ಕ್ಕೆ 3, ವಾಸುಕಿ 15ಕ್ಕೆ 2).
ಕೋಸ್ಟಲ್ ಕಿಂಗ್ಸ್ ಮಂಗಳೂರು: 12.4 ಓವರ್‌ಗಳಲ್ಲಿ 2 ವಿಕೆಟ್‌ಗೆ 118 (ಮುರಳೀಧರ 45, ನಿಕಿನ್ ಜೋಸ್ 31; ಭೀಮ್ ರಾವ್ 24ಕ್ಕೆ 2).

TOI
ಅತೀ ಹೆಚ್ಚು ಓದುಗರನ್ನು ಹೊಂದಿರುವ ಭಾರತದ ನ್ಯೂಸ್ ಆ್ಯಪ್
TOI ಮೇಲೆ 100M+ ಓದುಗರ ವಿಶ್ವಾಸ
#1 ರೇಟಿಂಗ್ ಪಡೆದಿರುವ ಭಾರತೀಯ ನ್ಯೂಸ್ ಬ್ರ್ಯಾಂಡ್
24x7 ಬ್ರೇಕಿಂಗ್ ನ್ಯೂಸ್
ಡೌನ್‌ಲೋಡ್ ಮಾಡಿ TOI ಆ್ಯಪ್

ಭಾರತ ಸರ್ಕಾರ, ರೈಲ್ವೆ ಸಚಿವಾಲಯ

ರೈಲ್ವೆ ನೇಮಕಾತಿ ಮಂಡಳಿಗಳು (ಆರ್‌ಆರ್‌ಬಿಗಳು)

ಕೇಂದ್ರೀಕೃತ ಉದ್ಯೋಗ ಅಧಿಸೂಚನೆ (ಸಿಇಎನ್) ಸಂಖ್ಯೆ 02/2026

ತಂತ್ರಜ್ಞರಿಗಾಗಿ ನೇಮಕಾತಿ
(ಸೂಚನಾತ್ಮಕ ಪ್ರಕಟಣೆ)

ಕೆಳಗಿನ ಕೋಷ್ಟಕದಲ್ಲಿ ನೀಡಲಾದ ತಂತ್ರಜ್ಞ ಗ್ರೇಡ್-I ಸಿಗ್ನಲ್ ಮತ್ತು ತಂತ್ರಜ್ಞ ಗ್ರೇಡ್-III ರ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 29.07.2026. ಎಲ್ಲಾ ರೀತಿಯಲ್ಲೂ ಪೂರ್ಣಗೊಂಡ ಅರ್ಜಿಗಳನ್ನು **ಆನ್‌ಲೈನ್ ಮಾದರಿಯ ಮೂಲಕ ಮಾತ್ರ ಸಲ್ಲಿಸತಕ್ಕದ್ದು (https://www.rrbapply.gov.in).**

ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ : 30 ಜೂನ್ 2026 • ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 29 ಜುಲೈ 2026 (23:59 ಗಂಟೆಗೆ)

ಹುದ್ದೆಯ ಹೆಸರು	7ನೇ ಸಿಪಿಸಿಯ ಪ್ರಕಾರ ವೇತನ ಹಂತ	ಆರಂಭಿಕ ವೇತನ (ರೂ.)	ವೈದ್ಯಕೀಯ ಮಾನದಂಡ	ವಯಸ್ಸು (01.07.2026 ರಂತೆ)	ಖಾಲಿ ಹುದ್ದೆಗಳು (ಎಲ್ಲಾ ಆರ್‌ಆರ್‌ಬಿಗಳೂ ಸೇರಿ)	ಒಟ್ಟು ಖಾಲಿ ಹುದ್ದೆಗಳು (ಎಲ್ಲಾ ಆರ್‌ಆರ್‌ಬಿಗಳೂ ಸೇರಿ)
ತಂತ್ರಜ್ಞ ಗ್ರೇಡ್-I ಸಿಗ್ನಲ್	5	29,200/-	ಬಿ-I	18 - 33 ವರ್ಷಗಳು	323	6557
ತಂತ್ರಜ್ಞ ಗ್ರೇಡ್-III	2	19,900/-	ವಿವರವಾದ ಸಿಇಎನ್ ಅನುಸಾರ	18 - 33 ವರ್ಷಗಳು	6234	

ಸೂಚನೆ: 1) ಪ್ರತಿಯೊಬ್ಬ ಅಭ್ಯರ್ಥಿಯು ನಿರ್ದಿಷ್ಟ ವೇತನ ಹಂತಕ್ಕೆ ಒಂದು ಆರ್‌ಆರ್‌ಬಿ ಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ ಮತ್ತು ವೇತನ ಹಂತದೊಳಗಿನ ಯಾವುದೇ ಅಥವಾ ಎಲ್ಲಾ ಅಧಿಸೂಚಿತ ಹುದ್ದೆಗಳಿಗೆ ಒಂದು ಸಾಮಾನ್ಯ ಆನ್‌ಲೈನ್ ಅರ್ಜಿಯನ್ನು ಮಾತ್ರ ಸಲ್ಲಿಸಬಹುದು. 2) ಪ್ರತಿ ವೇತನ ಹಂತಕ್ಕೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕು. 3) ಆಧಾರ್‌ಅನ್ನು ಪರಿಶೀಲಿಸದ ಅರ್ಜಿಗಳಿಗೆ ನೇಮಕಾತಿ ಪ್ರಕ್ರಿಯೆಯ ಪ್ರತಿ ಹಂತದಲ್ಲೂ ವಿಶೇಷ ವಿವರವಾದ ಪರಿಶೀಲನೆಯಿಂದಾಗಿ ಅನಾನುಕೂಲತೆ ಮತ್ತು ವಿಳಂಬವನ್ನು ತಪ್ಪಿಸಲು, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಗಳು ಆಧಾರ್ ಬಳಸಿ ತಮ್ಮ ಪ್ರಾಥಮಿಕ ವಿವರಗಳನ್ನು ಪರಿಶೀಲಿಸಲು ಸೂಚಿಸಲಾಗಿದೆ. 4) ಆಧಾರ್‌ಅನ್ನು ಬಳಸಿ ಯಶಸ್ವಿ ಪರಿಶೀಲನೆಯನ್ನು ಸಾಧಿಸಲು, 10ನೇ ತರಗತಿಯ ಉತ್ತೀರ್ಣ ಪ್ರಮಾಣಪತ್ರದಲ್ಲಿ ಲಭ್ಯವಿರುವ ಪೂರ್ಣ ಹೆಸರು ಮತ್ತು ಜನ್ಮ ದಿನಾಂಕದೊಂದಿಗೆ 100% ಹೊಂದಿಕೆಯಾಗುವಂತೆ ಆಧಾರ್‌ನಲ್ಲಿನ ಹೆಸರು ಮತ್ತು ಜನ್ಮ ದಿನಾಂಕವನ್ನು ನವೀಕರಿಸಬೇಕು. ಅದೇ ರೀತಿ, ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಮೊದಲು ಆಧಾರ್ ಅನ್ನು ಇತ್ತೀಚಿನ ಫೋಟೋ ಮತ್ತು ಇತ್ತೀಚಿನ ಬಯೋ ಮೆಟ್ರಿಕ್ಸ್‌ನೊಂದಿಗೆ (ಬೆರಳಚ್ಚು ಮತ್ತು ಐರಿಸ್) ನವೀಕರಿಸಬೇಕಾಗುತ್ತದೆ. 5) ಮುಂಬರುವ ಸಿಇಎನ್ ಬಗ್ಗೆ ಸಂಭಾವ್ಯ ಅಭ್ಯರ್ಥಿಗಳಿಗೆ ತಿಳಿಸುವ ಮತ್ತು ಅರ್ಜಿ ಸಲ್ಲಿಸಲು ಅಗತ್ಯವಿರುವ ಅಗತ್ಯ ಪ್ರಮಾಣಪತ್ರಗಳು ಮತ್ತು ದಾಖಲೆಗಳೊಂದಿಗೆ ಸಿದ್ಧರಾಗಿರುವ ಉದ್ದೇಶಕ್ಕಾಗಿ ಮಾತ್ರ ಈ ಅಧಿಸೂಚನೆಯು ಸಂಪೂರ್ಣವಾಗಿ ಸೂಚಕವಾಗಿದೆ. ನೇಮಕಾತಿಯನ್ನು ನಿಯಂತ್ರಿಸುವ ಎಲ್ಲಾ ನಿಯಮಗಳು, ಷರತ್ತುಗಳು, ಅರ್ಹತಾ ಮಾನದಂಡಗಳು, ಕಾರ್ಯವಿಧಾನಗಳು ಮತ್ತು ಇತರ ಅವಶ್ಯಕತೆಗಳು ವಿವರವಾದ ಸಿಇಎನ್ ಸಂಖ್ಯೆ 02/2026 ರ ಪ್ರಕಾರ (ಕಾಲಕಾಲಕ್ಕೆ ಹೊರಡಿಸಬಹುದಾದ ಯಾವುದೇ ತಿದ್ದುಪಡಿಯೊಂದಿಗೆ) ಕಟ್ಟುನಿಟ್ಟಾಗಿರುತ್ತವೆ ಎಂದು ಸ್ಪಷ್ಟಪಡಿಸಲಾಗಿದೆ, ಇವುಗಳನ್ನು ಕೆಳಗೆ ಪಟ್ಟಿ ಮಾಡಲಾದ ಆರ್‌ಆರ್‌ಬಿಗಳ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲಾಗುತ್ತದೆ.

ಸಿಇಎನ್ ನಂ. 02/2026ರಲ್ಲಿ ಪಾಲ್ಗೊಳ್ಳುವ ಆರ್‌ಆರ್‌ಬಿಗಳ ವೆಬ್‌ಸೈಟ್‌ಗಳು
ಕೇಂದ್ರೀಕೃತ ವೆಬ್‌ಸೈಟ್: www.rrb.indianrailways.gov.in

ಅಹಮದಾಬಾದ್ www.rrbahmedabad.gov.in	ಅಜ್ಮೇರ್ www.rrbajmer.gov.in	ಬೆಂಗಳೂರು www.rrbbnc.gov.in	ಭೋಪಾಲ್ www.rrbbhopal.gov.in
ಭುವನೇಶ್ವರ್ www.rrbbbs.gov.in	ಬಿಲಾಸ್‌ಪುರ್ www.rrbbilaspur.gov.in	ಚಂಡೀಘಡ www.rrbcdg.gov.in	ಚೆನ್ನೈ www.rrbchennai.gov.in
ಗೌಹಾಟಿ www.rrbguwahati.gov.in	ಜಮ್ಮು www.rrbjammu.nic.in	ಕೊಲ್ಕತ್ತಾ www.rrbkolkata.gov.in	ಮಾಲ್ಡಾ www.rrbmalda.gov.in
ಮುಂಬೈ www.rrbmumbai.gov.in	ಮುಜಫರಪುರ www.rrbmuzaffarpur.gov.in	ಪಾಟ್ನಾ www.rrbpatna.gov.in	ಪ್ರಯಾಗರಾಜ್ www.rrbpryj.gov.in
ರಾಂಚಿ www.rrbranchi.gov.in	ಸಿಕೆಂದ್ರಾಬಾದ್ www.rrbsecunderabad.gov.in	ಸಿಲಿಗುರಿ www.rrbsiliguri.gov.in	ತಿರುವನಂತಪುರಂ www.rrbthiruvananthapuram.gov.in
ಗೋರಖಪುರ www.rrbgkp.gov.in	*****	*****	*****

ಸಂ.: ಆರ್‌ಆರ್‌ಬಿ/ಟಿವಿಸಿ/ಸಿಇಎನ್-02/2026
ದಿನಾಂಕ: 29.06.2026

ಅಧ್ಯಕ್ಷರುಗಳು
ರೈಲ್ವೆ ನೇಮಕಾತಿ ಮಂಡಳಿಗಳು

"ಮಧ್ಯವರ್ತಿಗಳು, ದಲ್ಲಾಳಿಗಳು ಮತ್ತು ಉದ್ಯೋಗ ವಂಚಕರ ಬಗ್ಗೆ ಎಚ್ಚರವಿರಲಿ"

ಪ್ರಗತಿಯ ಸೇತುವೆ
ರೈಲು ಸಂಪರ್ಕವನ್ನು ಬಲಪಡಿಸುವತ್ತ

ಸುರಕ್ಷಿತ, ಸುಸ್ಥಿರ ಮತ್ತು ಎಲ್ಲರಿಗೂ ಸುಲಭವಾಗಿ ಲಭ್ಯವಾಗುವ ಮೂಲಸೌಕರ್ಯನಿರ್ಮಾಣಕ್ಕೆ ನಾವು ಬದ್ಧರಾಗಿದ್ದೇವೆ.
– ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಚನ್ನಪಟ್ಟಣದ ಎಲಿಕೇರಿ ಗೇಟ್‌ನಲ್ಲಿ ರಸ್ತೆ ಮೇಲ್ಸೇತುವೆಯ
ಲೋಕಾರ್ಪಣೆ
ಮತ್ತು
ಯಲಹಂಕ ರೈಲು ನಿಲ್ದಾಣದಲ್ಲಿ ಹೆಚ್ಚುವರಿ ನಿಲುಗಡೆಯನ್ನು ಒದಗಿಸುವುದರೊಂದಿಗೆ ಕೊಯಮತ್ತೂರು - ಮುಂಬಯಿ ಎಕ್ಸ್‌ಪ್ರೆಸ್‌ಗೆ
ಹಸಿರು ನಿಶಾನೆ

ಪ್ರಯೋಜನಗಳು
ಉತ್ತಮ ರೈಲು ಹಾಗೂ ರಸ್ತೆ ಸಂಪರ್ಕ, ಸ್ಥಳೀಯ ವ್ಯಾಪಾರ ಮತ್ತು ಪ್ರಾದೇಶಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ
ಯಲಹಂಕದಿಂದ ಕೊಯಮತ್ತೂರು, ಪುಣೆ ಮತ್ತು ಮುಂಬಯಿಗೆ ನೇರ ಸಂಪರ್ಕವನ್ನು ಒದಗಿಸುತ್ತದೆ
ಚನ್ನಪಟ್ಟಣದಲ್ಲಿ ಲೆವೆಲ್ ಕ್ರಾಸಿಂಗ್‌ಗಳಲ್ಲಿನ ಕಾಯುವಿಕೆಯನ್ನು ನಿವಾರಿಸುವುದರಿಂದ ರಸ್ತೆಯಲ್ಲಿ ವಾಹನಗಳ ಸಂಚಾರ ಸುಗಮವಾಗಿ, ವೇಗವಾಗಿ ಹಾಗೂ ಸುರಕ್ಷಿತವಾಗಿ ಸಾಗಲಿದೆ
ಮುಂಬಯಿ ಮತ್ತು ಕೊಯಮತ್ತೂರಿಗೆ ನೇರ ಸಂಪರ್ಕದಿಂದಾಗಿ ಯಲಹಂಕದ ನಿವಾಸಿಗಳಿಗೆ ಸುಧಾರಿತ ರೈಲು ಸಂಪರ್ಕವನ್ನು ಒದಗಿಸುತ್ತದೆ
ಇವರಿಂದ
ವಿ. ಸೋಮಣ್ಣ
ಕೇಂದ್ರ ರೈಲ್ವೆ ಮತ್ತು ಜಲ ಶಕ್ತಿ ರಾಜ್ಯ ಸಚಿವರು
ಬೆಳಗ್ಗೆ 10.45 ಗಂಟೆ
ಎಲ್‌ಸಿ ಸಂ.47, ಎಲಿಕೇರಿ ಗೇಟ್, ಚನ್ನಪಟ್ಟಣ
29.06.2026
ಸಂಜೆ 03:45 ಗಂಟೆ
ಯಲಹಂಕ ರೈಲು ನಿಲ್ದಾಣ
ಎಲ್ಲರಿಗೂ ಹಾರ್ದಿಕ ಸುಸ್ವಾಗತ
ಭಾರತೀಯ ರೈಲ್ವೆ
www.indianrailways.gov.in
Follow us on: /RailMinIndia
PUB/247/AAS/PRB/SWR/2026-27

SUPPORTED BY MINISTRY OF TEXTILES Government of India
INSPIRED BY THE 5F VISION
ORGANISED BY BHARAT TEX TRADE FEDERATION
GLOBAL TEXTILE EXPO
Bharat TEX 2026
TEXTILES | FASHION | SUSTAINABILITY

ಎಲ್ಲಾ ಜವಳಿ ವಸ್ತುಗಳು, ಒಂದೇ ಸ್ಥಳದಲ್ಲಿ.
ಒಳನೋಟ ಜ್ಞಾನ ನೀಡುವ ಅಧಿವೇಶನಗಳಲ್ಲಿ ಭಾಗವಹಿಸುವುದರೊಂದಿಗೆ ಹೊಸ ಅವಕಾಶಗಳನ್ನು ಅನ್ವೇಷಿಸಿ, ಪ್ರಮುಖ ವ್ಯವಹಾರಗಳೊಂದಿಗೆ ತೊಡಗಿಸಿಕೊಳ್ಳಿ, ಗಡಿಗಳನ್ನು ಮೀರಿದ ಪಾಲುದಾರಿಕೆಗಳನ್ನು ನಿರ್ಮಿಸಿ.
ಜುಲೈ 14TH - 17TH 2026
ಭಾರತ ಮಂಡಪಮ್ ನವ ದೆಹಲಿ
bharat-tex.com
ಆ್ಯಪ್ ಡೌನ್‌ಲೋಡ್ ಮಾಡಲು ಸ್ಕ್ಯಾನ್ ಮಾಡಿ
ಸ್ಕ್ಯಾನ್ ಮಾಡಿ ಭೇಟಿಗಾಗಿ ನೊಂದಾಯಿಸಿ

20,000+ TEXTILE PRODUCTS | 7,000+ OVERSEAS BUYERS | 1.6MN SQ. FT. AREA | 100+ KNOWLEDGE SESSIONS | 1.3L TRADE VISITORS
STATE PARTNERS
Government of Madhya Pradesh | Government of Bihar | Government of Uttar Pradesh | Government of Punjab | Government of Gujarat
SUPPORTING STATE PARTNERS
Government of Maharashtra | Government of Karnataka

Bennett & Coleman THE TIMES OF INDIA
ಸಂಪಾದಕೀಯ EDITORIAL

ನಾಯಕರು ಸ್ವಹಿತಾಸಕ್ತಿ ಕಡೆಗಣಿಸಲಿ

ನೈತಿಕತೆ ನಂಬಿಕೆಯ ಬುನಾದಿ

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ಸಹಾಯಕ ಸಚಿವ ಭಗೀರಥ್ ಚೌಧರಿ ಅವರು ತಮ್ಮದೇ ಸಚಿವಾಲಯದ ವ್ಯಾಪ್ತಿಗೆ ಒಳಪಡುವ ಯೋಜನೆಯಿಂದ, ತಮ್ಮ ವಾಣಿಜ್ಯ ಸೌತೆಕಾಯಿ ತೋಟಕ್ಕಾಗಿ 99 ಲಕ್ಷ ರೂ. ಸರಕಾರಿ ಸಬ್ಸಿಡಿ ಪಡೆದಿರುವ ಸುದ್ದಿ ವಿವಾದಕ್ಕೆ ಗ್ರಾಸವಾಗಿದೆ. ಇದು ರಾಜಕೀಯ ಹೊಣೆಗಾರಿಕೆಯ ಕೊರತೆಯನ್ನೂ ಎತ್ತಿ ತೋರಿಸುತ್ತದೆ. ಕಾನೂನುಬದ್ಧವಾಗಿ ಈ ಪ್ರಕ್ರಿಯೆ ಸರಿ ಇದ್ದಿರಬಹುದು, ಆದರೆ ನೈತಿಕತೆಯ ದೃಷ್ಟಿಯಿಂದ ಇದು ಖಂಡಿತವಾಗಿಯೂ ಪ್ರಶ್ನಾರ್ಹವಾಗಿದೆ.

ರಾಜಸ್ಥಾನದ ಪೀಹ್ ಗ್ರಾಮದಲ್ಲಿರುವ ಸಚಿವ ಚೌಧರಿ ಅವರ ಹೈಟೆಕ್ ಸೌತೆಕಾಯಿ ತೋಟಕ್ಕೆ ಈ ಸಬ್ಸಿಡಿ ಮಂಜೂರಾಗಿದೆ. ಯೋಜನೆಯ ಒಟ್ಟು ವೆಚ್ಚ ಸುಮಾರು 1.99 ಕೋಟಿ ಆಗಿದ್ದು, ತೋಟಗಾರಿಕೆಯ ಸಂಯೋಜಿತ ಅಭಿವೃದ್ಧಿ ಮಿಷನ್ (MIDH) ಅಡಿಯಲ್ಲಿ ಶೇ.50ರಷ್ಟು ಬಂಡವಾಳ ಹೂಡಿಕೆ ಸಬ್ಸಿಡಿಯನ್ನು ನೀಡಲಾಗಿದೆ. ಈ ಹಣವನ್ನು ರಾಷ್ಟ್ರೀಯ ತೋಟಗಾರಿಕಾ ಮಂಡಳಿ (NHB) ಮೂಲಕ ವಿತರಿಸಲಾಗಿದೆ. ಇಲ್ಲಿ ಮುಖ್ಯವಾದ ವಿಷಯವೆಂದರೆ, ಸಚಿವರಾಗಿರುವ ಕಾರಣದಿಂದ ಚೌಧರಿ ಅವರೇ ಈ ಮಂಡಳಿಯ ಉಪಾಧ್ಯಕ್ಷರೂ ಆಗಿದ್ದಾರೆ.

ಆರೋಪದ ಕುರಿತು ಸಮರ್ಥನೆ ನೀಡಿರುವ ಸಚಿವರು, ತಾವು ರೈತನಾಗಿದ್ದು, ಸಚಿವರಾಗುವ ಮುನ್ನವೇ ಅಂದರೆ 2018ರಲ್ಲಿ ಈ ಯೋಜನೆಗೆ ಅರ್ಜಿ ಸಲ್ಲಿಸಿದ್ದಾಗಿ ಹೇಳಿದ್ದಾರೆ. ಪ್ರಕ್ರಿಯೆಯು ಸಂಪೂರ್ಣವಾಗಿ ಪಾರದರ್ಶಕವಾಗಿದೆ ಮತ್ತು ಇದನ್ನು ತಮ್ಮ ತೋಟದ ಫಲಕದಲ್ಲಿ ಸಾರ್ವಜನಿಕವಾಗಿ ಪ್ರದರ್ಶಿಸಲಾಗಿದೆ ಎಂದು ಅವರು ವಾದಿಸಿದ್ದಾರೆ. ''ಸಾವಿರಾರು ಸಾಮಾನ್ಯ ರೈತರಂತೆ ನಿಯಮಾವಳಿ ಪ್ರಕಾರವೇ ಸಹಾಯಧನ ಪಡೆದಿದ್ದೇನೆ,'' ಎಂಬ ಸಚಿವರ ವಾದವು ನೈತಿಕತೆಯ ತತ್ವಕ್ಕೆ ವಿರುದ್ಧವಾಗಿದೆ. ಅರ್ಜಿಯನ್ನು 2018ರಲ್ಲೇ ಸಲ್ಲಿಸಿದ್ದರೂ, ಅಂತಿಮ ಅನುಮೋದನೆ ಮತ್ತು ಹಣದ ವರ್ಗಾವಣೆ ನಡೆದಿರುವುದು ಅವರು ಸಚಿವರಾದ ಮೇಲೆಯೇ. ತಾವೇ ಉನ್ನತ ಹುದ್ದೆಯಲ್ಲಿರುವ ಮಂಡಳಿಯಿಂದ ಒಬ್ಬ ಸಚಿವರು ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಪಡೆದಾಗ, ಅಲ್ಲಿ 'ಹಿತಾಸಕ್ತಿ ಸಂಘರ್ಷ'ದ ಪ್ರಶ್ನೆಯೂ ಬರುತ್ತದೆ ಎನ್ನುವುದನ್ನು ಸಚಿವರು ಮನಗಾಣಬೇಕಿತ್ತು. ದೇಶದ ಲಕ್ಷಾಂತರ ಸಣ್ಣ ಮತ್ತು ಅತಿ ಸಣ್ಣ ರೈತರು ಸಣ್ಣ ಸಾಲ ಅಥವಾ ಬೆಳೆ ವಿಮೆಗಾಗಿ ವರ್ಷಗಟ್ಟಲೆ ಅಲೆಯುತ್ತಿರುವಾಗ, ಅಧಿಕಾರದಲ್ಲಿರುವ ಒಬ್ಬ ಶ್ರೀಮಂತ ನಾಯಕ ಇಷ್ಟು ದೊಡ್ಡ ಮೊತ್ತದ ಸಬ್ಸಿಡಿ ಪಡೆಯುವುದು ಸಮಾಜಕ್ಕೆ ತಪ್ಪು ಸಂದೇಶವನ್ನು ರವಾನಿಸುತ್ತದೆ. ಇದು ವ್ಯವಸ್ಥೆಯು ಕೇವಲ ಪ್ರಭಾವಿಗಳ ಪರ ಎಂಬ ಭಾವನೆಯನ್ನು ಜನರಲ್ಲಿ ಗಟ್ಟಿ ಮಾಡುತ್ತದೆ.

ಸರಕಾರಗಳು ಸಹಾಯಧನಗಳನ್ನು ನೀಡುವ ಉದ್ದೇಶವೇ ನಿಜವಾಗಿಯೂ ಅಗತ್ಯ ಇರುವ ವ್ಯಕ್ತಿಗಳಿಗೆ ನೆರವಾಗಬೇಕು ಎನ್ನುವುದು. ಉಳ್ಳವರೇ ಸರಕಾರದ ಸಹಾಯಧನಗಳನ್ನು ಬಾಚಿಕೊಳ್ಳುತ್ತಾ ಹೋದರೆ, ಇಲ್ಲದವರಿಗೆ ಅವಕಾಶ ನಿರಾಕರಿಸಿದಂತೆ ಆಗುತ್ತದೆ. ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರು ಅಡುಗೆ ಅನಿಲ ಸಬ್ಸಿಡಿ ತ್ಯಜಿಸುವಂತೆ ಕರೆ ನೀಡಿದಾಗ ದೇಶದಲ್ಲಿ ಲಕ್ಷಾಂತರ ಜನ ಸ್ವಯಂಪ್ರೇರಣೆಯಿಂದ ಸಹಾಯಧನ ತೊರೆಯುವ ನಿರ್ಧಾರ ಕೈಗೊಂಡರು. ಈ ಪ್ರಕರಣದಲ್ಲಿ, ಸರಕಾರಿ ನೀತಿಯೊಂದರಿಂದ ತಮಗೆ ವೈಯಕ್ತಿಕವಾಗಿ ಲಾಭವಾಗುವ ಸಾಧ್ಯತೆ ಇದ್ದರೆ, ಆ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಿಂದ ಸಚಿವರು ಸಂಪೂರ್ಣವಾಗಿ ದೂರವಿರಬೇಕಿತ್ತು ಅಥವಾ ತಾವೇ ಅನುಮೋದನೆ ನೀಡುವ ಸ್ಥಾನಕ್ಕೆ ಬಂದಾಗ ತಮ್ಮ ಅರ್ಜಿ ಹಿಂಪಡೆದು ಮಾದರಿಯಾಗಬೇಕಿತ್ತು. ರಾಜಕಾರಣಿಗಳು ಸಾರ್ವಜನಿಕ ಜೀವನದಲ್ಲಿ ಕಾನೂನಿಗಿಂತ ನೈತಿಕತೆಗೆ ಆದ್ಯತೆ ನೀಡಬೇಕು. ಸ್ವಂತ ಲಾಭವನ್ನು ತ್ಯಜಿಸಿ ಸೇವಾ ಮನೋಭಾವ ತೋರಿದಾಗ ಮಾತ್ರ ಜನರಿಗೆ ವ್ಯವಸ್ಥೆಯ ಮೇಲೆ ನಂಬಿಕೆ ಬರುತ್ತದೆ. ಆ ನಂಬಿಕೆಯನ್ನು ಮೂಡಿಸುವುದು ಮತ್ತು ಉಳಿಸಿಕೊಳ್ಳುವುದು ಸರಕಾರ ಮತ್ತು ಪ್ರಜಾಸೇವಕರ ಕರ್ತವ್ಯ.

ಬೋಧಿ ವೃಕ್ಷ

ಪ್ರಣಯದರ್ಪವ ಮುರಿವ ಕೃಷ್ಣ

ಮದವಿಘೂರ್ಣಿತಲೋಚನ ಈಷ-
ನ್ಮಾನದಃ ಸ್ವಸುಹೃದಾಂ ವನಮಾಲೀ ।
ಬದರಪಾಂಡುವದನೋ ಮೃದುಗಂಡಂ
ಮಂಡಯನ್ ಕನಕಕುಂಡಲಲಕ್ಷ್ಮ್ಯಾ ॥

ಶ್ರೀಕೃಷ್ಣನ ಆ ಮಂದಹಾಸವೇ ಬಲು ಮೋಹಕ. ಅವನ ಅರಳಿದ ಕಣ್ಣುಗಳ ಕಾಂತಿ ಬೇರೆಲ್ಲೂ ನೋಡಲು ಸಿಗದು. ಅವನು ತನ್ನ ಪ್ರೀತಿಪಾತ್ರರಾದ ಗೋಪಿಯರ ಪ್ರಣಯದರ್ಪವನ್ನು ಮುರಿದುಬಿಡುತ್ತಿದ್ದ. ಬಂಗಾರದ ಕರ್ಣಕುಂಡಗಳ ಕಾಂತಿಯಿಂದ ತನ್ನ ಮೃದುವಾದ ಕೆನ್ನೆಯನ್ನು ರಂಗೇರಿಸಿಕೊಳ್ಳುತ್ತಿದ್ದ. ಉದಯಿಸುವ ಚಂದ್ರನ ಬೆಳದಿಂಗಳನ್ನು ನಾಚಿಸುವಂಥ ಶುಭ್ರವಾದ ಹೊಳೆಯುವ ಆ ಮುಖದ ವನಮಾಲಿ ಬರುತ್ತಾನೆಂದರೆ ನಮ್ಮ ಸಂತೋಷಕ್ಕೆ ಪಾರವೇ ಇಲ್ಲ. ಈಗ ಆ ಕೃಷ್ಣನು ನಮ್ಮ ಬಳಿ ಬಂದುಬಿಡುತ್ತಾನೆ.

ಯದುಪತಿರ್ದ್ವಿರದರಾಜವಿಹಾರೋ
ಯಾಮಿನೀಪತಿರಿವೈಷ ದಿನಾಂತೇ ।
ಮುದಿತವಕ್ತ್ರ ಉಪಯಾತಿ ದುರಂತಂ
ಮೋಚಯನ್ ವ್ರಜಗವಾಂ ದಿನತಾಪಮ್ ॥

ಆ ಶ್ರೀಕೃಷ್ಣನು ಯದುಕುಲದ ಮಹಾರಾಜ. ಸಂಧ್ಯಾಕಾಲದಲ್ಲಿ ಉದಯಿಸುವ ಚಂದ್ರನನ್ನು ಮೀರಿಸುವ ಪ್ರಸನ್ನಮುಖದವನು. ಅವನು ನಡೆದು ಬರುತ್ತಿದ್ದರೆ ಗಜರಾಜನ ಗಾಂಭೀರ್ಯದ ಅನುಭವ ನಮಗೆ ಬರುತ್ತದೆ. ಗೋಕುಲದ ಗೋವುಗಳಿಗೆ ಹಗಲಿನಲ್ಲಿ ಉಂಟಾದ ಅಪಾರ ತಾಪವನ್ನು ಚಂದ್ರನಂತೆ ಕಳೆಯುತ್ತಾನೆ. ಇಂಥ ಕೃಷ್ಣಚಂದ್ರನು ನಮ್ಮ ಬಳಿ ಈಗ ತಾನೇ ಬಂದು ಬಿಡುತ್ತಾನೆ.

ಏವಂ ವ್ರಜಸ್ತ್ರಿಯೋ ರಾಜನ್ ಕೃಷ್ಣಲೀಲಾ ನು ಗಾಯತೀಃ ।
ರೇಮಿರೇಽಹಸ್ಸು ತಚ್ಚಿತ್ತಾಸ್ತನ್ಮನಸ್ಕಾ ಮಹೋದಯಾಃ ॥

ಶುಕಾಚಾರ್ಯರು ಹೇಳುತ್ತಾರೆ – ಹೀಗೆ ಎಲ್ಲ ಗೋಪಿಕೆಯರು ಹಗಲೆಲ್ಲಾ ಕೃಷ್ಣನ ಲೀಲೆಗಳನ್ನು ಹಾಡುತ್ತಾ, ಪಾಡುತ್ತಾ, ಅವನನ್ನೇ ನೆನೆಯುತ್ತಾ, ಅವನಲ್ಲಿಯೇ ಬೆರೆತು ಅವನ ಪ್ರೀತಿಯ ಆನಂದವನ್ನು ಅನುಭವಿಸುತ್ತಾ ಕಾಲಕಳೆಯುತ್ತಿದ್ದರು.

ಶ್ರೀ ಸುಬುಧೇಂದ್ರತೀರ್ಥ ಸ್ವಾಮೀಜಿ, ಮಂತ್ರಾಲಯ

ವಿಕ ತಗೋ ಕನ್ನಡ

ಕರುಬರಿದ್ದೂರು

ಇದು 'ಕರುಬರು + ಇದ್ದ + ಊರು' ಸೇರಿರುವ ಪದ. 'ಕರುಬರು' ಕೂಡ ಕರುಬುವವರು ಎನ್ನುವುದರ ಚಿಕ್ಕರೂಪ. 'ಕರುಬು' ಎಂದರೆ 'ಅಸೂಯೆ ಪಡುವ, ಹೊಟ್ಟೆಕಿಚ್ಚು ಪಡುವ' ಎಂದು ಅರ್ಥ. ಜೈಮಿನಿ ಭಾರತದಲ್ಲಿ ಲಕ್ಷ್ಮೀಶನು 'ಕರುಬರಿದ್ದೂರಿಂದೆ ಕಾಡೊಳ್ಳಿತೆನಿಸುವಂತೆ' ಎನ್ನುವ ಸುಂದರವಾದ ನುಡಿಗಟ್ಟನ್ನು ಬಳಸಿದ್ದಾನೆ. ಚಂದ್ರಹಾಸ ಪ್ರಕರಣದಲ್ಲಿ ಶಿಶು ಚಂದ್ರಹಾಸನನ್ನು ಕೊಲ್ಲದೆ, ಕಾಲಿನ ಆರನೇ ಬೆರಳನ್ನು ಕತ್ತರಿಸಿ ಕಾಡಿನಲ್ಲೇ ಬಿಟ್ಟುಹೋಗುತ್ತಾರೆ. ಅವನನ್ನು ಪ್ರಾಣಿಪಕ್ಷಿಗಳು ವಾತ್ಸಲ್ಯದಿಂದ ಉಪಚರಿಸಿ ಕಾಪಾಡುತ್ತವೆ. ಇದನ್ನು ಕವಿ 'ಅಸೂಯೆ ಪಡುವವರಿರುವ ಊರಿನಲ್ಲಿರುವುದಕ್ಕಿಂತ ಕಾಡೇ ವಾಸಿ' ಎಂದು ಬಣ್ಣಿಸಿ, ಅಸೂಯಾಪರರ ಬಗ್ಗೆ ತಿರಸ್ಕಾರವನ್ನು ವ್ಯಕ್ತಪಡಿಸುತ್ತಾನೆ. 'ದ್ರೌಪದಿಯ ಮೌಳಿಗೆ ಕರುಬಿದವರಿಗೆ ಕಾಣಲಾಯ್ತು ಕೃತಾಂತನೋಲಗವ' ಇದು ಕುಮಾರವ್ಯಾಸನ ಸಾಲು. ಅರ್ಜುನನು ಪಾಶುಪತಾಸ್ತ್ರ ಮೊದಲಾದುವನ್ನು ಪಡೆದುಬಂದಾಗ 'ಇದರಿಂದ ದ್ರೌಪದಿಯ ಸಿರಿಮುಡಿಯನ್ನು ನೋಡಿ ಮತ್ಸರಪಟ್ಟವರಿಗೆ ಯಮಲೋಕವನ್ನು ಕಾಣಿಸುವಂತಾಯ್ತು' ಎಂದು ಧರ್ಮರಾಯನು ಸಂತಸಪಡುತ್ತಾನೆ.

– ಜಿ.ವಿ. ಅರುಣ

– ಪದ ಸೂಚಿಸಿದವರು: ರೂಪಾ ಕೊಣನೂರು

ಬತ್ತಳಿಕೆ

ವಿಕ ಜೋಕ್ FALLS

ಟ್ರಾಫಿಕ್ ಪೊಲೀಸ್: ಕರೆಂಟ್ ಕಂಬಕ್ಕೆ ಕಾರು ಗುದ್ದಿಸಿದೆಯಲ್ಲ, ವೇಗವಾಗಿ ಯಾಕೆ ಚಲಾಯಿಸುತ್ತಿದ್ದೆ?
ಸಂಗ್ಯಾ: ಎಲ್ಲಾದರೂ ಗುದ್ದುವ ಮುಂಚೆಯೇ ಮನೆ ತಲುಪಿಬಿಡೋಣ ಅಂತ ಸ್ಪೀಡ್ ಆಗಿ ಹೋಗುತ್ತಿದ್ದೆ.

ಜೆನ್‌ಜಿ ಪೀಳಿಗೆಯವರ ಮೇಲೆ ನಾನಾ ಬಗೆಯ ಆರೋಪಗಳಿವೆ. ಹಾಗೆ ನೋಡಿದರೆ ಈ ಹಿಂದಿನ ಎಲ್ಲಾ ತಲೆಮಾರುಗಳೂ ತಮ್ಮದೇ ಆದ ಸಮಸ್ಯೆಗಳನ್ನು, ದೂರು ದುಮ್ಮಾನಗಳನ್ನು ಹೊಂದಿದ್ದವು. ಜೆನ್‌ಜಿಗಳು ಅವುಗಳನ್ನು ಸರಿಪಡಿಸಿಕೊಂಡು ಮುಂದುವರಿಯುತ್ತಿದ್ದಾರೆ. ನಕಾರಾತ್ಮಕ ಸಂಗತಿಯತ್ತಲೇ ಬೊಟ್ಟು ಮಾಡದೆ ಅವರಿಂದ ಉಂಟಾಗುತ್ತಿರುವ ಸಕಾರಾತ್ಮಕ ಬದಲಾವಣೆಗಳತ್ತಲೂ ಜಗತ್ತು ದೃಷ್ಟಿ ಹರಿಸಬೇಕಿದೆ.

ಜಗತ್ತನ್ನು ಮರು ವ್ಯಾಖ್ಯಾನಿಸುವ ಜೆನ್‌ಜಿ

ವ್ಹೀಲಿಂಗ್ ಅಲ್ಲ ಹೀಲಿಂಗ್ ಜನರೇಶನ್

● ಡಾ. ಶ್ವೇತಾ ಬಿ.ಸಿ

ಹಲವು ವರ್ಷಗಳಿಂದ ಜನರೇಶನ್ ಜಿ (ಜೆನ್‌ಜಿ) ಪೀಳಿಗೆ ಟೀಕೆಗಳ ಕೇಂದ್ರಬಿಂದುವಾಗಿದೆ. ಮೊಬೈಲ್ ಫೋನ್ ಹಾಗೂ ಸಾಮಾಜಿಕ ಮಾಧ್ಯಮಗಳಿಗೆ ಅತಿಯಾಗಿ ಅಂಟಿಕೊಂಡಿರುವುದು, ಅತಿಯಾದ ಸೂಕ್ಷ್ಮತೆ, ವಾಸ್ತವತೆಯಿಂದ ದೂರ ಉಳಿದುಬಿಟ್ಟಿರುವುದು ಹೀಗೆ ಅನೇಕ ಆರೋಪಗಳನ್ನು ಜೆನ್‌ಜಿ ತಲೆಮಾರಿನ ಯುವಜನರು ಎದುರಿಸುತ್ತಿದ್ದಾರೆ. ಡಿಜಿಟಲ್ ಟ್ರೆಂಡ್‌ಗಳಲ್ಲಿ ಕಳೆದುಹೋಗಿರುವ ಈ ಪೀಳಿಗೆಗೆ ಅರ್ಥಪೂರ್ಣ ಬದುಕನ್ನು ಬದುಕಲು ಸಾಧ್ಯವೇ ಎಂದು ಅವರಿಗಿಂತ ಹಿರಿಯ ಜನರೇಷನ್ ಎಕ್ಸ್ ಹಾಗೂ ಮಿಲೆನಿಯಲ್ಸ್ ತಲೆಮಾರಿನ ಅನೇಕರು ಪ್ರಶ್ನಿಸುತ್ತಲೇ ಇದ್ದಾರೆ.

ಆದರೆ, ಈ ಟೀಕೆಗಳ ನಡುವೆಯೂ ಒಂದು ವಿಭಿನ್ನ ವಾಸ್ತವ ನಮ್ಮೆದುರಿಗೆ ತೆರೆದುಕೊಳ್ಳುತ್ತದೆ. ಭಾರತವನ್ನು ಒಳಗೊಂಡಂತೆ ಜಗತ್ತಿನಾದ್ಯಂತ ಜೆನ್‌ಜಿ ಇಂದು ಅತ್ಯಂತ ಸಾಮಾಜಿಕ ಜಾಗೃತಿಯುಳ್ಳ, ರಾಜಕೀಯ ಅರಿವಿನ ಜೊತೆಗೆ ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ಪೀಳಿಗೆಯಾಗಿ ಹೊರಹೊಮ್ಮಿದೆ. ಅವರ ಭಾಷೆ, ಬದುಕಿನ ಶೈಲಿ ಮತ್ತು ಕೆಲಸದ ವಿಧಾನಗಳು ವಿಭಿನ್ನವಾಗಿರಬಹುದು. ಆದರೆ ಸಮಾಜದ ಬಗೆಗಿನ ಅವರ ಕಾಳಜಿ ಅತ್ಯಂತ ಆಳವಾದುದು. ಅನೇಕ ರೀತಿಯಲ್ಲಿ ಹಿಂದಿನ ತಲೆಮಾರುಗಳು ಸಮಾಜದ ಸ್ಥಿತಿಗತಿಯನ್ನು ಪ್ರಶ್ನಿಸಿ ಬದಲಾವಣೆಗೆ ಪ್ರಯತ್ನಿಸಿದಂತೆ, ಜೆನ್‌ಜಿ ಕೂಡ ಜಗತ್ತನ್ನು ಮಾಗಿಸುತ್ತಾ ಮರುವ್ಯಾಖ್ಯಾನಿಸಲು ಮುಂದಾಗಿದೆ.

ವೈವಿಧ್ಯತೆ ಸ್ವೀಕರಿಸುವ ಮನಸ್ಥಿತಿ

ಮನೋವಿಜ್ಞಾನಿಗಳು ಮತ್ತು ನರ ವಿಜ್ಞಾನಿಗಳ ಪ್ರಕಾರ, ಒಂದು ತಲೆಮಾರಿನ ವ್ಯಕ್ತಿತ್ವವು ಕೇವಲ ವೈಯಕ್ತಿಕ ಆಯ್ಕೆಗಳಿಂದ ರೂಪುಗೊಳ್ಳುವುದಿಲ್ಲ; ಅವರು ಬೆಳೆಯುವ ಸಾಮಾಜಿಕ, ಸಾಂಸ್ಕೃತಿಕ ಹಾಗೂ ತಾಂತ್ರಿಕ ಪರಿಸರವೂ ಅದನ್ನು ರೂಪಿಸುತ್ತದೆ. ಅಮೆರಿಕದ ಮನೋವಿಜ್ಞಾನಿ ಜೀನ್ ಟ್ವೆಂಜ್ ಸೇರಿದಂತೆ ಅನೇಕ ಸಂಶೋಧಕರು ಸೂಚಿಸುವಂತೆ, ಡಿಜಿಟಲ್ ಯುಗದಲ್ಲಿ ಬೆಳೆದಿರುವ ಜೆನ್‌ಜಿ ಪೀಳಿಗೆ, ತಮ್ಮ ಹಿಂದಿನ ತಲೆಮಾರುಗಳಿಗಿಂತ ಹೆಚ್ಚು ಜಾಗತಿಕ ಅರಿವು ಮತ್ತು ವೈವಿಧ್ಯತೆಯನ್ನು ಸ್ವೀಕರಿಸುವ ಮನೋಭಾವವನ್ನು ಹೊಂದಿದೆ.

ವಿಕಾಸ ಮನೋವಿಜ್ಞಾನಿ ಎರಿಕ್ ಎರಿಕ್ಸನ್ ಅವರ ಪ್ರಕಾರ, ಯೌವನವು ವ್ಯಕ್ತಿಯ ಗುರುತಿನ ನಿರ್ಮಾಣದ ಅತ್ಯಂತ ಮಹತ್ವದ ಹಂತ. 'ನಾನು ಯಾರು?', 'ಸಮಾಜದಲ್ಲಿ ನನ್ನ ಪಾತ್ರವೇನು?' ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಕ್ರಿಯೆಯೇ ಯುವಜನರನ್ನು ಸಾಮಾಜಿಕ ನ್ಯಾಯ, ಪರಿಸರ ಸಂರಕ್ಷಣೆ ಮತ್ತು ಮಾನಸಿಕ ಆರೋಗ್ಯದಂತಹ ವಿಚಾರಗಳತ್ತ ಸೆಳೆಯುತ್ತದೆ. ಹೀಗಾಗಿ ಜೆನ್‌ಜಿಯ ಸಾಮಾಜಿಕ ಕ್ರಿಯಾಶೀಲತೆಯನ್ನು ಕೇವಲ ಟ್ರೆಂಡ್ ಎಂದು ನೋಡುವುದಕ್ಕಿಂತ, ಅದು ಅವರ ಗುರುತಿನ ಹುಡುಕಾಟದ ಭಾಗವೆಂದೂ ಅರ್ಥೈಸಬಹುದು.

ಜಗತ್ತಿನೊಂದಿಗೆ ನಿರಂತರ ಸಂಪರ್ಕ ಹೊಂದಿರುವ ಮೊದಲ ತಲೆಮಾರು ಜೆನ್‌ಜಿ ಪೀಳಿಗೆಯಾಗಿದೆ. ಬೆಂಗಳೂರಿನ ಯುವಕನೊಬ್ಬ ಕೆನಡಾದ ಕಾಡ್ಗಿಚ್ಚು, ಪಾಕಿಸ್ತಾನದ ಪ್ರವಾಹ ಅಥವಾ ಆಫ್ರಿಕಾದ ಮಾನವೀಯ ಬಿಕ್ಕಟ್ಟಿನ ಸುದ್ದಿಯನ್ನು ಕ್ಷಣಾರ್ಧದಲ್ಲಿ ನೋಡಬಲ್ಲನು. ಈ ಜಾಗತಿಕ ಸಂಪರ್ಕವು ಅವರನ್ನು ಕೇವಲ ತಮ್ಮ ದೇಶದ ನಾಗರಿಕರಾಗಿ ಮಾತ್ರವಲ್ಲ, ಜಗತ್ತಿನ ನಾಗರಿಕರಾಗಿ ಯೋಚಿಸುವಂತೆ ಮಾಡಿದೆ.

ಜಾಗತಿಕ ಸಹಾನುಭೂತಿ

ನರವಿಜ್ಞಾನ ಸಂಶೋಧನೆಗಳು 'ಮಿರರ್ ನ್ಯೂರಾನ್ಸ್' ಎನ್ನುವ ನರಕೋಶಗಳು ಇತರರ ನೋವನ್ನು ಅರ್ಥ ಮಾಡಿಕೊಳ್ಳುವ ಸಹಾನುಭೂತಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಿಳಿಸಿವೆ. ಜಗತ್ತಿನ ವಿವಿಧ ಭಾಗಗಳಲ್ಲಿ ನಡೆಯುವ ಯುದ್ಧಗಳು, ಪ್ರಕೃತಿ ವಿಕೋಪಗಳು ಅಥವಾ ಸಾಮಾಜಿಕ ಅನ್ಯಾಯಗಳ ಸುದ್ದಿಗಳನ್ನು ನಿರಂತರವಾಗಿ ನೋಡುವುದರಿಂದ ಜೆನ್‌ಜಿ ಪೀಳಿಗೆ ಹೆಚ್ಚು ಜಾಗತಿಕ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದೆ ಎಂದು ಕೆಲವು ಅಧ್ಯಯನಗಳು ತಿಳಿಸಿವೆ.

ಇದೇ ವೇಳೆ, ಈ ತಲೆಮಾರು ಡಿಜಿಟಲ್ ವ್ಯಸನ, ಅತಿಯಾದ ಮಾಹಿತಿ ವ್ಯಸನ ಹಾಗೂ ಮಾನಸಿಕ ಒತ್ತಡದಂತಹ ಸವಾಲುಗಳನ್ನೂ ಎದುರಿಸುತ್ತಿದೆ. ಮನೋವಿಜ್ಞಾನಿಗಳು ಇದನ್ನು 'ಇಕೊ– ಆಂಕ್ಸೈಟಿ', 'ಡೂಮ್‌ಸ್ಕ್ರೋಲಿಂಗ್' ಮತ್ತು 'ಡಿಜಿಟಲ್ ಬರ್ನೌಟ್' ಎಂಬ ಪರಿಕಲ್ಪನೆಗಳ ಮೂಲಕ ವಿವರಿಸುತ್ತಾರೆ. ಜಗತ್ತಿನ ಸಮಸ್ಯೆಗಳ ಬಗ್ಗೆ ಅತಿಯಾದ ಅರಿವು ಕೆಲವೊಮ್ಮೆ ಆತಂಕ ಮತ್ತು ಭಾವನಾತ್ಮಕ ದಣಿವಿಗೂ ಕಾರಣವಾಗಬಹುದು.

ಹಾಗಿದ್ದರೂ, ಜೆನ್‌ಜಿಯ ಅತ್ಯಂತ ದೊಡ್ಡ ಕೊಡುಗೆಗಳಲ್ಲಿ ಒಂದು ಮಾನಸಿಕ ಆರೋಗ್ಯದ ಕುರಿತ ಸಮಾಜದ ದೃಷ್ಟಿಕೋನವನ್ನು ಬದಲಾಯಿಸಿರುವುದು. ದಶಕಗಳ ಕಾಲ ಆತಂಕ, ಖಿನ್ನತೆ ಹಾಗೂ ಭಾವನಾತ್ಮಕ ಸಮಸ್ಯೆಗಳ ಬಗ್ಗೆ ಮಾತನಾಡುವುದನ್ನೇ ದುರ್ಬಲತೆ ಎಂದು ಪರಿಗಣಿಸಲಾಗುತ್ತಿತ್ತು. ಆದರೆ, ಜೆನ್‌ಜಿ ಈ ಮೌನದ ಸಂಸ್ಕೃತಿಗೆ ಸವಾಲೊಡ್ಡಿದೆ. ಸಹಾಯ ಕೇಳುವುದು ದುರ್ಬಲತೆಯಲ್ಲ; ಅದು ಧೈರ್ಯದ ಸಂಕೇತ ಎಂಬ ಸಂದೇಶವನ್ನು ಈ ಪೀಳಿಗೆ ನೀಡುತ್ತಿದೆ. ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂರಕ್ಷಣೆಯ ವಿಷಯದಲ್ಲಿಯೂ ಜೆನ್‌ಜಿ ಮುಂಚೂಣಿಯಲ್ಲಿದೆ. ಹವಾಮಾನ ಹೋರಾಟಗಾರ್ತಿ ಗ್ರೆಟಾ ಥನ್‌ಬರ್ಗ್, ಶಿಕ್ಷಣ ಹಕ್ಕಿನ ಹೋರಾಟಗಾರ್ತಿ ಮಲಾಲ ಯೂಸಫ್, ಅಮೆರಿಕದ ಎಮ್ಮಾ ಗೊನ್ಸಾಲಿಸ್ ಹಾಗೂ ಡಿಜಿಟಲ್ ಕಥೆಗಾರ ಯೂಸುಫ್ ಓಮರ್ ಮೊದಲಾದವರು, ಜೆನ್‌ಜಿಗಳು ಕೇವಲ ಬದಲಾವಣೆಯ ಫಲಾನುಭವಿಗಳಲ್ಲ; ಬದಲಾವಣೆಯನ್ನು ರೂಪಿಸುವವರು ಎಂಬುದನ್ನು ಸಾಬೀತುಪಡಿಸಿದ್ದಾರೆ.

ದೇಶ ನಿರ್ಮಾಣದಲ್ಲಿ ಭಾಗಿ

ಭಾರತದಲ್ಲಿಯೂ ಹೊಸ ಶೈಲಿಯ ಯುವ ಚಳವಳಿಗಳು ಕಾಣಿಸಿಕೊಳ್ಳುತ್ತಿವೆ. ಇತ್ತೀಚೆಗೆ ಚರ್ಚೆಗೆ ಗ್ರಾಸವಾಗಿರುವ ಕಾಕ್ರೋಚ್ ಜನತಾ ಪಾರ್ಟಿ ಆರಂಭದಲ್ಲಿ ಒಂದು ವ್ಯಂಗ್ಯಮಯ ಆನ್‌ಲೈನ್ ಅಭಿಯಾನವಾಗಿ ಕಂಡರೂ, ನಂತರ ಯುವಜನರ ಅಸಮಾಧಾನದ ಪ್ರತೀಕವಾಗಿ ಬೆಳೆಯಿತು. ಒಂದು ಮೀಮ್ ಚಳವಳಿಯಾಯಿತು; ಒಂದು ಹ್ಯಾಶ್‌ಟ್ಯಾಗ್ ರಾಷ್ಟ್ರೀಯ ಚರ್ಚೆಯ ವಿಷಯವಾಯಿತು. ಜೆನ್‌ಜಿಗಳು ರಾಜಕೀಯದಲ್ಲಿ ಆಸಕ್ತಿ ಹೊಂದಿಲ್ಲ ಎನ್ನುವ ಸಾಮಾನ್ಯ ಅಭಿಪ್ರಾಯ ಎಲ್ಲೆಲ್ಲೂ ಮನೆ ಮಾಡಿದೆ. ಈ ಅಭಿಪ್ರಾಯವನ್ನು ಕಾಕ್ರೋಚ್ ಜನತಾ ಪಾರ್ಟಿ ಅಭಿಯಾನ ಸುಳ್ಳೆಂದು ಸಾಬೀತುಪಡಿಸಿದೆ. ಖಂಡಿತವಾಗಿಯೂ ಜೆನ್‌ಜಿ ಪರಿಪೂರ್ಣ ತಲೆಮಾರಲ್ಲ. ಡಿಜಿಟಲ್ ವ್ಯಸನ, ಆರ್ಥಿಕ ಅನಿಶ್ಚಿತತೆ ಹಾಗೂ ಮಾನಸಿಕ ಒತ್ತಡಗಳು ಅವರ ಬದುಕಿನ ಭಾಗವಾಗಿವೆ. ಆದರೆ ಪ್ರತಿಯೊಂದು ತಲೆಮಾರು ಕೂಡಾ ತನ್ನದೇ ಆದ ಮಿತಿಗಳೊಂದಿಗೆ ಇತಿಹಾಸದಲ್ಲಿ ಗುರುತಿಸಿಕೊಂಡಿದೆ. ಕಾಲ ಕಳೆದಂತೆ ಅವರ ದೋಷಗಳಿಗಿಂತ ಕೊಡುಗೆಗಳೇ ಹೆಚ್ಚು ನೆನಪಿನಲ್ಲಿ ಉಳಿಯುತ್ತವೆ.

ಹೀಗಾಗಿ ಮುಖ್ಯ ಪ್ರಶ್ನೆ ಜೆನ್‌ಜಿ ಪೀಳಿಗೆಗೆ ಸೇರಿದ ಯುವ ಜನರು ತಮ್ಮ ಮೊಬೈಲ್‌ಗಳಲ್ಲಿ ಎಷ್ಟು ಸಮಯ ಕಳೆಯುತ್ತಾರೆ ಎಂಬುದಲ್ಲ; ಅವರು ಆ ಮೊಬೈಲ್‌ಗಳನ್ನು ಯಾವುದಕ್ಕಾಗಿ ಬಳಸುತ್ತಿದ್ದಾರೆ ಎಂಬುದಾಗಿದೆ. ಅವರು ತಂತ್ರಜ್ಞಾನವನ್ನು ಸಮುದಾಯಗಳನ್ನು ಕಟ್ಟಲು, ಅನ್ಯಾಯವನ್ನು ಪ್ರಶ್ನಿಸಲು, ಜಾಗೃತಿ ಮೂಡಿಸಲು ಮತ್ತು ಉತ್ತಮ ಭವಿಷ್ಯವನ್ನು ರೂಪಿಸಲು ಬಳಸುತ್ತಿದ್ದರೆ, ಕಥೆಯ ಕೇಂದ್ರಬಿಂದು ಸಾಧನವಲ್ಲ ಅದನ್ನು ಹಿಡಿದಿರುವ ತಲೆಮಾರೇ ನಿಜವಾದ ಕಥೆ.

ನೋವನ್ನು ಒಪ್ಪಿಕೊಳ್ಳುವುದರಿಂದ, ಅಹಿತಕರ ಸತ್ಯಗಳನ್ನು ಎದುರಿಸುವುದರಿಂದ ಹಾಗೂ ಅನ್ಯಾಯವನ್ನು ಸಹಜವೆಂದು ಒಪ್ಪಿಕೊಳ್ಳಲು ನಿರಾಕರಿಸುವುದರಿಂದ ಗುಣಪಡಿಸುವ ಪ್ರಕ್ರಿಯೆಯು ಆರಂಭವಾಗುವುದಾದರೆ, ಜನರೇಷನ್ ಜೀ ನಿಜವಾಗಿಯೂ 'ಹೀಲಿಂಗ್ ಜನರೇಶನ್' ಎಂದು ಇತಿಹಾಸದಲ್ಲಿ ಉಳಿದುಕೊಳ್ಳಬಹುದು. ಬಿರುಕು ಬಿಟ್ಟ ಜಗತ್ತನ್ನು ಕಂಡು ಅದರಿಂದ ಮುಖ ತಿರುಗಿಸದೆ, ಅದನ್ನು ಸರಿಪಡಿಸಲು ಕೈಜೋಡಿಸಿದ ತಲೆಮಾರಾಗಿ ಜೆನ್‌ಜಿ ಪೀಳಿಗೆ ಇತಿಹಾಸದಲ್ಲಿ ಸ್ಥಾನ ಪಡೆದುಕೊಳ್ಳಲಿದೆ.

(ಲೇಖಕರು: ಮನೋವಿಜ್ಞಾನ ಸಹಾಯಕ ಪ್ರಾಧ್ಯಾಪಕಿ)

ಕಡಿಮೆ ಆಲ್ಕೋಹಾಲ್ ಸೇವನೆ

ತಮಗಿಂತ ಹಿರಿಯ ಪೀಳಿಗೆಗಳಿಗೆ ಹೋಲಿಸಿದರೆ ಜೆನ್‌ಜಿಗಳು ಕಡಿಮೆ ಆಲ್ಕೋಹಾಲ್ ಸೇವಿಸುತ್ತಾರೆ ಎನ್ನುವ ಅಚ್ಚರಿಯ ಮಾಹಿತಿ ಅಧ್ಯಯನದಿಂದ ಬಳಕಿಗೆ ಬಂದಿದೆ. ಅವರು ಗೀಳು ಅಥವಾ ಚಟಕ್ಕಾಗಿ ಸೇವಿಸದೆ ಸಾಮಾಜಿಕವಾಗಿ ಬೆರೆಯುವ (ಸೋಷಲೈಸ್) ಉದ್ದೇಶದಿಂದ ಹಿತಮಿತವಾಗಿ ಧೂಮಪಾನ ಮತ್ತು ಮದ್ಯಪಾನ ಮಾಡುತ್ತಾರೆ.

ವಿಕ ಫೋಕಸ್

- **20- 30%** ಜಗತ್ತಿನ ಉದ್ಯೋಗ ಕ್ಷೇತ್ರದಲ್ಲಿನ ಜೆನ್‌ಜಿಗಳ ಪ್ರಮಾಣ
- **85%** ಸೋಷಿಯಲ್ ಮೀಡಿಯಾಗಳಲ್ಲಿ ಉತ್ಪನ್ನಗಳ ಮಾಹಿತಿ ಪಡೆಯುವ ಜೆನ್ ಜಿಗಳ ಪ್ರಮಾಣ
- **62%** ಆನ್‌ಲೈನ್‌ನಲ್ಲಿ ಪ್ರವಾಸದ ಉತ್ತಮ ಡೀಲ್‌ಗಳನ್ನು ಅರಸುವ ಜೆನ್‌ಜಿಗಳು
- **65%** ಪ್ಯಾಷನ್‌ಗಿಂತ ಸ್ಟೈಲ್‌ಗೆ ಮಹತ್ವ ನೀಡುವ ಜೆನ್‌ಜಿಗಳು
- **40%** ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವ ಜೆನ್‌ಜಿಗಳು
- **43%** ಫೋನ್ ಸಂಭಾಷಣೆಗಿಂತ ಮುಖಾಮುಖಿ ಮಾತುಕತೆಗೆ ಒಲವು ತೋರುವ ಜೆನ್‌ಜಿ ಪ್ರಮಾಣ

ಸಾಮಾಜಿಕ ಜಾಲತಾಣಗಳು ಉದ್ದಿಮೆ ಸ್ಥಾಪನೆಯ ಪರಿಕರಗಳು

ಜೆನ್‌ಜಿ ಪೀಳಿಗೆಯ 62% ಮಂದಿ ನೈನ್ ಟು ಸೆವೆನ್ ಮಾದರಿಯ ಕಚೇರಿ ಕೆಲಸಗಳ ನಿರ್ವಹಣೆಯತ್ತ ನಿರಾಸಕ್ತಿ ಹೊಂದಿದ್ದಾರೆ. ಅವರು ಕಚೇರಿ ಉದ್ಯೋಗಕ್ಕಿಂತ ಸ್ವಂತ ಉದ್ದಿಮೆ ಸ್ಥಾಪಿಸುವ ಗುರಿ ಹೊಂದಿದ್ದಾರೆ. ಹೀಗಾಗಿ ಅವರು ಯೂಟ್ಯೂಬ್, ಇನ್‌ಸ್ಟಾಗ್ರಾಂ ಮುಂತಾದ ಸಾಮಾಜಿಕ ಜಾಲತಾಣಗಳನ್ನು ಕೇವಲ ಮನರಂಜನೆಗಾಗಿ ನೋಡುವುದಿಲ್ಲ, ಉದ್ದಿಮೆ ಸ್ಥಾಪನೆಯ ಪರಿಕರಗಳಂತೆಯೂ ಅವುಗಳನ್ನು ಅವರು ಬಳಸಿಕೊಳ್ಳುತ್ತಿದ್ದಾರೆ.

ಆನೆಗಳನ್ನು ಸೆರೆ ಹಿಡಿದ ನಾವು ಅವುಗಳ ಪ್ರಕೃತಿ ಕರೆಯನ್ನು ಚಿವುಟಿದ್ದೇವೆ

ಅವಘಡದ ಹಿಂದೆ ವಿರಹದ ಗುಟ್ಟು!

ಲೋಕಲ್ ಸಂಚಾರ
ಐತಿಚಂಡ ರಮೇಶ್ ಉತ್ತಪ್ಪ

ಕೆಲವು ಸೂಕ್ಷ್ಮ ವಿಷಯಗಳನ್ನು ನಾವು ಯಾರೂ ಸರಿಯಾಗಿ ಗಮನಿಸುತ್ತಿಲ್ಲ. ಇತ್ತೀಚೆಗೆ ದುಬಾರೆಯ ಆನೆ ಶಿಬಿರದಲ್ಲಿ ಆನೆ ಕಂಜನ್ ದಾಳಿಗೆ ಮಾರ್ತಾಂಡ ಆನೆ ಹಾಗೂ ಪ್ರವಾಸಿ ಮಹಿಳೆಯೊಬ್ಬರು ಬಲಿಯಾದರು. ಆನೆಯ ವರ್ತನೆಗೆ ಎಲ್ಲೆಡೆ ಆಕ್ರೋಶ ವ್ಯಕ್ತವಾಗಿದೆ. ದಸರೆ ಸಂದರ್ಭ ಚಾಕ್ಲೆಟ್ ಹೀರೊ ಎಂದೇ ಕರೆಸಿಕೊಂಡು ಅಪಾರ ಅಭಿಮಾನಿಗಳನ್ನು ಸೃಷ್ಟಿಸಿಕೊಂಡಿರುವ ಕಂಜನ್ ಈ ದಿಢೀರ್ ಘಟನೆಯಿಂದ ವಿಲನ್ ಆಗಿದ್ದಾನೆ. ಇದಕ್ಕೆ ಶಿಕ್ಷೆ ಎನ್ನುವಂತೆ ಎಲ್ಲಾ ಕಾರ್ಯಾಚರಣೆಗಳಿಂದ ಹಾಗೂ ದಸರೆಯಿಂದ ದೂರ ಇಡಲಾಗಿದೆ. ಆದರೆ, ಧಾವಂತದಲ್ಲಿ ಆ ದುರ್ಘಟನೆಗೆ ನಿಜವಾದ ಕಾರಣ ಏನು ಎನ್ನುವುದನ್ನು ನಮ್ಮ ವ್ಯವಸ್ಥೆ ಅರಿಯುವಲ್ಲಿ ವಿಫಲವಾಗಿದೆ. ಕೇವಲ ಪ್ರವಾಸಿಗರ ಕಿರಿಕಿರಿ, ಓವರ್ ಟೂರಿಸಂ ಮಾತ್ರವಲ್ಲ, ಅದರೊಂದಿಗೆ ಪ್ರಕೃತಿಯ ಹಲವು ಒತ್ತಡಗಳಿರುತ್ತವೆ. ಅವುಗಳನ್ನೂ ಸೂಕ್ಷ್ಮವಾಗಿ ಗಮನಿಸಬೇಕಿದೆ.

ಅಂದಿನ ಘಟನೆಯನ್ನು ಸ್ವಲ್ಪ ನೆನಪು ಮಾಡಿಕೊಳ್ಳೋಣ. ದುಬಾರೆಯಲ್ಲಿ ಕಿಕ್ಕಿರಿದ ಪ್ರವಾಸಿಗರು ತುಂಬಿದ್ದರು. ಈ ಪ್ರವಾಸಿಗರ ಪ್ರದರ್ಶನಕ್ಕೆ ಎಂಬಂತೆ ಸಾಕಾನೆಗಳನ್ನು ಕರೆತರಲಾಗಿದೆ. ಅದಾಗಲೇ ಮಾರ್ತಾಂಡ ಸೇರಿದಂತೆ ಇತರ ಆನೆಗಳಿದ್ದವು. ಅಲ್ಲಿಗೆ ಬಂದ ಕಂಜನ್ ಆನೆ ಇದ್ದಕ್ಕಿದ್ದಂತೆ ಮಾರ್ತಾಂಡ ಆನೆ ಮೇಲೆ ದಾಳಿ ಮಾಡಿದ. ಮಾರ್ತಾಂಡ ಪಕ್ಕದಲ್ಲಿ ನಿಂತಿದ್ದ ಮಹಿಳೆ ದುರದೃಷ್ಟವಶಾತ್ ಅದರಡಿಗೆ ಸಿಲುಕಿಕೊಂಡರು.

ಅಂದು ನಿಜವಾಗಿಯೂ ನಡೆದದ್ದೇನು? ಮದ ಬರುವಾಗ ಆನೆಗಳ ವರ್ತನೆ ಬದಲಾಗುವುದು ಎಲ್ಲರಿಗೂ ಗೊತ್ತು. ಈ ಸಂದರ್ಭ ಅದರ ದೇಹದಲ್ಲಿ ಟೆಸ್ಟೋಸ್ಟೆರೋನ್ ಎನ್ನುವ ಹಾರ್ಮೋನ್ ವಿಪರೀತ ಪ್ರಮಾಣದಲ್ಲಿ ಬಿಡುಗಡೆಯಾಗುತ್ತದೆ. ಇವು ದೈಹಿಕ ವಾಂಛೆಯನ್ನು ಉತ್ತೇಜಿಸುವ ಹಾರ್ಮೋನ್‌ಗಳಾಗಿದ್ದು, ಇದರಿಂದ ಆನೆ ಹಲ್ಲುನೋವು, ಜ್ವರ, ಕಣ್ಣು ಉರಿಯಂತಹ ಕಿರಿಕಿರಿಯನ್ನು ಅನುಭವಿಸುತ್ತದೆ. ಪ್ರೀ ಮಸ್ತ್ ಲಕ್ಷಣ ಹೊರಗೆ ಗೋಚರವಾಗುವುದಿಲ್ಲ.

ಈ ಲಕ್ಷಣದಲ್ಲಿದ್ದ ಕಂಜನ್‌ನ ವಯಸ್ಸು 25. ಅದು ಯೌವನಾವಸ್ಥೆಯ ಕಿರಿಕಿರಿ. ಆರಂಭದಲ್ಲಿನ ಮದದ ಲಕ್ಷಣಗಳಲ್ಲಿ ಹೇಗೆ ವರ್ತಿಸಬೇಕು ಎನ್ನುವ ಅನುಭವ ಇರುವುದಿಲ್ಲ. ಈ ಸಂದರ್ಭ ಅದು ಹೆಣ್ಣಿನ ಸಂಗವನ್ನು ಬಯಸುತ್ತದೆ. ಆರಂಭದ ತಳಮಳವಿರುತ್ತದೆ. ಅಂದು ಕೂಡ ಕಂಜನ್ ಈ ರೀತಿಯ ತಳಮಳದಲ್ಲಿದ್ದ. ಕಾಡಾನೆಗಳು ತನ್ನದೇ ಸ್ಥಿತಿಯಲ್ಲಿರುವ ಹೆಣ್ಣಾನೆಗಳನ್ನು ಹುಡುಕಿಕೊಳ್ಳುತ್ತವೆ. ಆದರೆ, ಕಂಜನ್‌ನ ಒಳ ಅಸಹನೆ ಯಾರಿಗೂ ಅರ್ಥವಾಗಲಿಲ್ಲ. ದುರ್ಘಟನೆ ನಡೆಯುವ ಕೆಲವು ದಿನಗಳಿಂದಲೇ ಶಿಬಿರದಲ್ಲಿದ್ದ ಹೆಣ್ಣಾನೆ ಹೇಮಾವತಿಯ ಹಿಂದೆ ಬಿದ್ದಿದ್ದಾನೆ. ಅದರ ಸಂಗ ಬಯಸಿದ್ದರೂ ಮಾವುತರು ಅವಕಾಶ ನೀಡಲಿಲ್ಲ. ಏಕೆಂದರೆ, ಹೇಮಾವತಿಗೆ ಆರೋಗ್ಯದ ಸಮಸ್ಯೆ ಇದ್ದು, ಹಿರಿಯ ಅಧಿಕಾರಿಗಳು ಶಿಬಿರದಲ್ಲಿ ಇರದ ಹಿನ್ನೆಲೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗದೆ ಕಂಜನ್‌ನನ್ನು ನಿಯಂತ್ರಿಸುತ್ತಲೇ ಬಂದಿದ್ದಾರೆ. ದುರಂತದ ಸಂದರ್ಭ ಕಾವೇರಿ ನದಿಗೆ ಸ್ನಾನಕ್ಕೆ ಕರೆದುಕೊಂಡು ಬರುವಾಗ ಮತ್ತೆ ಹೇಮಾವತಿ ಎದುರಾಗಿ ಕಂಜನ್‌ನ ಚಡಪಡಿಕೆ ಹೆಚ್ಚಾಗಿದೆ. ಆದರೂ ಬಲತ್ಕಾರದಿಂದ ಆಕೆಯಿಂದ ದೂರಮಾಡಿ ನದಿಗೆ ಕರೆತಂದಿದ್ದಾರೆ. ಇದು ಅತ್ಯಂತ ಅಪಾಯಕಾರಿಯಾದ ಕ್ಷಣ.

ಒಟ್ಟಿಗೆ 7 ಆನೆಗಳನ್ನು ಪ್ರವಾಸಿಗರಿಗೆ ಪ್ರದರ್ಶನ ಮಾಡಲು, ಸ್ನಾನ ಮಾಡಿಸಲು ಕರೆತಂದಿದ್ದಾರೆ. ಕಂಜನ್ ಅದಾಗಲೇ ಹೆಣ್ಣಿನ ಸಂಗವಿಲ್ಲದೆ ಮಾನಸಿಕವಾಗಿ ಜರ್ಜರಿತನಾಗಿದ್ದ. ಈ ವೇಳೆ ಅಡ್ಡಲಾಗಿ ಮಕ್ನಾ ಆನೆ ಮಾರ್ತಾಂಡ ಮಲಗಿದ್ದ. ಅದನ್ನು ಎಬ್ಬಿಸದಂತೆ ಕಂಜನ್ ಮಾವುತ ಸೂಚನೆ ಕೊಟ್ಟರೂ ಕೇಳದೆ ಮಾರ್ತಾಂಡನನ್ನು ಅದರ ಮಾವುತ ಎಬ್ಬಿಸಿದ್ದಾನೆ. ಇಲ್ಲಿ ಎರಡು ಮೂರು ಘಟನೆಗಳು ಒಟ್ಟೊಟ್ಟಿಗೆ ನಡೆದಿವೆ. ಮೊದಲನೆಯದಾಗಿ ಹೆಣ್ಣಿನ ಸಂಗವನ್ನು ನಾಲ್ಕೈದು ದಿನಗಳಿಂದ ಬಯಸಿದರೂ ಬಲವಂತದಿಂದ ತಡೆದಿದ್ದಾರೆ. ಎರಡನೆಯದಾಗಿ ಕಂಜನ್‌ನ ಎಡಗಣ್ಣು ಸ್ವಲ್ಪ ಮಂದ. ಮಾರ್ತಾಂಡನನ್ನು ಅಯ್ಯಪ್ಪ ಆನೆ ಎಂದು ತಪ್ಪಾಗಿ ಭಾವಿಸಿದಂತಿದೆ. ಅಯ್ಯಪ್ಪ ಹಾಗೂ ಕಂಜನ್ ಬದ್ಧ ದ್ವೇಷಿಗಳು. ಮಾನಸಿಕ ತಳಮಳದಲ್ಲಿದ್ದ ಕಂಜನ್ ಎಡಬದಿಯಲ್ಲಿ ಮಲಗಿದ್ದ ಸ್ಥಿತಿಯಿಂದ ಎದ್ದೇಳಲು ಯತ್ನಿಸಿದ ಮಾರ್ತಾಂಡನನ್ನು ಅಯ್ಯಪ್ಪ ಎಂದು ಭಾವಿಸಿ, ಆತ ಮತ್ತೆ ತನ್ನ ಮೇಲೆ ದಾಳಿ ಮಾಡಬಹುದು ಎಂದು ಈತನೇ ಮೊದಲು ದಾಳಿ ಮಾಡಿ ಗಾಯಗೊಳಿಸಿದ್ದಾನೆ. ಇದರ ಜೊತೆಗೆ ಸಾವಿರಾರು ಪ್ರವಾಸಿಗರ ಶಿಳ್ಳೆ, ಕೂಗು ಬೇರೆ. ಇದರಿಂದ ತಾಳ್ಮೆ ಕಳೆದುಕೊಂಡಿದ್ದಾನೆ. ಇದು ನಡೆದ ಘಟನೆ.

ಇದಕ್ಕೆ ಇನ್ನೂ ಕೆಲವು ಕುತೂಹಲಕಾರಿ ಹಾಗೂ ಆಘಾತಕಾರಿ ಅಂಶವೂ ಸೇರಿಕೊಂಡಿದೆ. ಅದೇನೆಂದರೆ ಸಾಕಾನೆ ಶಿಬಿರಗಳಲ್ಲಿ ಗಂಡಾನೆಗಳ ವಿರಹ ವೇದನೆ. ಮದ ಬಂದಾಗ ಟೆಸ್ಟೊಸ್ಟೆರೋನ್ ಹಾರ್ಮೋನ್‌ನ ನಿಯಂತ್ರಣಕ್ಕೆ ಅವುಗಳು ಹೆಣ್ಣಾನೆಗಳ ಜೊತೆ ಸೇರಲೇಬೇಕು. ನಮ್ಮ ರಾಜ್ಯದ ಆನೆ ಶಿಬಿರಗಳಲ್ಲಿ 110 ಆನೆಗಳಿವೆ. ಅವುಗಳಲ್ಲಿ ಹೆಣ್ಣಾನೆ ಕೇವಲ 20. ಅದರಲ್ಲಿಯೂ ಪ್ರಾಪ್ತ ವಯಸ್ಸಿಗೆ ಬಂದಿರುವುದು ಹದಿನೈದು ಮಾತ್ರ. ಇದರಿಂದ ಹೆಣ್ಣಾನೆಗಳ ಕೊರತೆ ತೀವ್ರವಾಗಿ ಕಾಡುತ್ತಿದೆ. ಕಂಜನ್ ಇರುವ ದುಬಾರೆಯಲ್ಲಿ 25 ಗಂಡಾನೆ ಇದ್ದರೆ ಹೆಣ್ಣಾನೆಗಳು 4 ಮಾತ್ರ.

ಇರುವ ಹೆಣ್ಣಾನೆಗಳು ಕೂಡ ಶಿಬಿರದ ಗಂಡಾನೆಗಳನ್ನು ಸೇರಿಸಿಕೊಳ್ಳುವುದಿಲ್ಲ. ಸಾಕಾನೆಗಳು ತಮ್ಮ ಮೂಲಗುಣವನ್ನು ಕಳೆದುಕೊಳ್ಳುವುದರಿಂದ ಹೆಣ್ಣಾನೆಗಳು ಕೂಡ ಕಾಡಿನ ಗಂಡನ್ನೇ ಬಯಸುತ್ತವೆ. ಶಿಬಿರದ ಹೆಣ್ಣಾನೆ ತಿರಸ್ಕಾರದಿಂದ ಕಾಣುವಾಗ ಕಾಡಿನ ಹೆಣ್ಣಾನೆಗಳಂತೂ ಹತ್ತಿರಕ್ಕೂ ಸೇರಿಸುವುದಿಲ್ಲ. ಶಿಬಿರದಲ್ಲಿನ ಗಂಡಾನೆಗಳ ಸ್ಥಿತಿಯನ್ನು ಯಾರೂ ಅರ್ಥ ಮಾಡಿಕೊಳ್ಳುತ್ತಿಲ್ಲ. ಅವುಗಳನ್ನು ಬಲವಂತವಾಗಿ ಸೆರೆ ಹಿಡಿದು ಅವುಗಳ ನೈಜ ಸ್ವಭಾವವನ್ನು ಬದಲಾಯಿಸಿರುವ ನಾವು ಅವುಗಳಿಗೂ ಮನಸ್ಸಿದೆ, ಹೆಣ್ಣಿನ ಸಂಗ ಅದರ ಹಕ್ಕು ಎನ್ನುವುದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಅವುಗಳು ಕೂಡ ಪ್ರಕೃತಿಯ ಕರೆಗೆ ಓಗೊಡಬೇಕಿದೆ. ಆದರೆ, ಇಂತಹ ಅವಕಾಶವೇ ಇಲ್ಲದೆ ಇಂತಹ ದುರಂತಗಳು ನಡೆಯುತ್ತವೆ. ಪ್ರಕೃತಿಯಲ್ಲಿ ಗಂಡು ಹೆಣ್ಣನ್ನು ಬಲತ್ಕಾರವಾಗಿ ದೂರ ಇಡುವುದು ಕೂಡ ಅಪರಾಧ.

ಆನೆ ತಜ್ಞರಾದ ಡಾ. ಜಾಯ್ಸ್ ಪೂಲ್ ಅವರು ಆನೆಗಳ ದೀರ್ಘ ಅಧ್ಯಯನ ನಡೆಸಿದ್ದಾರೆ. ಆಕ್ಸ್‌ಫರ್ಡ್ ವಿವಿಯಲ್ಲಿ ಡಾ.ರೊನಾಲ್ಡ್ ಬ್ಲೋಮ್ ಬರ್ಗ್ ಹಾಗೂ ಡಾ.ಜಾಜೀಯ ಮೇಸನ್ ಮೃಗಾಲಯ ಪ್ರಾಣಿಗಳ ಮೇಲೆ ಅಧ್ಯಯನ ನಡೆಸಿದ್ದಾರೆ. ಅದರ ಒಟ್ಟಾರೆ ಫಲಿತಾಂಶ ಎಂದರೆ, ಪ್ರಾಣಿಗಳಲ್ಲಿ ದೈಹಿಕ ಹಸಿವು ಎಂಬುದು ಕೇವಲ ದೈಹಿಕ ಕ್ರಿಯೆಯಲ್ಲ, ಅದು ಅವುಗಳ ಒಟ್ಟಾರೆ ನರಮಂಡಲ ಮತ್ತು ಹಾರ್ಮೋನ್ ವ್ಯವಸ್ಥೆಯ ಅತ್ಯಗತ್ಯ ಭಾಗ. ಅದನ್ನು ನೈಸರ್ಗಿಕವಾಗಿ ಪೂರೈಸಲು ಬಿಡಬೇಕು. ಇಲ್ಲದಿದ್ದರೆ ಅವು ಮಾನಸಿಕವಾಗಿ ವಿಕಲಚೇತನವಾಗುತ್ತವೆ.

ದಸರೆಯಲ್ಲಿ ಅಂಬಾರಿ ಹೊರುವ ಆನೆಯ ಅಕ್ಕಪಕ್ಕದಲ್ಲಿ ಎರಡು ಹೆಣ್ಣಾನೆಗಳಿರುತ್ತವೆ. ಇದು ಕೂಡ ಗಂಡಾನೆಯ ಒತ್ತಡವನ್ನು, ಜನರ ಕಿರಿಕಿರಿಯನ್ನು ಸಹಿಸಿಕೊಂಡು ಪಕ್ಕದಲ್ಲಿ ಹೆಣ್ಣಿನ ಸಾಂಗತ್ಯದಿಂದ ಮನಸ್ಸನ್ನು ಶಾಂತವಾಗಿಡುವ ತಂತ್ರ. ಇದರಲ್ಲಿ ಎಲ್ಲಾ ರಹಸ್ಯ ಅಡಗಿದೆ. ಅಂಬಾರಿಯ ಅಕ್ಕಪಕ್ಕದಲ್ಲಿ ಹೆಣ್ಣಾನೆಗಳನ್ನು ನಿಲ್ಲಿಸುವ ನಾವು ಶಿಬಿರದಲ್ಲಿ ಒಂಟಿ ಮಾಡುವುದು ಎಷ್ಟು ಸರಿ?

(ಲೇಖಕರು: ವಿಕ ಮೈಸೂರು ಸ್ಥಾನಿಕ ಸಂಪಾದಕರು)
ramesh.uthappa@timesofindia.com

ಕರಾವಳಿಯಲ್ಲಿ ಸಾಮಾಜಿಕ ಕ್ರಾಂತಿಯ ಅಲೆಯೆಬ್ಬಿಸಿದ ಧೀಮಂತ

■ ಎಸ್.ಜಗದೀಶ್‌ಚಂದ್ರ ಅಂಚನ್

ಭಾರತದ ಸಾಮಾಜಿಕ ಇತಿಹಾಸದಲ್ಲಿ ಕೆಲವು ವ್ಯಕ್ತಿತ್ವಗಳು ತಮ್ಮ ಬದುಕಿನ ಮೂಲಕವೇ ಸಮಾಜಕ್ಕೆ ಹೊಸ ದಾರಿಯನ್ನು ತೋರಿಸಿವೆ. ಅವರು ಅಧಿಕಾರದ ಗದ್ದುಗೆಗಳನ್ನು ಅಲಂಕರಿಸದಿದ್ದರೂ, ಜನರ ಹೃದಯಗಳಲ್ಲಿ ಶಾಶ್ವತ ಸ್ಥಾನ ಗಳಿಸಿದ್ದಾರೆ. ಅಂತಹ ಮಹನೀಯರಲ್ಲಿ ಕುದ್ಮುಲ್ ರಂಗರಾವ್ ಅವರೂ ಒಬ್ಬರು. ದ.ಕ., ಉಡುಪಿ ಜಿಲ್ಲೆಯಲ್ಲಿ ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದ ಅವರು ಮಹಾನ್ ಸಮಾಜ ಸುಧಾರಕರಾಗಿದ್ದರು. ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಮೂಲಕ ಶೋಷಿತ ಸಮುದಾಯಗಳ ಬದುಕಿನಲ್ಲಿ ಕುದ್ಮುಲ್ ರಂಗರಾವ್ ಹೊಸ ಆಶಾಕಿರಣ ಮೂಡಿಸಿದರು, ದೀನದಲಿತರ ಉದ್ಧಾರಕ್ಕಾಗಿ ಬದುಕನ್ನೇ ಸಮರ್ಪಿಸಿದರು.

1859ರ ಜೂ.29ರಂದು ಮಧ್ಯಮ ವರ್ಗದ ಸಾರಸ್ವತ ಬ್ರಾಹ್ಮಣ ಸಮುದಾಯದಲ್ಲಿ ಜನಿಸಿದರು. ತಂದೆ ದೇವಪ್ಪಯ್ಯ ಭೂಮಾಲೀಕರ ಅಡಿಯಲ್ಲಿ ಗುಮಾಸ್ತರಾಗಿದ್ದರೆ ತಾಯಿ ಗೌರಿ ಗೃಹಿಣಿಯಾಗಿದ್ದರು. ರಂಗರಾವ್ ಬಾಲ್ಯದಿಂದಲೇ ಹಲವು ಸಂಕಷ್ಟಗಳನ್ನು ಎದುರಿಸಿದರು. ತಂದೆಯನ್ನು ಕಳೆದುಕೊಂಡ ನಂತರ ಎದುರಾದ ಸವಾಲುಗಳು ಅವರಲ್ಲಿ ಆತ್ಮವಿಶ್ವಾಸ ಮತ್ತು ಜೀವನದ ಕುರಿತು ಗಾಢವಾದ ಅರಿವನ್ನು ಬೆಳೆಸಿದವು. ವಿದ್ಯಾಭ್ಯಾಸ ಪೂರ್ಣಗೊಳಿಸಿದ ಬಳಿಕ ಶಿಕ್ಷಕರಾಗಿ ಕೆಲಸ ಮಾಡಿದ ಅವರು ನಂತರ ಮಂಗಳೂರಿನಲ್ಲಿ ಜನಪ್ರಿಯ ವಕೀಲರಾಗಿ ಹೆಸರು ಗಳಿಸಿದರು.

'ಬಡವರ ವಕೀಲ' ಎಂದೇ ಪ್ರಸಿದ್ಧರಾಗಿದ್ದ ಅವರ ಬದುಕಿನ ನಿಜವಾದ ಗುರಿ ವೃತ್ತಿಜೀವನದ ಯಶಸ್ಸಲ್ಲ, ಸಮಾಜದ ಶೋಷಿತ ವರ್ಗಗಳ ನೋವಿಗೆ ಸ್ಪಂದಿಸುವುದಾಗಿತ್ತು. ಆ ಕಾಲದ ಭಾರತೀಯ ಸಮಾಜವು ಜಾತಿ ವ್ಯವಸ್ಥೆಯ ಬಲೆಯಲ್ಲಿ ಸಿಲುಕಿಕೊಂಡಿತ್ತು. ಶೋಷಿತ ವರ್ಗ ಮತ್ತು ಹಿಂದುಳಿದ ಸಮುದಾಯಗಳು ಗೌರವ, ಶಿಕ್ಷಣ ಮತ್ತು ಮೂಲಭೂತ ಹಕ್ಕುಗಳಿಂದ ವಂಚಿತವಾಗಿದ್ದವು. ಸಾರ್ವಜನಿಕ ಬಾವಿ, ದೇವಾಲಯ ಹಾಗೂ ಇತರ ಸೌಲಭ್ಯಗಳ ಬಳಕೆ ಅವರಿಗೆ ನಿಷಿದ್ಧವಾಗಿತ್ತು. ಇಂತಹ ಅಮಾನವೀಯ ಪರಿಸ್ಥಿತಿ ಕಂಡ ರಂಗರಾವ್, ಸಮಾಜದ ನಿಜವಾದ ಅಭಿವೃದ್ಧಿ ಎಲ್ಲ ವರ್ಗಗಳ ಸಮಾನ ಭಾಗವಹಿಸುವಿಕೆಯಿಂದ ಮಾತ್ರ ಸಾಧ್ಯವೆಂಬುದನ್ನು ಮನಗಂಡರು.

ಸಮಾಜ ಪರಿವರ್ತನೆಗೆ ಶಿಕ್ಷಣವೇ ಶಕ್ತಿಶಾಲಿ ಸಾಧನ ಎಂಬುದು ಅವರ ದೃಢ ನಂಬಿಕೆಯಾಗಿತ್ತು. ಇದೇ ಕಾರಣಕ್ಕೆ ಅವರು ಶೋಷಿತ ವರ್ಗಗಳ ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಶಾಲೆಗಳನ್ನು ಸ್ಥಾಪಿಸುವ ಮಹತ್ವಾಕಾಂಕ್ಷಿ ಕಾರ್ಯಕ್ಕೆ ಮುಂದಾದರು. 'ಪಂಚಮ ಶಾಲೆಗಳು' ಎಂದು ಪ್ರಸಿದ್ಧಿಯಾದ ಈ ಶಿಕ್ಷಣ ಸಂಸ್ಥೆಗಳು ಅಂದಿನ ಸಮಾಜದಲ್ಲಿ ಕ್ರಾಂತಿಕಾರಿ ಹೆಜ್ಜೆಯಾಗಿದ್ದವು. ಮಕ್ಕಳು ಶಾಲೆಗೆ ಬರಲು ಅನುಕೂಲವಾಗುವಂತೆ ಪುಸ್ತಕ, ಅಗತ್ಯ ಸಾಮಗ್ರಿಗಳು ಮತ್ತು ಮಧ್ಯಾಹ್ನದ ಊಟದ ವ್ಯವಸ್ಥೆಯನ್ನೂ ಮಾಡಿದರು.

ರಂಗರಾವ್ ಅವರ ಸಾಮಾಜಿಕ ಕಾಳಜಿ ಶಿಕ್ಷಣ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. 1897ರಲ್ಲಿ ಮಂಗಳೂರಿನಲ್ಲಿ ಅವರು ಸ್ಥಾಪಿಸಿದ 'ಡಿಪ್ರೆಸ್ಡ್ ಕ್ಲಾಸಸ್ ಮಿಷನ್' ಶೋಷಿತ ಮತ್ತು ಹಿಂದುಳಿದ ಸಮುದಾಯಗಳ ಬದುಕಿನಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಯಿತು. ಈ ಸಂಸ್ಥೆಯ ಮೂಲಕ ಶಿಕ್ಷಣ, ಆರೋಗ್ಯ, ಸ್ವಾವಲಂಬನೆ ಹಾಗೂ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಂಡರು. ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧ ಸಂಘಟಿತ ಹೋರಾಟಕ್ಕೆ ಇದು ವೇದಿಕೆಯಾಯಿತು. ಸಾವಿರಾರು ಜನರಲ್ಲಿ ಆತ್ಮಗೌರವ ಮತ್ತು ಆತ್ಮವಿಶ್ವಾಸ ಮೂಡಿಸಲು ಈ ಸಂಸ್ಥೆ ಪ್ರಮುಖ ಪಾತ್ರ ವಹಿಸಿತು.

ಇಂದು ಕುದ್ಮುಲ್ ರಂಗರಾವ್ ಜನ್ಮದಿನ



ಮಹಿಳೆಯರ ಬಗ್ಗೆಯೂ ಅವರ ದೃಷ್ಟಿಕೋನ ಪ್ರಗತಿಪರವಾಗಿತ್ತು. ಮಹಿಳಾ ಶಿಕ್ಷಣವನ್ನು ಬಲವಾಗಿ ಬೆಂಬಲಿಸಿದರು. ವಿಧವಾ ಮಹಿಳೆಯರು ಸಮಾಜದಲ್ಲಿ ಅನುಭವಿಸುತ್ತಿದ್ದ ಅನ್ಯಾಯ ಪ್ರಶ್ನಿಸಿ, ಅವರಿಗೆ ಗೌರವಯುತ ಬದುಕು ದೊರೆಯಬೇಕು ಎಂದು ಪ್ರತಿಪಾದಿಸಿದರು. ವಿಧವಾ ವಿವಾಹಕ್ಕೆ ಬೆಂಬಲ ನೀಡುವುದು ಆ ಕಾಲದಲ್ಲಿ ಧೈರ್ಯದ ಕೆಲಸವಾಗಿತ್ತು. ಆದರೆ ರಂಗರಾವ್ ಅವರು ಸಮಾಜದ ವಿರೋಧ ಲೆಕ್ಕಿಸದೆ ಸುಧಾರಣೆಯ ಪರವಾಗಿ ನಿಂತರು. ತಮ್ಮ ಕುಟುಂಬದಲ್ಲಿಯೇ ವಿಧವಾ ವಿವಾಹ ನಡೆಸುವ ಮೂಲಕ ಮಾತಿಗಿಂತ ಕಾರ್ಯವೇ ಮುಖ್ಯ ಎಂಬುದನ್ನು ತೋರಿಸಿದರು.

ಅವರ ಸಾಮಾಜಿಕ ಪರಿವರ್ತನೆಯ ಹಾದಿ ಸುಗಮವಾಗಿರಲಿಲ್ಲ. ಅವರ ಸಾಮಾಜಿಕ ಕಾರ್ಯಗಳಿಗೆ ತೀವ್ರ ವಿರೋಧ ಎದುರಾಯಿತು. ಸಂಪ್ರದಾಯವಾದಿಗಳು ಅವರನ್ನು ಟೀಕಿಸಿದರು. ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಿದ್ದಕ್ಕಾಗಿ ಒತ್ತಡಗಳು ಬಂದವು. ಆದಾಗ್ಯೂ ಅವರು ತಮ್ಮ ನಿಲುವಿನಿಂದ ಹಿಂದೆ ಸರಿಯಲಿಲ್ಲ. ಸಮಾಜದ ಒಳಿತಿಗಾಗಿ ತಮ್ಮ ಸಂಪತ್ತು, ಸಮಯ ಮತ್ತು ಶಕ್ತಿಯನ್ನು ಮುಡಿಪಾಗಿಟ್ಟರು. ಕುದ್ಮುಲ್ ರಂಗರಾವ್ 1928ರ ಜ.30ರಂದು ನಿಧನರಾದರು. ಅವರ ನಿಧನದ ಬಳಿಕವೂ ಅವರ ಆದರ್ಶಗಳು ಇಂದಿಗೂ ಸಮಾಜದಲ್ಲಿ ಜೀವಂತವಾಗಿವೆ. ಸಮಾನತೆ, ಶಿಕ್ಷಣ ಮತ್ತು ಮಾನವ ಗೌರವದ ಬಗ್ಗೆ ಮಾತನಾಡುವ ಪ್ರತಿಯೊಂದು ಸಂದರ್ಭದಲ್ಲೂ ಕುದ್ಮುಲ್ ರಂಗರಾವ್ ನೆನಪು ಪ್ರಸ್ತುತತೆ ಪಡೆದುಕೊಳ್ಳುತ್ತದೆ.

(ಲೇಖಕರು ಸಹಕಾರಿ ಬ್ಯಾಂಕ್ ನಿರೀಕ್ಷಕರು)

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. ಕಚೇರಿ ವಿಳಾಸ:- ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು–560011.

ಬಿಲ್ಡರ್ ವಿರುದ್ಧ ಹೋರಾಡಿ ಗೆದ್ದ 70 ವರ್ಷದ ವೃದ್ಧ »08

ಜಿಬಿಎ ವ್ಯಾಪ್ತಿಯಲ್ಲಿ ಶೇ.96 ರಷ್ಟು ಮಕ್ಕಳಿಗೆ ಪಲ್ಸ್ ಪೋಲಿಯೊ ಲಸಿಕೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಪಲ್ಸ್ ಪೋಲಿಯೊ ಲಸಿಕಾಕರಣ ಶೇ.96.40ರಷ್ಟು ಸಾಧನೆಯಾಗಿದೆ. ಜಿಬಿಎ ವ್ಯಾಪ್ತಿಯಲ್ಲಿ 5 ವರ್ಷದೊಳಗೆ 11,47,872 ಮಕ್ಕಳಿದ್ದು, ಭಾನುವಾರ 11,06,535 ಮಕ್ಕಳಿಗೆ ಪೋಲಿಯೊ ಹನಿ ಹಾಕಲಾಗಿದೆ. ಕೇಂದ್ರ ಶೇ. 95.45, ಪೂರ್ವ ಶೇ. 99.48, ಪಶ್ಚಿಮ ಶೇ. 94.34, ಉತ್ತರ ಶೇ. 98.22 ಹಾಗೂ ದಕ್ಷಿಣ ಪಾಲಿಕೆ ವ್ಯಾಪ್ತಿಯಲ್ಲಿ ಶೇ. 95.13 ರಷ್ಟು ಮಕ್ಕಳು ಲಸಿಕೆ ಪಡೆದಿದ್ದಾರೆ. ನಗರದಾದ್ಯಂತ ಸ್ಥಾಪಿಸಲಾಗಿದ್ದ ಲಸಿಕಾ ಕೇಂದ್ರಗಳು, ಸಂಚಾರಿ ತಂಡಗಳು ಹಾಗೂ ಟ್ರಾನ್ಸಿಟ್ ಪಾಯಿಂಟ್‌ಗಳ ಮೂಲಕ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡಲಾಯಿತು. ನಮ್ಮ ಕ್ಲಿನಿಕ್, ಹೆರಿಗೆ ಆಸ್ಪತ್ರೆ, ಬಸ್, ಮೆಟ್ರೊ ಹಾಗೂ ರೈಲು ನಿಲ್ದಾಣ, ಎನ್‌ಜಿಒ ಆಸ್ಪತ್ರೆಗಳು, ಪ್ರಮುಖ ಉದ್ಯಾನ, ಕೊಳಚೆ ಪ್ರದೇಶಗಳಲ್ಲಿ ಲಸಿಕಾಕರಣ ನಡೆಯಿತು. ಪಾಲಿಕೆಯ ಆರೋಗ್ಯ ಇಲಾಖೆ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ವೈದ್ಯಕೀಯ ಸಿಬ್ಬಂದಿ ಹಾಗೂ ಸ್ವಯಂಸೇವಕರು ಲಸಿಕಾಕರಣದಲ್ಲಿ ಪಾಲ್ಗೊಂಡಿದ್ದರು. ಪಾಲಿಕೆಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಕಾರ್ಯಕ್ರಮವನ್ನು ಜುಲೈ 1 ರವರೆಗೆ ಆಯೋಜಿಸಿರುವುದರ ಜತೆಗೆ, ನಗರ ಪಾಲಿಕೆಯ ಯಾವುದೇ ಮಗು ಪೋಲಿಯೊ ಹನಿಯಿಂದ ವಂಚಿತವಾಗದಂತೆ ಕ್ರಮ ವಹಿಸುವ ಸಲುವಾಗಿ ಲಸಿಕಾ ಕೇಂದ್ರಕ್ಕೆ ಭೇಟಿ ನೀಡದ ಮಕ್ಕಳನ್ನು ಗುರುತಿಸಲು ಆರೋಗ್ಯ ಸಿಬ್ಬಂದಿಗಳು ಮನೆ-ಮನೆಗೆ ಭೇಟಿ ನೀಡಲಿದ್ದಾರೆ.

ಮೆಟ್ರೊ ಕಾಮಗಾರಿ ವೇಳೆ ಕಾರ್ಮಿಕ ಸಾವು: ನಾಲ್ವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಎಂ.ಜಿ.ರಸ್ತೆಯ ಟ್ರಿನಿಟಿ ಮೆಟ್ರೊ ನಿಲ್ದಾಣದ ಹೊರ ಭಾಗದಲ್ಲಿ ಬೆಳಕಿನ ವ್ಯವಸ್ಥೆಯ ಕೆಲಸ ಮಾಡುತ್ತಿದ್ದ ವೇಳೆ ವಿದ್ಯುತ್ ಪ್ರವಹಿಸಿ ಗುರಪ್ಪ (70) ಎಂಬ ಕಾರ್ಮಿಕ ಮೃತಪಟ್ಟ ಸಂಬಂಧ ಹಲಸೂರು ಠಾಣೆ ಪೊಲೀಸರು ನಾಲ್ವರ ವಿರುದ್ಧ ಸುರಕ್ಷತೆಯ ನಿರ್ಲಕ್ಷ್ಯದ ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ. ಗುರಪ್ಪ, ಎಂ.ಆರ್.ಎಲೆಕ್ಟ್ರಿಕಲ್ಸ್ ಸಂಸ್ಥೆಯಲ್ಲಿ ಗುತ್ತಿಗೆ ಕಾರ್ಮಿಕರಾಗಿದ್ದರು. ಅವರ ಮಗ ಮೂರ್ತಿ ನೀಡಿದ ದೂರು ಆಧರಿಸಿ, ಎಂ.ಆರ್.ಎಲೆಕ್ಟ್ರಿಕಲ್ಸ್ ಸಂಸ್ಥೆಯ ಸೂರಜ್, ರಾಜೇಶ್, ಮಾನಸಾ ಮತ್ತು ಬಿಎಂಆರ್‌ಸಿಎಲ್ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಜತೆಗೆ, ವಿಚಾರಣೆಗೆ ಬರುವಂತೆ ಅವರೆಲ್ಲರಿಗೂ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಗುರಪ್ಪ, ಟ್ರಿನಿಟಿ ಮೆಟ್ರೊ ನಿಲ್ದಾಣದ ಹೊರಗಿನ 153ನೇ ಪಿಲ್ಲರ್ ಬಳಿ ಶುಕ್ರವಾರ (ಜೂ.26) ವಿದ್ಯುತ್ ಅರ್ಥಿಂಗ್‌ನ ಗುಂಡಿ ಅಗೆತದ ಕಾಮಗಾರಿಯ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರು. ಗುಂಡಿಯೊಳಗಿನಿಂದ ಕೇಬಲ್ ಎಳೆಯುತ್ತಿದ್ದ ಅವರಿಗೆ ಭೂಮಿಯ ಒಳ ಭಾಗದಲ್ಲಿ ಹಾದು ಹೋಗಿದ್ದ ತಂತಿಯಿಂದ ವಿದ್ಯುತ್ ಪ್ರವಹಿಸಿತ್ತು. ಪರಿಣಾಮ ತೀವ್ರವಾಗಿ ಅಸ್ವಸ್ಥಗೊಂಡು ಅವರು ಸಾವನ್ನಪ್ಪಿದ್ದರು. ಕಾಮಗಾರಿಯ ಗುತ್ತಿಗೆದಾರರು ಹಾಗೂ ಬಿಎಂಆರ್‌ಸಿಎಲ್ ಅಧಿಕಾರಿಗಳು, ಕಾಮಗಾರಿ ನಡೆಯುತ್ತಿದ್ದ ಸ್ಥಳದಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ಇದರಿಂದ ತಂದೆಗೆ ವಿದ್ಯುತ್ ಪ್ರವಹಿಸಿ ಮೃತಪಟ್ಟಿದ್ದಾರೆ. ತಂದೆಯ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ ಎಂದು ಮೂರ್ತಿ ಅವರು ಪೊಲೀಸರಿಗೆ ನೀಡಿದ್ದ ದೂರಿನಲ್ಲಿ ತಿಳಿಸಿದ್ದರು.

ಹೆಬ್ಬಾಳ ಜಂಕ್ಷನ್- ಮೇಖ್ರಿ ವೃತ್ತ ನಡುವೆ ಸಂಪರ್ಕ | 2.5 ಕಿ.ಮೀ. ಉದ್ದ, 6 ಪಥದ ಮಾರ್ಗ

ಸುರಂಗ ರಸ್ತೆಗೆ ಶಂಕುಸ್ಥಾಪನೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜಧಾನಿಯ ವಾಹನ ಸವಾರರಿಗೆ ದಶಕಗಳಿಂದ ದೊಡ್ಡ ತಲೆನೋವಾಗಿದ್ದ ಏರ್‌ಪೋರ್ಟ್ ರಸ್ತೆ ಹಾಗೂ ಹೆಬ್ಬಾಳ ಜಂಕ್ಷನ್‌ನ ಟ್ರಾಫಿಕ್ ಸಮಸ್ಯೆಗೆ ಮುಕ್ತಿ ನೀಡಲು ರಾಜ್ಯ ಸರಕಾರ ಐತಿಹಾಸಿಕ ಹೆಜ್ಜೆ ಇಟ್ಟಿದೆ.

■ **1,139 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ**

ಸಿಲಿಕಾನ್ ಸಿಟಿಯ ಟ್ರಾಫಿಕ್ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಹಂತ ಹಂತವಾಗಿ ಹೆಜ್ಜೆ ಹಾಕುತ್ತಿರುವ ರಾಜ್ಯ ಸರಕಾರ, ಈಗ ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ನಿರ್ಮಿಸಲಿರುವ ನಗರದ ಮೊಟ್ಟಮೊದಲ ಸುರಂಗ ರಸ್ತೆ ಯೋಜನೆಗೆ ಚಾಲನೆ ನೀಡಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಗರದ ಮೊಟ್ಟಮೊದಲ ಸುರಂಗ ರಸ್ತೆ ನಿರ್ಮಾಣ ಕಾಮಗಾರಿಗೆ ಭಾನುವಾರ ಶಂಕುಸ್ಥಾಪನೆ ನೆರವೇರಿಸಿದ್ದಾರೆ.

1,139 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ 2.5 ಕಿ.ಮೀ. ಉದ್ದ, 6 ಪಥದ ಈ ಮಾರ್ಗವನ್ನು 18 ತಿಂಗಳಲ್ಲಿ ಪೂರ್ಣಗೊಳಿಸಲು ಗುರಿ ನಿಗದಿಪಡಿಸಲಾಗಿದೆ. ಯಾವುದೇ ಖಾಸಗಿ ಆಸ್ತಿಗೆ ಹಾನಿಯಾಗದಂತೆ ನಡೆಯಲಿರುವ ಈ ಕಾಮಗಾರಿಯಿಂದ ವಿಮಾನ ನಿಲ್ದಾಣಕ್ಕೆ ಸಿಗ್ನಲ್‌ಮುಕ್ತ ಹಾಗೂ ಸುಗಮ ಸಂಚಾರ ಸಾಧ್ಯವಾಗಲಿದೆ.

ಈ ಯೋಜನೆಯನ್ನು 'ಕಟ್ ಆ್ಯಂಡ್ ಕವರ್' ತಂತ್ರಜ್ಞಾನ ಬಳಸಿ 60 ಅಡಿ ಆಳದಲ್ಲಿ ನಿರ್ಮಿಸಲಾಗುತ್ತಿದೆ. ಈ ರಸ್ತೆಯ ಬಹುಪಾಲು ಮಾರ್ಗವು ಸರಕಾರಿ ಜಾಗಗಳಾದ ಕೃಷಿ ವಿಶ್ವವಿದ್ಯಾಲಯ ಮತ್ತು ಪಶುವೈದ್ಯಕೀಯ ಕಾಲೇಜುಗಳ ಒಳಗೆ ಹಾದುಹೋಗುವುದರಿಂದ ಭೂಸ್ವಾಧೀನದ ಕಿರಿಕಿ ಇಲ್ಲ, ಕಾಮಗಾರಿಯ ಸಮಯದಲ್ಲಿಯೂ ಜನರಿಗೆ ಸಮಸ್ಯೆಯಾಗದಂತೆಯೂ ವಿನ್ಯಾಸಗೊಳಿಸಲಾಗಿದೆ.

ಈ ಮಾರ್ಗವು ಬೆಂಗಳೂರಿನ ಅತಿ ಹೆಚ್ಚು ವಾಹನ ದಟ್ಟಣೆಯ ರಸ್ತೆಗಳಲ್ಲಿ ಒಂದಾಗಿದೆ. ಈ 'ಚಿಕ್ಕ ಸುರಂಗ ರಸ್ತೆ' ನಿರ್ಮಾಣದಿಂದಾಗಿ ಟ್ರಾಫಿಕ್ ಸಮಸ್ಯೆ ಬಹುಪಾಲು ನಿವಾರಣೆಯಾಗಲಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಮತ್ತು ಅಲ್ಲಿಂದ ಬರುವ ಪ್ರಯಾಣಿಕರಿಗೆ ಹೆಬ್ಬಾಳ ಜಂಕ್ಷನ್ ದೊಡ್ಡ ಅಡಚಣೆಯಾಗಿತ್ತು. ಸುರಂಗ ರಸ್ತೆಯು ವಿಮಾನ ನಿಲ್ದಾಣಕ್ಕೆ ಹೋಗುವ ವಾಹನಗಳಿಗೆ ಸಿಗ್ನಲ್-ಮುಕ್ತ ಹಾಗೂ ತಡೆರಹಿತ ಸಂಪರ್ಕವನ್ನು ಒದಗಿಸುತ್ತದೆ.

ಹೆಬ್ಬಾಳ ಜಂಕ್ಷನ್ ದಾಟಲು ವಾಹನ ಸವಾರರು ಪೀಕ್ ಅವರ್‌ನಲ್ಲಿ ಗಂಟೆಗಟ್ಟಲೆ ಕಾಯಬೇಕಾಗುತ್ತಿತ್ತು. ಈ ಸುರಂಗ ರಸ್ತೆ ನಿರ್ಮಾಣವಾದರೆ ಹೆಚ್ಚು ಸಮಯ ಕಾಯುವ ಅಗತ್ಯವಿಲ್ಲ, ಯಲಹಂಕ, ಬ್ಯಾಟರಾಯನಪುರ ಹಾಗೂ ಉತ್ತರ ಬೆಂಗಳೂರಿನ ಇತರೆ ಭಾಗಗಳಿಗೆ ತೆರಳುವ ದೈನಂದಿನ ಪ್ರಯಾಣಿಕರಿಗೆ ಈ ರಸ್ತೆಯು ಹೆಚ್ಚು ಅನುಕೂಲವಾಗಲಿದೆ. ಬಿಡಿಎ ರಸ್ತೆ ನಿರ್ಮಿಸಲಿದೆ.

ಸಂಚಾರ ದಟ್ಟಣೆ ಬಗೆಹರಿಸುವುದೇ ನಮ್ಮ ಉದ್ದೇಶ: ಸುರಂಗ ಮಾರ್ಗಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ''ಹೆಬ್ಬಾಳ ಬೆಂಗಳೂರಿಗೆ ಹೆಬ್ಬಾಗಿಲಿನಂತೆ. ಈ ಭಾಗದ ಸಂಚಾರ ದಟ್ಟಣೆಗೆ ಒಂದಷ್ಟು ಮುಕ್ತಿ ನೀಡಿದ್ದೇವೆ. ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಮುಂದಿನ ದಿನಗಳಲ್ಲಿ ಬಗೆಹರಿಸುವುದೇ ನಮ್ಮ ಉದ್ದೇಶ,'' ಎಂದು ತಿಳಿಸಿದರು.

''2.5 ಕಿ.ಮೀ. ಉದ್ದದ ಈ ರಸ್ತೆ ಟೋಲ್ ಮುಕ್ತವಾಗಿರಲಿದೆ. ಬಿಡಿಎ ಸ್ವಂತ ಸಂಪನ್ಮೂಲದಲ್ಲಿ ಯೋಜನೆ ಕೈಗೊಂಡಿದೆ. ಮುಂದಿನ 50 ವರ್ಷದ ಬೆಳವಣಿಗೆ ಗುರಿಯಿಟ್ಟುಕೊಂಡು ಯೋಜನೆ ರೂಪಿಸುತ್ತಿದ್ದೇವೆ,'' ಎಂದರು.

''ಅವಕಾಶ ಸಿಕ್ಕಾಗ ಜನಪರ ಕೆಲಸ ಮಾಡಬೇಕು. ಈಗಾಗಲೇ ಎಸ್.ಎಂ.ಕೃಷ್ಣ ಹೆಸರಿನಲ್ಲಿ ದಶಪಥ ರಸ್ತೆ ಉದ್ಘಾಟಿಸಲಾಗಿದೆ. ಬೆಂಗಳೂರು ಬಿಜಿನೆಸ್ ಕಾರಿಡಾರ್ ಎಂದು ಮರುನಾಮಕರಣ ಮಾಡಿ ಹೊಸ ಯೋಜನೆ ಮಾಡಲಾಗುತ್ತಿದೆ. 2006ರಲ್ಲಿಯೇ ಈ ಯೋಜನೆ ಮಾಡಿದ್ದರೆ 2ರಿಂದ 3 ಸಾವಿರ ಕೋಟಿ ರೂ. ವೆಚ್ಚದಲ್ಲಿ ಯೋಜನೆ ಮುಕ್ತಾಯವಾಗುತ್ತಿತ್ತು. ಈಗ 24 ಸಾವಿರ ಕೋಟಿ ರೂ. ಖರ್ಚಾಗುತ್ತಿದೆ. ಭೂಮಿ ನೀಡುವ ರೈತರಿಗೆ ಒಳ್ಳೆಯ ಪರಿಹಾರದ ಆಯ್ಕೆ ನೀಡಲಾಗಿದೆ. 123 ಕಿ.ಮೀ ಉದ್ದ ಈ ರಸ್ತೆ ನಿರ್ಮಾಣವಾಗಲಿದೆ,'' ಎಂದರು.

ಸಚಿವರಾದ ಕೆ.ಜೆ.ಜಾರ್ಜ್, ಭೈರತಿ ಸುರೇಶ್, ಬಿಡಿಎ ಅಧ್ಯಕ್ಷ, ಶಾಸಕ ಎನ್.ಎ.ಹ್ಯಾರಿಸ್, ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಬಿಡಿಎ ಆಯುಕ್ತ ಮಣಿವಣ್ಣನ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಉಪಸ್ಥಿತರಿದ್ದರು.

ಸುರಂಗ ರಸ್ತೆ ಯೋಜನೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶಂಕುಸ್ಥಾಪನೆ ನೆರವೇರಿಸಿದರು.

ಹೆಬ್ಬಾಳ-ಸಿಲ್ಕ್‌ಬೋರ್ಡ್ ಟನೆಲ್‌ಗೆ ಪ್ರಸ್ತಾವನೆ

''ಹೆಬ್ಬಾಳದಿಂದ ಸಿಲ್ಕ್‌ಬೋರ್ಡ್‌ವರೆಗೆ 17 ಕಿ.ಮೀ.ಉದ್ದದ ಟನಲ್ ಯೋಜನೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮೂರ್ನಾಲ್ಕು ವರ್ಷದಲ್ಲಿ ಯೋಜನೆ ಮುಗಿಯಲಿದೆ. ಟನಲ್ ರಸ್ತೆಯಲ್ಲಿ ದುಡ್ಡು ಕೊಟ್ಟು ಹೋಗುವವರು ಹೋಗುತ್ತಾರೆ. ಇದಕ್ಕೆ ವಿರೋಧ ವ್ಯಕ್ತಪಡಿಸುವವರಲ್ಲಿ, ನಿಮಗೇನು ತೊಂದರೆ ಎಂದು ನಾನು ಕೇಳುತ್ತೇನೆ. ಇದರಿಂದ ಜನರ ಸಮಯ ಉಳಿಯುತ್ತದೆ. ಹಿಡಿದ ಕೆಲಸ ಮಾಡಬೇಕು. ಜನರ ಸಮಯ ಉಳಿಸುವುದು ಮುಖ್ಯ. ಜನರು ಸಂಜೆ 5-6 ಗಂಟೆ ಮೇಲೆ ಕೆಲಸ ಮುಗಿಸಿ ಮನೆ ಸೇರಬೇಕು. ಇದಕ್ಕೆ ಏನು ಸಹಾಯ ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ,'' ಎಂದು ಸಿಎಂ ಹೇಳಿದರು.

ಅಕ್ಬರ್-ಬೀರಬಲ್ ಕಥೆ ಹೇಳಿದ ಸಿಎಂ!

''ಅಕ್ಬರ್‌ನ ಆಸ್ಥಾನದಲ್ಲಿ ಬೀರಬಲ್ ವಿರುದ್ಧ ಅಸಮಾಧಾನ ಉಂಟಾದಾಗ ಎಲ್ಲರನ್ನೂ ಸೇರಿಸಿ, ಅಕ್ಬರ್ 'ಅಂಗೈಯಲ್ಲಿ ಏಕೆ ಕೂದಲಿಲ್ಲ' ಎಂದು ಪ್ರಶ್ನೆ ನೀಡಿದ. ಇದಕ್ಕೆ ಒಬ್ಬೊಬ್ಬರು ಒಂದೊಂದು ಉತ್ತರ ನೀಡಿದರು. ಯಾರೂ ಸರಿಯಾದ ಉತ್ತರ ನೀಡಲಿಲ್ಲ, ಆದರೆ, ಬೀರಬಲ್ 'ನೀವು ಮಹಾದಾನಿಗಳು, ದಾನ ನೀಡಿ ನಿಮ್ಮ ಅಂಗೈನಲ್ಲಿ ಕೂದಲಿಲ್ಲ,' ಎಂದನು. ಅಕ್ಬರ್ 'ನಿಮ್ಮ ಕೈಯಲ್ಲಿ ಏಕೆ ಕೂದಲಿಲ್ಲ,' ಎಂದು ಪ್ರಶ್ನಿಸಿದರು. ಇದಕ್ಕೆ 'ನಾನು ದಾನ ಪಡೆದು ಪಡೆದು ನನ್ನ ಅಂಗೈನಲ್ಲಿ ಕೂದಲಿಲ್ಲ' ಎಂದು ಬೀರಬಲ್ ಉತ್ತರಿಸಿದ. ಆದರೆ ಸಭಿಕರ ಕೈಯಲ್ಲಿ ಏಕೆ ಕೂದಲಿಲ್ಲ ಎಂದಾಗ, 'ನಮಗೆ ಸಿಗಲಿಲ್ಲವಲ್ಲ ಅಂತ ಕೈ ಉಜ್ಜಿ ಉಜ್ಜಿ ಕೂದಲು ಇಲ್ಲ' ಎಂದು ಹೇಳಿದರು. ಆಗ ಎಲ್ಲರೂ ಹೊಟ್ಟೆ ಉರಿದುಕೊಂಡರು. ಹೀಗೆ ದಳ ಹಾಗೂ ಬಿಜೆಪಿಯವರು ನಮಗೆ ಸಿಗಲಿಲ್ಲ ಎಂದು ತಮ್ಮ ಕೈ ಉಜ್ಜಿಕೊಳ್ಳುತ್ತಾ, ಡಾಕ್ಟರ್‌ಗಳನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಅವರ ಬಗ್ಗೆ ಚಿಂತೆ ಮಾಡುವುದು ಬೇಡ,'' ಎಂದರು.

ಬೇರೆಯವರನ್ನು ಟೀಕಿಸಿದಂತೆ ನನ್ನ ಟೀಕಿಸಿದರೆ ನಡೆಯಲ್ಲ

''ಬೇರೆ ಯಾರನ್ನೋ ಟೀಕಿಸಿದಂತೆ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಸರಕಾರವನ್ನು ಟೀಕಿಸುತ್ತಿದ್ದಾರೆ. ಇದೆಲ್ಲಾ ನಡೆಯುವುದಿಲ್ಲ,'' ಎಂದು ವಿರೋಧಿಗಳಿಗೆ ಸಿಎಂ ಎಚ್ಚರಿಕೆ ನೀಡಿದರು. ''ಈಗ ವಿರೋಧ ಪಕ್ಷದಲ್ಲಿರುವವರು ಅಧಿಕಾರದಲ್ಲಿದ್ದಾಗ ಒಂದೇ ಒಂದು ಕೆಲಸ ಮಾಡಿಲ್ಲ, ಒಂದು ಲಾರಿ ಕಸವನ್ನು ಗೊಬ್ಬರ, ಇಂಧನವನ್ನಾಗಿ ಪರಿವರ್ತಿಸುವ ಯಾವ ಕೆಲಸವನ್ನೂ ಮಾಡಲಿಲ್ಲ, ಈಗ ಟೀಕಿಸುತ್ತಾರೆ. ಬೇರೆ ಯಾರನ್ನೋ ಟೀಕಿಸಿದಂತೆ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಸರಕಾರವನ್ನು ಟೀಕಿಸುತ್ತಿದ್ದಾರೆ. ಇದೆಲ್ಲಾ ನಡೆಯುವುದಿಲ್ಲ, ಪ್ರತಿಭಟನೆ ಮಾಡಲಿ, ಏನು ಬೇಕಾದರೂ ಮಾಡಲಿ, ಜತೆಗೆ ಮಾರ್ಗದರ್ಶನ ನೀಡಿದರೂ ನಾನು ಕೇಳುತ್ತೇನೆ,'' ಎಂದರು.

ಬಿಡಿಎಗೆ ಗಿನ್ನೆಸ್ ದಾಖಲೆಯ ಪ್ರಮಾಣಪತ್ರ ಹಸ್ತಾಂತರ

ಬೆಂಗಳೂರು: ಬೆಂಗಳೂರು ನಗರ ಪರಿಸರ ಪುನಶ್ಚೇತನ ಮಿಷನ್ 2026-30ರ ಭಾಗವಾಗಿ 15 ಲಕ್ಷ ಗಿಡ ನೆಟ್ಟ ಹಿನ್ನೆಲೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ)ಕ್ಕೆ ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್ ಅಧಿಕೃತವಾಗಿ ಪ್ರಮಾಣ ಪತ್ರ ನೀಡಿದೆ. 12 ಗಂಟೆಗಳಲ್ಲಿ (ಬಹು ಸ್ಥಳಗಳಲ್ಲಿ) ತಂಡವೊಂದು ಅತಿ ಹೆಚ್ಚು ಸಸಿಗಳನ್ನು ನೆಟ್ಟ ಸಾಧನೆ ಎಂಬ ವಿಭಾಗದಲ್ಲಿ ವಿಶ್ವ ದಾಖಲೆಯ ಮನ್ನಣೆ ನೀಡಿದೆ.

■ **15 ಲಕ್ಷ ಸಸಿ ನೆಟ್ಟು ದಾಖಲೆ ನಿರ್ಮಾಣ**

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬಿಡಿಎ ಅಧ್ಯಕ್ಷ, ಶಾಸಕ ಎನ್. ಎ. ಹ್ಯಾರಿಸ್ ಅವರು ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್‌ನ ತೀರ್ಪುಗಾರ ರಿಷಿನಾಥ್ ಅವರಿಂದ ಭಾನುವಾರ ಪ್ರಮಾಣಪತ್ರ ಸ್ವೀಕರಿಸಿದರು. ಸಚಿವರಾದ ಕೃಷ್ಣ ಬೈರೇಗೌಡ, ಕೆ.ಜೆ. ಜಾರ್ಜ್ ಈ ವೇಳೆ ಉಪಸ್ಥಿತರಿದ್ದರು. ಡಿ.ಕೆ. ಶಿವಕುಮಾರ್ ಮಾತನಾಡಿ, ''ಐತಿಹಾಸಿಕ ಸಾಧನೆಗಾಗಿ ಜಾಗತಿಕ ಮನ್ನಣೆಯ 'ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್' ಪ್ರಮಾಣಪತ್ರ ಪಡೆಯುತ್ತಿರುವುದು ಹೆಮ್ಮೆ ಎನಿಸುತ್ತಿದೆ. ಇದು ಬಿಡಿಎ ಹಾಗೂ 50,000ಕ್ಕೂ ಹೆಚ್ಚು ಪರಿಸರ ಪ್ರೇಮಿಗಳ ಸಂಕಲ್ಪಕ್ಕೆ ಸಂದ ಜಯ,'' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗಿಡ ನೆಟ್ಟಿರುವ ವಿವರ			
ಲೇಔಟ್	ಗುರಿ	ನೆಟ್ಟಿರುವುದು	ಸಾಧನೆ
ನಾಡಪ್ರಭು ಕೆಂಪೇಗೌಡ	6,90,000	6,77,500	98.18
ಶಿವರಾಮ ಕಾರಂತ	7,05,000	7,12,250	101.03
ಬನಶಂಕರಿ	1,05,000	1,05,800	100.76
ಒಟ್ಟು	15,00,000	14,95,550	99.70

ಶೇಕಡಾವಾರು

ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಮಾತನಾಡಿ, ''ಈ ಗಿನ್ನೆಸ್ ವಿಶ್ವ ದಾಖಲೆ ಬೆಂಗಳೂರಿನ ಪ್ರತಿಯೊಬ್ಬ ನಾಗರಿಕರಿಗೂ ಸೇರಿದ್ದು, ಪರಿಸರ ಸಂರಕ್ಷಣೆ ಎನ್ನುವುದು ಸಾಮೂಹಿಕ ಹೊಣೆಗಾರಿಕೆಯಿಂದ ಆರಂಭವಾಗುತ್ತದೆ ಎಂಬುದನ್ನು ಇದು ಸಾಬೀತುಪಡಿಸಿದೆ,'' ಎಂದು ಹೇಳಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮೇಜರ್ ಪಿ. ಮಣಿವಣ್ಣನ್ ಮಾತನಾಡಿ, ''ಈ ಸಾಧನೆ ಅತ್ಯಂತ ಸೂಕ್ಷ್ಮ, ವೈಜ್ಞಾನಿಕ ಅನುಷ್ಠಾನ ಹಾಗೂ ವಿವಿಧ ಸರಕಾರಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸ್ವಯಂಸೇವಕರು ಮತ್ತು ನಾಗರಿಕ ಸಮಾಜ ಸಂಘಟನೆಗಳ ನಡುವಿನ ಅತ್ಯುತ್ತಮ ಸಮನ್ವಯದ ಫಲವಾಗಿದೆ,'' ಎಂದು ಹೇಳಿದರು.

ಒಂದೇ ನಂಬರ್ ಪ್ಲೇಟ್‌ನ 2 ಬಸ್: ಸಿಕ್ಕಿಬಿದ್ದ ವಂಚಕರು

ಬೆಂಗಳೂರು: ಒಂದೇ ನೋಂದಣಿ ಸಂಖ್ಯೆಯುಳ್ಳ ನಕಲಿ ಫಲಕವನ್ನು ಎರಡು ವಾಹನಗಳಿಗೆ ಬಳಸಿ ಸಾರಿಗೆ ಇಲಾಖೆಗೆ ವಂಚಿಸುತ್ತಿದ್ದ ಆರೋಪಿಗಳನ್ನು ಬಂಧಿಸಿರುವ ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು, 12 ಮಿನಿ ಬಸ್‌ಗಳನ್ನು ಜಪ್ತಿ ಮಾಡಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಬಳಿಯ ಸುಭಾಷ್ ನಗರದ ಸೈಯದ್ ನಜೀರ್ (40) ಮತ್ತು ತಮಿಳುನಾಡು ಮೂಲದ ನಾಗರಾಜ್ (52) ಬಂಧಿತರು. ಆರೋಪಿಗಳು ಸಾರಿಗೆ ಇಲಾಖೆಗೆ ತೆರಿಗೆ ವಂಚಿಸುವ ಉದ್ದೇಶಕ್ಕೆ ಒಂದೇ ನೋಂದಣಿ ಸಂಖ್ಯೆಯುಳ್ಳ ಫಲಕಗಳನ್ನು 2 ಬೇರೆ ಬೇರೆ ಮಿನಿ ಬಸ್‌ಗಳಿಗೆ ಅಳವಡಿಸಿದ್ದರು.

ಸಾರಿಗೆ ಇಲಾಖೆಗೆ ಪಾವತಿಸಬೇಕಾದ

12 ಮಿನಿ ಬಸ್ ಜಪ್ತಿ

ವಾಹನಗಳ ಜೀವಿತಾವಧಿ ತೆರಿಗೆ, ಕಾರ್ಯಕ್ಷಮತೆ ಪ್ರಮಾಣಪತ್ರ (ಎಫ್.ಸಿ.) ನವೀಕರಣ ಶುಲ್ಕ ಉಳಿಸಲು ಅಡ್ಡ ದಾರಿ ಹಿಡಿದಿದ್ದ ಆರೋಪಿಗಳು, ಮಿನಿ ಬಸ್‌ಗಳಿಗೆ ಒಂದೇ ನೋಂದಣಿ ಸಂಖ್ಯೆಯ ಫಲಕ ಹಾಕಿದ್ದರು. ಎಲೆಕ್ಟ್ರಾನಿಕ್ ಸಿಟಿ ಠಾಣೆ ಹೆಡ್ ಕಾನ್‌ಸ್ಟೆಬಲ್ ಕೇದಾರಲಿಂಗ ಮತ್ತು ಕಾನ್‌ಸ್ಟೆಬಲ್ ಕೇಶವಮೂರ್ತಿ ಅವರು ಜೂ.23ರಂದು ಮಣಿಪಾಲ್ ಕೌಂಟಿ ರಸ್ತೆಯಲ್ಲಿ ಬೈಕ್‌ನಲ್ಲಿ ಗಸ್ತು ತಿರುಗುತ್ತಿದ್ದಾಗ ಒಂದೇ ನೋಂದಣಿ ಸಂಖ್ಯೆಯ (ಕೆಎ-51, ಬಿ-5959) ಎರಡು ಮಿನಿ ಬಸ್‌ಗಳು ಅದೇ ಮಾರ್ಗವಾಗಿ ಹೋಗಿದ್ದವು. »08

ರಸ್ತೆ ತುಂಬ ಗುಂಡಿಗಳದ್ದೇ ದರ್ಬಾರ್

ಗುಂಡಿಗಳ ಫೋಟೊ ಕಳುಹಿಸಿಕೊಡುವಂತೆ ವಿಕ ನೀಡಿದ ಕರೆಗೆ ಓದುಗರಿಂದ ಸಕಾರಾತ್ಮಕ ಸ್ಪಂದನೆ ಸಿಗುತ್ತಿದೆ. ಆಯ್ದ ಚಿತ್ರಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ವಿನಾಯಕ ಲೇಔಟ್ ನಾಗರಬಾವಿ 2ನೇ ಹಂತ

ಮುದ್ದಿನಪಾಳ್ಯ ರಸ್ತೆ

ಜಯನಗರ 8ನೇ ಬ್ಲಾಕ್

ರಸ್ತೆ ಗುಂಡಿ ಚಿತ್ರ ನೀವೂ ಕಳಿಸಿ...

ಸಾರ್ವಜನಿಕರು ತಾವು ನಿತ್ಯ ಸಂಚರಿಸುವ ರಸ್ತೆ ಹಾಗೂ ತಮ್ಮ ಪ್ರದೇಶದ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳು ಕಂಡು ಬಂದರೆ, ಫೋಟೊ ತೆಗೆದು ಕಳುಹಿಸಬಹುದು. ಫೋಟೊ ಜತೆಗೆ ರಸ್ತೆಯ ಹೆಸರು, ಯಾವ ಪ್ರದೇಶ ಎಂಬುದನ್ನೂ ನಮೂದಿಸಿ.

76766 68588

ಎಕ್ಸ್‌ಪ್ರೆಸ್ ವೇ: 25 ಕಿ.ಮೀ ಹೊಸ ಮಾರ್ಗ ಮುಕ್ತ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜಧಾನಿ ಬೆಂಗಳೂರು ಹಾಗೂ ನೆರೆರಾಜ್ಯ ತಮಿಳುನಾಡಿನ ಪ್ರಮುಖ ನಗರ ಚೆನ್ನೈ ನಡುವೆ ಸಂಪರ್ಕ ಬೆಸೆಯುವ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ 2026ರ ಡಿಸೆಂಬರ್ ವೇಳೆಗೆ ಸಂಪೂರ್ಣ ಸಂಚಾರ ಮುಕ್ತವಾಗುವ ನಿರೀಕ್ಷೆ ಗರಿಗೆದರಿದೆ.

■ **ಬೆಂಗಳೂರು-ಚೆನ್ನೈ ಸಂಪರ್ಕದ ಹೆದ್ದಾರಿ ವರ್ಷಾಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ**

ಕಳೆದ ವರ್ಷ ಹೊಸಕೋಟೆಯಿಂದ ಬೇತಮಂಗಲದವರೆಗೆ 71 ಕಿ.ಮೀ. ಮಾರ್ಗವನ್ನು ಸಂಚಾರ ಮುಕ್ತಗೊಳಿಸಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಈಗ ಬೇತಮಂಗಲ-ಬೈರೆಡ್ಡಿಪಲ್ಲೆ ನಡುವಿನ 25 ಕಿ.ಮೀ. ವಿಭಾಗದ ರಸ್ತೆಯನ್ನು ಸಂಚಾರಕ್ಕೆ ಮುಕ್ತಗೊಳಿಸಿದೆ.

ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ ಹಾದಿಯಲ್ಲಿ ಆಂಧ್ರಪ್ರದೇಶದಲ್ಲಿ ಸಂಚಾರ ಮುಕ್ತವಾದ ಮೊದಲ ಭಾಗದ ಹೆದ್ದಾರಿ ಇದಾಗಿದ್ದು, ಡಿಸೆಂಬರ್ ವೇಳೆಗೆ 262 ಕಿ.ಮೀ. ಉದ್ದದ ಇಡೀ ಎಕ್ಸ್‌ಪ್ರೆಸ್ ವೇನಲ್ಲಿ ಸಂಚಾರಕ್ಕೆ ಅನುವು ಮಾಡಿಕೊಡುವ ವಿಶ್ವಾಸವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವ್ಯಕ್ತಪಡಿಸಿದೆ. ಆಂಧ್ರಪ್ರದೇಶ ವ್ಯಾಪ್ತಿಯಲ್ಲಿ ಎಕ್ಸ್‌ಪ್ರೆಸ್ ವೇ ಭಾಗವಾಗಿ 85 ಕಿ.ಮೀ. ಉದ್ದದ ರಸ್ತೆ ಕಾಮಗಾರಿಯನ್ನು 3 ಹಂತಗಳಲ್ಲಿ ನಡೆಸಲಾಗುತ್ತಿದೆ. ಬೇತಮಂಗಲದಿಂದ ಬೈರೆಡ್ಡಿಪಲ್ಲೆ (25 ಕಿ.ಮೀ), ಬೈರೆಡ್ಡಿಪಲ್ಲೆಯಿಂದ ಬಂಗಾರುಪಾಲೆಮ್ (31 ಕಿ.ಮೀ) ಹಾಗೂ ಬಂಗಾರುಪಾಲೆಮ್‌ನಿಂದ ಗುಡಿಪಾಲ (29 ಕಿ.ಮೀ) ವರೆಗೆ ಕಾಮಗಾರಿ ನಡೆಯುತ್ತಿದೆ. ಈ ಮೂರು ಹಂತದಲ್ಲಿ ಈಗಾಗಲೇ ಎರಡು ಹಂತದ ಕಾಮಗಾರಿ ಮುಗಿದಿದ್ದು, ಬೈರೆಡ್ಡಿಪಲ್ಲೆಯಿಂದ ಬಂಗಾರುಪಾಲೆಮ್ ನಡುವಿನ ಹೆದ್ದಾರಿ ಕಾಮಗಾರಿಗೆ ಅರಣ್ಯ ಇಲಾಖೆಯ ಅನುಮತಿ ವಿಳಂಬವಾಗುತ್ತಿರುವ ಹಿನ್ನೆಲೆ ಕಾಮಗಾರಿ ನಿಧಾನವಾಗುತ್ತಿದೆ ಎಂದು ಹೆದ್ದಾರಿ ಪ್ರಾಧಿಕಾರ ತಿಳಿಸಿದೆ.

ಕರ್ನಾಟಕದ ಹುಲ್ಲೂರಿನಿಂದ ಬೈರೆಡ್ಡಿಪಲ್ಲೆವರೆಗಿನ ಸಂಪರ್ಕ ರಸ್ತೆ ಚಿತ್ತೂರು, ತಿರುಪತಿ ಹಾಗೂ ಚೆನ್ನೈಗೆ ತೆರಳುವ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಜಿಲ್ಲಾ ರಸ್ತೆಗಳು ಎಕ್ಸ್‌ಪ್ರೆಸ್ ವೇಗೆ ನೇರವಾಗಿ ಸಂಪರ್ಕ ಕಲ್ಪಿಸುವುದರಿಂದ ಪ್ರಯಾಣಿಕರಿಗೆ ಕೂಡ ಅನುಕೂಲವಾಗುತ್ತಿದೆ. ಜತೆಗೆ, ಬೈರೆಡ್ಡಿಪಲ್ಲೆ ಟೋಲ್ ಪ್ಲಾಜಾದಿಂದ ಪ್ರತಿನಿತ್ಯ ಸುಮಾರು 2.2 ಲಕ್ಷ ರೂ. ಆದಾಯ ಸಂಗ್ರಹವಾಗುತ್ತಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.



ತಿರುಪತಿಗೆ ತೆರಳುವ ಪ್ರಯಾಣಿಕರಿಗೂ ಅನುಕೂಲ

ಹೊಸಕೋಟೆ ಟು ಬೈರೆಡ್ಡಿಪಲ್ಲೆ ಟೋಲ್ ದರಪಟ್ಟಿ		
ವಾಹನದ ವಿಧ	ಏಕಮುಖ ಪ್ರಯಾಣ	ದ್ವಿಮುಖ ಪ್ರಯಾಣ ದರ
ಕಾರು, ಜೀಪ್, ವ್ಯಾನ್ ದರ	195 ರೂ	290 ರೂ.
ಎಲ್‌ಸಿವಿಎಸ್, ಮಿನಿಬಸ್	315 ರೂ.	470 ರೂ.
ಟ್ರಕ್, ಬಸ್	655 ರೂ.	985 ರೂ.



ರಾಜ್ಯಕ್ಕೆ ಏನು ಪ್ರಯೋಜನ?

- ಬೆಂಗಳೂರು-ಚೆನ್ನೈ ನಡುವಿನ ಪ್ರಯಾಣದ ಅವಧಿ 2 ರಿಂದ 3 ಗಂಟೆ ತಗ್ಗಲಿದೆ
- ಚೆನ್ನೈನಿಂದ ವಸ್ತುಗಳ ಸಾಗಾಟಕ್ಕೆ ಸುಲಭವಾಗುವುದರಿಂದ ಕೈಗಾರಿಕೆಗಳಿಗೆ ಸಹಕಾರಿ
- ನೆರೆರಾಜ್ಯದ ಜತೆಗಿನ ವ್ಯಾಪಾರ-ವಹಿವಾಟು ಮತ್ತಷ್ಟು ಉತ್ತಮಗೊಳ್ಳಲಿದೆ
- ಪ್ರಯಾಣದ ಅವಧಿ, ಖರ್ಚು ಕಡಿಮೆಯಾಗಲಿದೆ

ಭೂ ಖಾತೆ ಸೇರಿ ಆಸ್ತಿಗಳ ಹಸ್ತಾಂತರಕ್ಕೆ ಕೆ-ರೇರಾ ಆದೇಶ | ಡಿಜಿ ಸೆಟ್ ವಿದ್ಯುತ್ ಸರಬರಾಜು ಪುನಃ ಸ್ಥಾಪಿಸಲು ಸೂಚನೆ

ಬಿಲ್ಡರ್ ವಿರುದ್ಧ ಹೋರಾಡಿ ಗೆದ್ದ 70 ವರ್ಷದ ವೃದ್ಧ

■ **ಶ್ರೀಕಾಂತ್ ಹುಣಸವಾಡಿ** ಬೆಂಗಳೂರು
Srikanth.G@timesofindia.com

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು (ಕೆ-ರೇರಾ) ಇದೇ ಮೊದಲ ಬಾರಿಗೆ ಗೃಹ ಖರೀದಿದಾರರ ಸಂಪೂರ್ಣ ಹಕ್ಕುಗಳನ್ನು ಎತ್ತಿಹಿಡಿಯುವಂತಹ ಮಹತ್ವದ ಆದೇಶ ನೀಡಿದ್ದು, ಅಪಾರ್ಟ್‌ಮೆಂಟ್‌ನ ಭೂಮಿಯ ಖಾತೆ, ಬೆಸ್ಕಾಂ ಮತ್ತು ಜಲಮಂಡಳಿ ಮೀಟರ್, ಕಾರ್ಪಸ್ ನಿಧಿ, ಉಳಿತಾಯ ಖಾತೆಯಲ್ಲಿನ ಹಣ ಸೇರಿ ಎಲ್ಲಾ ಆಸ್ತಿಗಳನ್ನು ಅಧಿಕೃತ ಸಂಘಕ್ಕೆ ವರ್ಗಾವಣೆ ಮಾಡುವಂತೆ ಬಿಲ್ಡರ್‌ಗೆ ನಿರ್ದೇಶನ ನೀಡಿದೆ.

ಆ ಮೂಲಕ ಪ್ರಾಧಿಕಾರ 70 ವರ್ಷದ ಹಿರಿಯ ನಾಗರಿಕರೊಬ್ಬರ ನೆರವಿಗೆ ಧಾವಿಸಿದೆ. ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯಿದೆಯ (ರೇರಾ) ಮೂಲ ಗೃಹ ಖರೀದಿದಾರರ ಹಿತಾಸಕ್ತಿಯನ್ನು ರಕ್ಷಿಸಿರುವ ಪ್ರಾಧಿಕಾರ, ಅಪಾರ್ಟ್‌ಮೆಂಟ್ ನಿವಾಸಿಗಳ ಹೊಣೆಗಾರಿಕೆಯನ್ನು ಬಲಪಡಿಸುವ ಮೂಲಕ ಖಾತಾ, ಎಲ್ಲಾ ಸೌಲಭ್ಯಗಳು, ನಿಧಿಗಳು ಮತ್ತು ಬಾಕಿ ಇರುವ ಸೌಕರ್ಯಗಳನ್ನು ಹಸ್ತಾಂತರಿಸುವಂತೆ ಬಿಲ್ಡರ್‌ಗೆ ನಿರ್ದೇಶನ ನೀಡಿದೆ. ಇದರೊಂದಿಗೆ ಕಳೆದ ಮೂರು ವರ್ಷಗಳಿಂದ ಬಿಲ್ಡರ್ ವಿರುದ್ಧ ಹೋರಾಟ ನಡೆಸುತ್ತಿದ್ದ ವೃದ್ಧರಿಗೆ ನ್ಯಾಯ ದೊರೆತಿದೆ.

ದಾಸನಪುರ ಹೋಬಳಿಯ ಅರಿಶಿನಕುಂಟೆಯಲ್ಲಿರುವ ನ್ಯೂ ಹೆವನ್ ಟಾಟಾ ವ್ಯಾಲ್ಯೂ ಹೋಮ್ಸ್‌ನ ಯೋಗಾನಂದನ್ ಜಗನ್ನಾಥ ಸಲ್ಲಿಸಿದ್ದ ದೂರನ್ನು ಆಲಿಸಿದ ಪ್ರಾಧಿಕಾರದ ಅಧ್ಯಕ್ಷ ಕೆ.ರಾಕೇಶ್ ಸಿಂಗ್ ಮತ್ತು ಸದಸ್ಯ ಜಿ.ಆರ್.ರೆಡ್ಡಿ ಅವರಿದ್ದ ಪೀಠ ಈ ಆದೇಶವನ್ನು ನೀಡಿದೆ.

ವಾದ-ಪ್ರತಿವಾದ ಆಲಿಸಿದ ದಾಖಲೆಗಳನ್ನು ಪರಾಮರ್ಶಿಸಿದ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ-ರೇರಾ), ''90 ದಿನಗಳೊಳಗೆ ಭೂಮಿಯ ಖಾತಾ, ಬೆಸ್ಕಾಂ ಮತ್ತು ನೀರಿನ ಮೀಟರ್, ಕಾರ್ಪಸ್ ಫಂಡ್, ಎಸ್ಕ್ರೋ ಖಾತೆಯ ಬಾಕಿ ಮತ್ತು ನಿರ್ವಹಣೆಗೆ ಸಂಬಂಧಿಸಿದ ಖಾತೆಗಳನ್ನು ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ ರಚಿಸಲಾದ ಗೃಹ ಖರೀದಿದಾರರ ಅಧಿಕೃತ ಸಂಘಕ್ಕೆ ವರ್ಗಾಯಿಸಲು ಪ್ರತಿವಾದಿಗಳಾದ ಬಿಲ್ಡರ್ ಕಂಪನಿ ಸ್ಮಾರ್ಟ್ ವ್ಯಾಲ್ಯೂ ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಟಾಟಾ ವ್ಯಾಲ್ಯೂ ಹೋಮ್ಸ್ ಲಿಮಿಟೆಡ್‌ಗೆ ನಿರ್ದೇಶಿಸಿದೆ. ಅಲ್ಲದೆ, ಅಪಾರ್ಟ್‌ಮೆಂಟ್‌ಗೆ ಡಿಜಿ ಸೆಟ್‌ನ ವಿದ್ಯುತ್ ಸರಬರಾಜನ್ನು ಪುನಃಸ್ಥಾಪಿಸಲು ಮತ್ತು ಒಪ್ಪಂದಗಳ ನಿಯಮಗಳ ಪ್ರಕಾರ ಯೋಜನೆಯ ಕಾಯಂ ಸೌಲಭ್ಯಗಳನ್ನು ಪೂರ್ಣಗೊಳಿಸುವಂತೆ ಪ್ರಾಧಿಕಾರ ಬಿಲ್ಡರ್‌ಗೆ ಆದೇಶಿಸಿದೆ.

ದೂರಿನ ಸಾರಾಂಶ: ''ಸಂಕೀರ್ಣದಲ್ಲಿರುವ ಎಲ್ಲಾ ಫ್ಲ್ಯಾಟ್‌ಗಳಿಗೆ ಕಾವೇರಿ ನೀರು ಸರಬರಾಜು ವ್ಯವಸ್ಥೆ ಮಾಡುವುದಾಗಿ ಬಿಲ್ಡರ್ ಭರವಸೆ ನೀಡಿದ್ದರು. ಆದರೆ ಫ್ಲ್ಯಾಟ್ ಖರೀದಿಸಿ ಆರು ವರ್ಷ ಕಳೆದರೂ ಬಿಲ್ಡರ್ ಈವರೆಗೆ ಕಾವೇರಿ ನೀರನ್ನು ಪೂರೈಸಿಲ್ಲ. ಅಲ್ಲದೆ, ಕಾವೇರಿ ನೀರಿನ ಪೂರೈಕೆಗೆ ಅಗತ್ಯವಾದ ಪ್ರತ್ಯೇಕ ಪೈಪ್‌ಲೈನ್ ಮೂಲಸೌಕರ್ಯ ಅಳವಡಿಸಿಲ್ಲ. ಕೇವಲ ಎರಡು ಪೈಪ್‌ಲೈನ್‌ಗಳಿವೆ, ಒಂದು ಬೋರ್‌ವೆಲ್ ನೀರು ಸರಬರಾಜಿಗೆ ಮತ್ತು ಇನ್ನೊಂದು ಶೌಚಾಲಯಕ್ಕೆ ಸಂಸ್ಕರಿಸಿದ ನೀರನ್ನು ಪೂರೈಸಲು ಹಾಗೂ ಕಾವೇರಿ ನೀರನ್ನು ಸಂಗ್ರಹಿಸಲು ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಿಲ್ಲ. ಆದರೂ ಎಲ್ಲಾ ಫ್ಲ್ಯಾಟ್‌ಗಳಿಗೆ ಕಾವೇರಿ ನೀರು ಸರಬರಾಜು ಮಾಡಲು ಠೇವಣಿ ಹಣ ಸಂಗ್ರಹಿಸಲಾಗಿದೆ. 2017ರ ಅಕ್ಟೋಬರ್ 18ರಿಂದ ಅನ್ವಯವಾಗುವಂತೆ ವರ್ಷಕ್ಕೆ ಶೇ.18ರಷ್ಟು ಬಡ್ಡಿಯೊಂದಿಗೆ ಕಾವೇರಿ ನೀರಿನ ಸಂಪರ್ಕ ಮತ್ತು ಫ್ಲ್ಯಾಟ್‌ಗೆ ನೀರು ಪೂರೈಕೆಗಾಗಿ ಠೇವಣಿಯಾಗಿ ಸಂಗ್ರಹಿಸಿದ 14,895 ರೂ.ಗಳನ್ನು ಮರುಪಾವತಿಸಲು ಆದೇಶಿಸಬೇಕು. ಜತೆಗೆ ಕಡಿತಗೊಳಿಸಿರುವ ಜನರೇಟರ್ ಸೇವೆಯನ್ನು ಪುನಃ ಒದಗಿಸಲು ಸೂಚಿಸಬೇಕು'' ಎಂದು ದೂರಿನಲ್ಲಿ ಕೋರಲಾಗಿತ್ತು.

''ಆದರೆ ಫ್ಲ್ಯಾಟ್ ನಿವಾಸಿಗಳು ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯಿದೆ 1972 ಮತ್ತು ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960ರಡಿಯಲ್ಲಿ ನೋಂದಾಯಿಸಿಕೊಂಡು ಸಂಘ ಸ್ಥಾಪಿಸಿಕೊಂಡಿದ್ದಾರೆ. ವಸತಿ ಯೋಜನೆಯ ನಿರ್ವಹಣೆ ಮತ್ತು ಸೌಲಭ್ಯಗಳ ನಿರ್ವಹಣೆಯನ್ನು ಸಂಘವು ವಹಿಸಿಕೊಂಡಿದೆ. ಮಾರಾಟವಾಗದ ಫ್ಲ್ಯಾಟ್‌ಗಳಿಗೆ ನಿರ್ವಹಣಾ ಶುಲ್ಕವನ್ನು ಪಾವತಿಸುವುದನ್ನು ಹೊರತುಪಡಿಸಿ, ಯೋಜನೆಯ ನಿರ್ವಹಣೆಯಲ್ಲಿ ತಮಗೆ ಯಾವುದೇ ಪಾತ್ರವಿಲ್ಲ. ಜನರೇಟರ್ ಸೇವೆಯ ಸಂಪರ್ಕ ಕಡಿತ ಸಂಬಂಧ ದೂರುದಾರರು ಎತ್ತಿರುವ ವಿವಾದವು ಸಂಘ ಮತ್ತು ದೂರುದಾರರ ನಡುವೆ ಇದೆ ಮತ್ತು ಅದು ನಮಗೆ ಸಂಬಂಧಿಸಿಲ್ಲ'' ಎಂದು ಬಿಲ್ಡರ್ ಹೇಳಿದ್ದರು.

> ಕರ್ನಾಟಕ ರೇರಾ ಪ್ರಾಧಿಕಾರದ ಆದೇಶವನ್ನು ನಾವು ಸ್ವಾಗತಿಸುತ್ತೇವೆ, ಆದೇಶದಲ್ಲಿ ಬಿಲ್ಡರ್‌ಗೆ ಭೂ ಖಾತೆಯನ್ನು ಅಧಿಕೃತ ಸಂಘಕ್ಕೆ ವರ್ಗಾಯಿಸಲು ಸ್ಪಷ್ಟವಾಗಿ ನಿರ್ದೇಶನ ನೀಡಲಾಗಿದೆ. ಜೊತೆಗೆ ಕಾರ್ಪಸ್ ನಿಧಿ, ಎಸ್ಕ್ರೋ ಖಾತೆಯ ಉಳಿತಾಯ ಹಣ, ಬೆಸ್ಕಾಂ ಮತ್ತು ನೀರಿನ ಮೀಟರ್‌ಗಳನ್ನು ಸಹ ವರ್ಗಾಯಿಸಬೇಕು. ರಾಜ್ಯದಲ್ಲಿ ಗೃಹ ಖರೀದಿದಾರರ ಭೂಮಿಯ ಹಕ್ಕುಗಳ ಹಿತಾಸಕ್ತಿಗಳನ್ನು ರಕ್ಷಿಸುವ ಮಹತ್ವದ ಆದೇಶದಲ್ಲಿ ಇದು ಒಂದಾಗಿದೆ.
>
> **-ಧನಂಜಯ ಪದ್ಮನಾಭಾಚಾರ್** ಸಂಚಾಲಕ, ಕರ್ನಾಟಕ ಹೋಮ್ ಬೈಯರ್ಸ್ ಫೋರಂ

ನಗರದ ಪ್ರತಿಷ್ಠಿತ ಬೆಂಗಳೂರು ಕ್ಲಬ್‌ನ 2026-27ನೇ ಸಾಲಿನ ನೂತನ ಆಡಳಿತ ಮಂಡಳಿಗೆ ಡಾ.ಪ್ರದೀಪ್ ಎಂ. ರಾವ್ ಅಧ್ಯಕ್ಷರಾಗಿ, ವಿಕ್ರಂ ಬಿಹಾನಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಸಮಿತಿಯ ಸದಸ್ಯರಾಗಿ ಸುಮನ್ ರಂಗನಾಥ್, ಆದಿತ್ಯ ಬಿ.ಪಿ. ಶೆಟ್ಟಿ, ವಿನಿತಾ ಸುಬ್ಬಯ್ಯ, ಹೇಮಂತ್ ಮಹೇಶ್ ಸಿ., ಪ್ರಶ್ನಿ ಪದ್ಮನಾಭನ್, ಕಿಶೋರ್ ರಾವ್, ಶ್ರೀದೇಂದು ಮಲ್ಹಾನ್ ಆಯ್ಕೆಯಾಗಿದ್ದಾರೆ.

ವಸಂತಪುರ ಒಕ್ಕಲಿಗರ ಒಕ್ಕೂಟದ ವತಿಯಿಂದ ವಸಂತ ವಲ್ಲಭರಾಯಸ್ವಾಮಿ ದೇಗುಲ ಮುಂಭಾಗ ಕೆಂಪೇಗೌಡರ 517ನೇ ಜಯಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಇದೇ ವೇಳೆ ಶಾಲಾಮಕ್ಕಳಿಗೆ ಸಮವಸ್ತ್ರ ವಿತರಿಸಲಾಯಿತು.

ದೇಗುಲ ಕುಂಭಾಭಿಷೇಕ ಇಂದು

ಬೆಂಗಳೂರು: ವಸಂತನಗರದ ಒಂದನೇ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ವಿದ್ಯಾ ಗಣಪತಿ ದೇವಾಲಯದಲ್ಲಿ ಲಕ್ಷ್ಮಿನರಸಿಂಹ ಸ್ವಾಮಿ ಸೇರಿದಂತೆ ವಿವಿಧ ದೇವರ ವಿಮಾನ ಗೋಪುರ ಕಳಶ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಮಹೋತ್ಸವಕ್ಕೆ ಶನಿವಾರ ಚಾಲನೆ ಸಿಕ್ಕಿದ್ದು ಸೋಮವಾರದವರೆಗೆ ನಾನಾ ಕಾರ್ಯಕ್ರಮಗಳು ನಡೆಯಲಿವೆ.

ಸೋಮವಾರ ಬೆಳಗ್ಗೆ ಶ್ರೀ ಗಣಪತಿ ಪೂಜೆ, ಶುದ್ಧಿ ಪುಣ್ಯಾಹವಾಚನ, ಕಳಶಾರಾಧನೆ, ಮೂರ್ತಿ ಹೋಮ ನಡೆಯಲಿದೆ. ಮಧ್ಯಾಹ್ನ 12ರಿಂದ 1ರವರೆಗೆ ಮುಹೂರ್ತದಲ್ಲಿ ಮಹಾ ಕುಂಭಾಭಿಷೇಕ ಹಾಗೂ ಬಳಿಕ ಅನ್ನದಾನ ನಡೆಯಲಿದೆ. ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್, ಲೋಕಸಭಾ ಸದಸ್ಯ ಪಿ.ಸಿ. ಮೋಹನ್, ಮಾಜಿ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು, ಕಂದಾಯ ಇಲಾಖೆಯ [illegible] ಜಿ. ಸತೀಶ್, ಎಂ.ಪಿ.ಜೆ. ಮೋಹನ್, ಕಟ್ಟಾ ಜಗದೀಶ್, ದಲಾಯತ್, ಅಶ್ವತ್ಥನಾರಾಯಣ, ಕುಮಾರ್ ನಾಯಕ್, ಕೃಷ್ಣಪ್ಪ ಭಾಗವಹಿಸಲಿದ್ದಾರೆ ಎಂದು ದೇವಸ್ಥಾನದ ಪ್ರಧಾನ ಅರ್ಚಕ ಶ್ರೀರಾಮು ಭಟ್ಟರ್, ದೇಗುಲ ಆಡಳಿತ ಮಂಡಳಿ ಅಧ್ಯಕ್ಷ ಎಂ. ತ್ಯಾಗರಾಜ್ ಕೋರಿದ್ದಾರೆ.

ಮಿಶನ್ ರಸ್ತೆ ಎನ್‌ಯು ಆಸ್ಪತ್ರೆಯಿಂದ ವಿದ್ಯಾಪೀಠ ಕಾರ್ನರ್ ಫೆಸ್ಟ್ -2026 ಪ್ರಯುಕ್ತ ಉಚಿತ ಆರೋಗ್ಯ ಶಿಬಿರ ಇತ್ತೀಚೆಗೆ ನಡೆಯಿತು. ನೂರಾರು ಮಂದಿ ಈ ಸೌಲಭ್ಯ ಪಡೆದರು.

ರಾಮಕೃಷ್ಣ ಹೆಗಡೆ ನಗರ ಬಾಲಾಜಿಕೃಪಾ ಬಡಾವಣೆಯ ಮಹಾಗಣಪತಿ ವೆಂಕಟೇಶ್ವರ ಅಭಯ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಯಕ್ಷಗಾನ ತರಗತಿಗಳ ಎರಡನೇ ಬ್ಯಾಚ್‌ಗೆ ಭಾನುವಾರ ಚಾಲನೆ ನೀಡಲಾಯಿತು. ಯಕ್ಷ ಕಲಾ ಕೌಸ್ತುಭ ತಂಡದ ಉಮೇಶ್ ಮಂದಾರ್ತಿ ತರಗತಿ ನಡೆಸಿಕೊಡಲಿದ್ದಾರೆ.

ಹೈಡ್ರೋಸೆಫಾಲಸ್ ಸಮಸ್ಯೆಯಿದ್ದ 9 ತಿಂಗಳ ಮಗುವಿಗೆ ಮರುಜೀವ

ಹೆಣ್ಣೂರು ಸ್ಪರ್ಶ್ ಆಸ್ಪತ್ರೆಯಲ್ಲಿ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

ಬೆಂಗಳೂರು: ಮಿದುಳಿನಲ್ಲಿ ಅಸಹಜವಾಗಿ ದ್ರವ ಶೇಖರಣೆಗೊಂಡು ತಲೆ ವಿಸ್ತಾರವಾಗುವ (ದೊಡ್ಡದಾಗುವ) ಹೈಡ್ರೋಸೆಫಾಲಸ್ ಎಂಬ ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದ 9 ತಿಂಗಳ ಮಗುವಿಗೆ ಹೆಣ್ಣೂರು ರಸ್ತೆಯಲ್ಲಿರುವ ಸ್ಪರ್ಶ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿಸುವ ಮೂಲಕ ಮರುಜೀವ ನೀಡಲಾಗಿದೆ.

ದೊಡ್ಡ ತಲೆಯೊಂದಿಗೆ ಜನಿಸಿದ ಈ ಮಗುವಿನ ಸ್ಥಿತಿಯು ದಿನಕಳೆದಂತೆ ಉಲ್ಬಣಗೊಳ್ಳುತ್ತಾ ಬಂದಿತ್ತು. ತಲೆಯ ಗಾತ್ರ ಮತ್ತು ತೂಕ ಹೆಚ್ಚಾದಂತೆ ಮಗುವಿನ ಚಲನೆ ಸಂಪೂರ್ಣವಾಗಿ ಸ್ಥಗಿತಗೊಂಡಿತು. ತಲೆಯನ್ನು ಆರಾಮದಾಯಕವಾಗಿ ಅತ್ತಿಂದಿತ್ತ ತಿರುಗಿಸಲು ಸಾಧ್ಯವಾಗದ ಕಾರಣ ನೆತ್ತಿಯ ಚರ್ಮದ ಮೇಲೆ 'ಪ್ರೆಶರ್ ಸೋರ್ಸ್' (ಒತ್ತಡದ ಹುಣ್ಣುಗಳು) ಕಾಣಿಸಿಕೊಳ್ಳಲಾರಂಭಿಸಿದವು.

ಕೌಟುಂಬಿಕ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಈ ಮಗು ಅನಾಥಾಶ್ರಮವೊಂದರ ಪಾಲನೆಯಲ್ಲಿತ್ತು. ಅನಾಥಾಶ್ರಮದವರು ಮಗುವಿನ ಮುಂದಿನ ಚಿಕಿತ್ಸೆಗಾಗಿ ವಿಶೇಷ ವೈದ್ಯಕೀಯ ನೆರವು ಕೋರಿ ಆಸ್ಪತ್ರೆಯನ್ನು ಸಂಪರ್ಕಿಸಿದ್ದರು. ಹೆಣ್ಣೂರು ರಸ್ತೆಯ ಸ್ಪರ್ಶ್ ಆಸ್ಪತ್ರೆಯ ಮಲ್ಟಿಡಿಸಿಪ್ಲಿನರಿ ವೈದ್ಯರ ತಂಡವು ಶಸ್ತ್ರಚಿಕಿತ್ಸೆ ಕೈಗೊಂಡಿತು.

> ಮಗುವಿನ ಆರೋಗ್ಯ ಸ್ಥಿತಿಯು ಎಷ್ಟರಮಟ್ಟಿಗೆ ಹದಗೆಟ್ಟಿತ್ತೆಂದರೆ, ಅಪಾಯವಿದ್ದರೂ ಸಹ ಶಸ್ತ್ರಚಿಕಿತ್ಸೆ ಮಾಡುವುದು ಒಂದೇ ನಮ್ಮ ಮುಂದಿದ್ದ ಆಯ್ಕೆಯಾಗಿತ್ತು. ಮಗುವಿನ ವೈದ್ಯಕೀಯ ಸಮಸ್ಯೆಗೆ ಚಿಕಿತ್ಸೆ ನೀಡುವುದಷ್ಟೇ ಅಲ್ಲದೆ, ಆಕೆಗೆ ಆರೋಗ್ಯಕರ ಭವಿಷ್ಯ ಮತ್ತು ಉತ್ತಮ ಜೀವನವನ್ನು ನೀಡುವ ಅವಕಾಶವನ್ನು ಕಲ್ಪಿಸುವುದು ನಮ್ಮ ಗುರಿಯಾಗಿತ್ತು.
>
> **ಡಾ.ಆನ್ ಆಗ್ನೆಸ್ ಮ್ಯಾಥ್ಯೂ** ಪೀಡಿಯಾಟ್ರಿಕ್ ನ್ಯೂರಾಲಜಿ ವಿಭಾಗದ ಹಿರಿಯ ಕನ್ಸಲ್ಟೆಂಟ್

ಸ್ಪರ್ಧಾತ್ಮಕ ಪರೀಕ್ಷೆ ತರಬೇತಿಗೆ ಅರ್ಜಿ

■ **ವಿಕ ಸುದ್ದಿಲೋಕ** ಬೆಂಗಳೂರು

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಇಂದಿರಾ ಗಾಂಧಿ ವೃತ್ತಿ ಮತ್ತು ಅಭಿವೃದ್ಧಿ ಕೇಂದ್ರದ ವತಿಯಿಂದ 2026-27ನೇ ಸಾಲಿನ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಾದ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳ ಮಾರ್ಗದರ್ಶನ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ವಿವರ ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇಲಾಖೆಯ ಅಧಿಕೃತ ವೆಬ್‌ಸೈಟ್ igccd.karnataka.gov.inಗೆ ಭೇಟಿ ನೀಡಬಹುದು ಎಂದು ಬೆಂಗಳೂರು ಇಂದಿರಾ ಗಾಂಧಿ ವೃತ್ತಿ ಮತ್ತು ಅಭಿವೃದ್ಧಿ ಕೇಂದ್ರದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಯಿಯ ಬೈಗುಳದಿಂದ ನೊಂದು ಮದ್ಯವ್ಯಸನಿ ಆತ್ಮಹತ್ಯೆ

■ **ವಿಕ ಸುದ್ದಿಲೋಕ** ಬೆಂಗಳೂರು

ಮದ್ಯವ್ಯಸನ ಬಿಡುವಂತೆ ಬೈದು ಬುದ್ಧಿ ಹೇಳಿದ ತಾಯಿಯ ಮಾತಿನಿಂದ ಬೇಸರಗೊಂಡ ಮಗ ಕಸದ ಲಾರಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹುಳಿಮಾವು ಬಳಿಯ ಸಿ.ಕೆ.ಪಾಳ್ಯ ರಸ್ತೆಯಲ್ಲಿ ಭಾನುವಾರ ನಡೆದಿದೆ.

■ ಕಸ ಸಾಗಾಟದ ಲಾರಿ ಚಕ್ರಕ್ಕೆ ತಲೆ ಕೊಟ್ಟ ಯುವಕ

ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ಸಿದ್ದರಾಜು (29) ಆತ್ಮಹತ್ಯೆ ಮಾಡಿಕೊಂಡವನು. ತಾಯಿ ಮಹಾದೇವಿ ಅವರೊಂದಿಗೆ ಸಿ.ಕೆ.ಪಾಳ್ಯದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ ಈತ ಮದ್ಯವ್ಯಸನಿಯಾಗಿದ್ದ. ಮಹಾದೇವಿ ಅವರು ಖಾಸಗಿ ಶಾಲೆಯಲ್ಲಿ ಸ್ವಚ್ಛತಾ ಕೆಲಸ ಮಾಡಿ, ಸಿದ್ದರಾಜುನನ್ನು ಸಾಕುತ್ತಿದ್ದರು.

ನಿರುದ್ಯೋಗಿಯಾಗಿದ್ದ ಸಿದ್ದರಾಜು, ಪ್ರತಿನಿತ್ಯ ಪಾನಮತ್ತನಾಗಿ ಮನೆಗೆ ಬರುತ್ತಿದ್ದ. ಮದ್ಯ ಕುಡಿಯಲು ಹಣ ಕೊಡುವಂತೆ ತಾಯಿಯನ್ನು ಪೀಡಿಸುತ್ತಿದ್ದ. ಅದೇ ರೀತಿ ಶನಿವಾರ ರಾತ್ರಿ ಸಹ ಮದ್ಯಕ್ಕೆ ಹಣ ಕೊಡುವಂತೆ ತಾಯಿಯ ಬಳಿ ಕೇಳಿದ್ದ. ಹಣ ಕೊಡಲು ನಿರಾಕರಿಸಿದ ಮಹಾದೇವಿ, ಮದ್ಯವ್ಯಸನ ಬಿಡುವಂತೆ ಸಿದ್ದರಾಜುಗೆ ಬೈದು ಬುದ್ಧಿ ಹೇಳಿದ್ದರು. ಇದರಿಂದ ಬೇಸರಗೊಂಡು ಮನೆಯಿಂದ ಹೊರ ಹೋಗಿದ್ದ ಆತ ಭಾನುವಾರ ಬೆಳಗಿನ ಜಾವ ಸಿ.ಕೆ.ಪಾಳ್ಯ ರಸ್ತೆಯಲ್ಲಿ ಹೋಗುತ್ತಿದ್ದ ಕಸ ಸಾಗಾಟದ ಲಾರಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಘಟನಾ ಸ್ಥಳದಲ್ಲಿ ಪರಿಶೀಲಿಸಿದಾಗ ಆರಂಭದಲ್ಲಿ ಸಿದ್ದರಾಜುಗೆ ಕಸದ ಲಾರಿ ಡಿಕ್ಕಿಯಾಗಿ ಆತ ಮೃತಪಟ್ಟಿರಬಹುದು. ಘಟನೆಯು ಅಪಘಾತ ಇರಬಹುದೆಂದು ಅಂದಾಜಿಸಿದ್ದೆವು. ಆದರೆ, ಘಟನಾ ಸ್ಥಳದ ಸಿ.ಸಿ ಕ್ಯಾಮೆರಾದ ದೃಶ್ಯಾವಳಿ ಪರಿಶೀಲಿಸಿದಾಗ ಸಿದ್ದರಾಜು ನಿಧಾನವಾಗಿ ಚಲಿಸುತ್ತಿದ್ದ ಲಾರಿಯ ಹಿಂದಿನ ಚಕ್ರಕ್ಕೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಯಿತು. ಇಡೀ ಘಟನೆಯ ದೃಶ್ಯಾವಳಿ ಆ ಸಿ.ಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿದ್ದರಾಜು, ಲಾರಿಯ ಹಿಂದಿನ ಚಕ್ರಕ್ಕೆ ಸಿಲುಕಿರುವುದು ಚಾಲಕನ ಗಮನಕ್ಕೆ ಬಂದಿಲ್ಲ. ಹೀಗಾಗಿ, ಚಾಲಕ ಲಾರಿ ಚಾಲನೆ ಮಾಡಿಕೊಂಡು ಮುಂದೆ ಹೋಗಿದ್ದಾನೆ. ನೋಂದಣಿ ಸಂಖ್ಯೆಯ ವಿವರ ಆಧರಿಸಿ ಲಾರಿ ಪತ್ತೆ ಮಾಡುತ್ತಿದ್ದೇವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಹುಳಿಮಾವು ಠಾಣೆಯಲ್ಲಿ ದೂರು ದಾಖಲಾಗಿದೆ.

ಕನಕಪುರ ರಸ್ತೆಯ ವೈಕುಂಠಗಿರಿಯ ದೇವಾಲಯದಲ್ಲಿ ಇಸ್ಕಾನ್ ಬ್ರಹ್ಮೋತ್ಸವ ಪ್ರಯುಕ್ತ ಕಲ್ಯಾಣಿಯಲ್ಲಿ ಗೌರಾಂಗ ಮತ್ತು ನಿತ್ಯಾನಂದ ಪ್ರಭುಗಳಿಗೆ ತೆಪ್ಪೋತ್ಸವ ನೆರವೇರಿಸಲಾಯಿತು.

'ಶಿಕ್ಷಣ, ಆರೋಗ್ಯ ಉಳ್ಳವರ ಪಾಲಾಗುತ್ತಿದೆ'

ಬೆಂಗಳೂರು: ಪಾಶ್ಚಾತ್ಯ ದೇಶಗಳಲ್ಲಿ ಮಕ್ಕಳು ಪಿಯುಸಿವರೆಗೆ ವಿದ್ಯಾಭ್ಯಾಸ ಮುಗಿಸಿ ಬಳಿಕ ಆಸಕ್ತಿ ಇರುವ ಕ್ಷೇತ್ರದಲ್ಲಿ ತರಬೇತಿ ಪಡೆದು ವೃತ್ತಿಪರತೆ ಬೆಳೆಸಿಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗ ಉಳ್ಳವರ ಪಾಲಾಗುತ್ತಿವೆ. ಹಾಗಾಗಿ, ಗ್ರಾಮೀಣ ಪ್ರದೇಶದ ಜನರು ಮತ್ತು ಅವರ ಮಕ್ಕಳ ಜೀವನ ಮಟ್ಟ ಸುಧಾರಿಸಲು ಸರಕಾರ ಕೆಲವು ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕಿದೆ ಎಂದು ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನಿಂದ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಜಾನಪದ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಸಮ್ಮೇಳನಾಧ್ಯಕ್ಷ ಸಾ.ಮ. ಶಿವಮಲ್ಲಯ್ಯ ಅವರ 'ಬಿತ್ತನೆ' ಸೇರಿ ಎರಡು ನಾಟಕ ಕೃತಿಗಳನ್ನು ಪತ್ರಕರ್ತ ರವೀಂದ್ರ ಭಟ್ ಲೋಕಾರ್ಪಣೆ ಮಾಡಿದರು. ನಿಡಸಾಲೆ ಪುಟ್ಟಸ್ವಾಮಯ್ಯ (ಪುಸ್ತಕ ಸಂಸ್ಕೃತಿ), ಮಹಾಂತೇಶ್ ನಿಟ್ಟೂರು (ವಿಜ್ಞಾನ), ಯು.ಸಿ.ಚನ್ನೇಗೌಡ (ಸಾಹಿತ್ಯ), ನಾಗರತ್ನ ಹಿರೇಮಠ್ (ಯೋಗ), ಸಾ.ಮ.ಮಾಯಣ್ಣ (ಸಾಂಸ್ಕೃತಿಕ), ಸಿ.ಪುಟ್ಟಸ್ವಾಮಿ (ಶೈಕ್ಷಣಿಕ), ಭೀಮಪ್ಪ ಪೂಜಾರಿ (ಜಾನಪದ), ಮಂಡಿಬೆಲೆ ರಾಜಣ್ಣ (ಮಾಧ್ಯಮ), ಬಿಜೆಜಿ ಸತ್ಯಶ್ರೀ (ಕಾನೂನು), ಬಿ.ಎಸ್. ಮೋರಟಗಿ (ಸಹಕಾರ) ಅವರಿಗೆ ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಂಸ್ಥೆ ಅಧ್ಯಕ್ಷ ಡಾ.ಎಸ್. ರಾಮಲಿಂಗೇಶ್ವರ, ಕಾರ್ಯದರ್ಶಿ ಸಿ.ಹೇಮಾವತಿ, ಸಂಚಾಲಕರಾದ ಡಾ.ಕೃಷ್ಣ ಹಾನಬಾಳ್, ಎಲ್. ಬಸವಲಿಂಗು ಉಪಸ್ಥಿತರಿದ್ದರು.

ಎಲ್ಲಿ-ಏನು? ಸೋಮವಾರ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅಭಿನಂದನೆ ಸಮಾರಂಭ. ಉಪಸ್ಥಿತಿ : ಇಂಧನ ಸಚಿವ ಕೆ.ಜೆ.ಜಾರ್ಜ್, ಅಧ್ಯಕ್ಷತೆ : ಕೆಪಿಟಿಸಿಎಲ್ ನೌಕರರ ಸಂಘದ ಅಧ್ಯಕ್ಷ : ಕೆ. ಬಲರಾಮ್.
ಸ್ಥಳ: ತ್ರಿಪುರ ವಾಸಿನಿ, ಗೇಟ್ ನಂ.2, ಅರಮನೆ ಮೈದಾನ.
ಬೆಳಗ್ಗೆ 10.

ಕನ್ನಡ ಜನಶಕ್ತಿ ಕೇಂದ್ರ: ಕುವೆಂಪು ನೆನಪು ಕಾರ್ಯಕ್ರಮ. ಉದ್ಘಾಟನೆ : ಮಾಜಿ ಸಚಿವ ದಿನೇಶ್ ಗುಂಡೂರಾವ್. 'ಕುವೆಂಪು : ಒಲವು-ನಿಲುವು' ಕುರಿತು ಮಾಜಿ ಶಾಸಕ ವೈ.ಎಸ್.ವಿ.ದತ್ತ ಅವರಿಂದ ಉಪನ್ಯಾಸ. ಹೋರಾಟಗಾರ ಸಾ.ರಾ.ಗೋವಿಂದು ಅವರಿಗೆ ಕುವೆಂಪು ಗೌರವ ಪುರಸ್ಕಾರ ಪ್ರದಾನ.
ಸ್ಥಳ: ಕುವೆಂಪು ಪ್ರತಿಮೆ ಆವರಣ, ಸ್ವಾತಂತ್ರ್ಯ ಉದ್ಯಾನ, ಗಾಂಧಿನಗರ.
ಬೆಳಗ್ಗೆ 11.

ಕರ್ನಾಟಕ ಸಂಘ ಮಂಡ್ಯ: ನೃತ್ಯ ಸೌರಭ ಹಾಗೂ ಕುವೆಂಪು ಗೀತೆಗಳ ನೃತ್ಯ ರೂಪಕ - ಕಾಡಿನ ಕೊಳಲು ಕಾರ್ಯಕ್ರಮ.
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ.
ಸಂಜೆ 5.

ರೌಡಿ ಕೊಲೆ: ಆರೋಪಿಗಳ ಪತ್ತೆಗೆ ಪೊಲೀಸರ ಶೋಧ

ಬೆಂಗಳೂರು: ಜೆ.ಪಿ.ನಗರ ಮುಖ್ಯ ರಸ್ತೆಯಲ್ಲಿ ರಾಜು ಬಾಯ್ (29) ಎಂಬ ರೌಡಿಯನ್ನು ಬರ್ಬರವಾಗಿ ಕೊಲೆ ಮಾಡಿ ಪರಾರಿಯಾಗಿರುವ ಆರೋಪಿಗಳ ಪತ್ತೆಗೆ ಪೊಲೀಸರು ತೀವ್ರ ಶೋಧ ನಡೆಸಿದ್ದಾರೆ.

ಕೊಲೆ ನಡೆದ ಸ್ಥಳದ ಸಿ.ಸಿ. ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿ ಪರಿಶೀಲಿಸಿ ಆರೋಪಿಗಳ ಬಗ್ಗೆ ಮಾಹಿತಿ ಕಲೆಹಾಕಿರುವ ಪೊಲೀಸರು, ಅವರ ಬಂಧನಕ್ಕೆ ಬಲೆ ಬೀಸಿದ್ದಾರೆ. ಕೊಲೆಗೆ ಕಾರಣವೇನು, ಕೃತ್ಯದ ಹಿಂದೆ ಯಾರ ಕೈವಾಡವಿದೆ ಎಂಬ ಬಗ್ಗೆ ಪರಿಶೀಲನೆ ಮುಂದುವರಿದಿದೆ. ಹಣಕಾಸು ವಿಚಾರ ಅಥವಾ ಆಸ್ತಿ ವಿವಾದ, ವೈಯಕ್ತಿಕ ದ್ವೇಷದ ಕಾರಣ ಸೇರಿದಂತೆ ಎಲ್ಲಾ ಆಯಾಮಗಳಲ್ಲೂ ಪೊಲೀಸರು ತನಿಖೆ ಮಾಡುತ್ತಿದ್ದಾರೆ.

ಕೊಲೆ ಬಳಿಕ ಆರೋಪಿಗಳು ತಮಿಳುನಾಡಿಗೆ ಪರಾರಿಯಾಗಿರುವ ಬಗ್ಗೆ ಮಾಹಿತಿಯಿದ್ದು, ಅವರನ್ನು ಬಂಧಿಸಲು ಸಿಬ್ಬಂದಿಯ ಒಂದು ತಂಡವನ್ನು ತಮಿಳುನಾಡಿಗೆ ಕಳುಹಿಸಲಾಗಿದೆ.

ಸಿಬ್ಬಂದಿಯ ಮತ್ತೊಂದು ತಂಡ ನಗರದಲ್ಲಿ ಪತ್ತೆ ಕಾರ್ಯ ಮುಂದುವರಿಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಗತಿಪುರದ ರಾಜು ಬಾಯ್, ಶನಿವಾರ ಸಂಜೆ ಜೆ.ಪಿ.ನಗರ ಮುಖ್ಯ ರಸ್ತೆಯಲ್ಲಿ ಟೀ ಕುಡಿದು ನಡೆದು ಹೋಗುತ್ತಿದ್ದಾಗ ದುಷ್ಕರ್ಮಿಗಳು ಆತನನ್ನು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ಅಪರಾಧ ಹಿನ್ನೆಲೆಯುಳ್ಳ ರಾಜು ಬಾಯ್ ವಿರುದ್ಧ ಜೆ.ಪಿ.ನಗರ, ಕೆ.ಎಸ್.ಲೇಔಟ್ ಸೇರಿದಂತೆ ನಗರದ ವಿವಿಧ ಠಾಣೆಗಳಲ್ಲಿ ಆರು ಪ್ರಕರಣ ದಾಖಲಾಗಿದ್ದವು.

ಅಪರಾಧ ಸುದ್ದಿ

ಒಂದೇ ನಂಬರ್ ಪ್ಲೇಟ್‌ನ 2 ಬಸ್

» ನಮ್ಮ ಮೊದಲ ಪುಟದಿಂದ

ನೋಂದಣಿ ಸಂಖ್ಯೆ ನೋಡಿ ಅನುಮಾನಗೊಂಡ ಅವರು, ಆ ವಾಹನಗಳನ್ನು ಬೆನ್ನಟ್ಟಿ ಬೇಗೂರು ಕೆರೆ ರಸ್ತೆ ಬಳಿ ತಡೆದು ಪರಿಶೀಲಿಸಿದಾಗ ಆರೋಪಿಗಳ ಕಳ್ಳಾಟ ಬಯಲಾಗಿದೆ. ಈ ಎರಡೂ ಮಿನಿ ಬಸ್‌ಗಳು ಸೈಯದ್ ನಜೀರ್‌ಗೆ ಸೇರಿದ್ದು, ಆತ ಒಂದು ವಾಹನಕ್ಕೆ ಮಾತ್ರ ಜೀವಿತಾವಧಿ ತೆರಿಗೆ ಪಾವತಿಸಿದ್ದ. ಆ ವಾಹನದ ನೋಂದಣಿ ಸಂಖ್ಯೆಯನ್ನೇ ಮತ್ತೊಂದು ವಾಹನಕ್ಕೂ ಬಳಸಿ ಓಡಿಸುತ್ತಿದ್ದ. ಸೈಯದ್ ನಜೀರ್, ಹಳೆ ಗುಜರಿ ವಾಹನಗಳನ್ನು ಖರೀದಿಸಿ ದುರಸ್ತಿ ಮಾಡಿ ಹೊಸದಾಗಿ ಬಣ್ಣ ಬಳಿದು ಬಳಸುತ್ತಿದ್ದ. ಆರೋಪಿ ನಾಗರಾಜ್, ಅಸಲಿ ಬಸ್‌ಗಳ ನೋಂದಣಿ ಸಂಖ್ಯೆಗಳನ್ನು ಸೈಯದ್ ನಜೀರ್‌ಗೆ ಕೊಟ್ಟು ಕಮಿಷನ್ ಪಡೆಯುತ್ತಿದ್ದ. ಆ ನೋಂದಣಿ ಸಂಖ್ಯೆಗಳಿಗೆ ತಕ್ಕಂತೆ ಸೈಯದ್ ನಜೀರ್, ತನ್ನ ಮಿನಿ ಬಸ್‌ಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದ. ಆತ ಗಾರ್ಮೆಂಟ್ಸ್ ನೌಕರರನ್ನು ಕರೆದೊಯ್ಯಲು ಈ ಮಿನಿ ಬಸ್‌ಗಳನ್ನು ಬಳಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಮಧುಮಿತ್ರ ಬಡಾವಣೆಗೆ ನೆರೆ ಆತಂಕ

ಕೇಳ್ರಪ್ಪೋ, ನಮ್ಮ ಏರಿಯಾ ಪ್ರಾಬ್ಲಮ್
ನಿಮ್ಮ ಸಮಸ್ಯೆಗೆ ವಿಕ ದನಿ
ನಿಮ್ಮ ಏರಿಯಾದಲ್ಲಿ ಸಮಸ್ಯೆ ಇದ್ದರೆ ವಾಟ್ಸಾಪ್ ಮಾಡಿ.
76766 68588

ಬೆಂಗಳೂರು ದಕ್ಷಿಣ: ಜಿಗಣಿ ಪುರಸಭೆ 5ನೇ ವಾರ್ಡ್‌ನ ಮಧುಮಿತ್ರ ಬಡಾವಣೆ ಸುತ್ತ ರಾಜಕಾಲುವೆ ಹೂಳು ತೆರವಾಗದ ಹಿನ್ನೆಲೆಯಲ್ಲಿ ನಿವಾಸಿಗಳು ನೆರೆ ಭೀತಿಯಲ್ಲಿದ್ದಾರೆ.

ಜಿಗಣಿ ಕೆರೆಗೆ ಹೊಂದಿಕೊಂಡಿರುವ ಬಡಾವಣೆ ಇದಾಗಿದೆ. ಇತ್ತೀಚೆಗೆ ಸುರಿದ ಮಳೆಗೆ ಕೆರೆಯ ಎಸ್ ಟಿಪಿಗೆ ಹೊಂದಿಕೊಂಡಿರುವ ಪ್ರದೇಶಗಳು ಜಲಾವೃತಗೊಂಡಿದ್ದವು. ರಾಜಕಾಲುವೆ ಸ್ವಚ್ಛಗೊಳಿಸಿ ನೀರಿನ ಸರಾಗ ಹರಿವಿಗೆ ಅನುವು ಮಾಡಿಕೊಡದಿದ್ದರೆ ಮಳೆಗಾಲದಲ್ಲಿ ತೀವ್ರ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

''ಮಳೆ ಬಂದರೆ ಮನೆಗಳಿಗೆ ನೀರು ನುಗ್ಗುವ ಸ್ಥಿತಿ ಇದೆ. ರಾಜಕಾಲುವೆಯಲ್ಲಿ ಕೊಳಚೆ ನೀರು ನಿಂತು ದುರ್ವಾಸನೆ ಬೀರುತ್ತಿದೆ. ಸೊಳ್ಳೆ, ನೊಣಗಳು ಹೆಚ್ಚಿದ್ದು, ಸಾಂಕ್ರಾಮಿಕ ರೋಗ ಭೀತಿ ಇದೆ. ಹತ್ತಿರದಲ್ಲೇ ಶಾಲೆ ಇದ್ದು, ಅಲ್ಲಿನ ಮಕ್ಕಳಿಗೂ ಸಮಸ್ಯೆಯಾಗುತ್ತಿದೆ,'' ಎಂದು ಸ್ಥಳೀಯ ನಿವಾಸಿ ನಾಗರಾಜ್ ಹೇಳಿದರು.

''ದಶಕದ ಹಿಂದೆಯೇ ನಿರ್ಮಾಣವಾದ ಬಡಾವಣೆ ಇದಾಗಿದೆ. ರಸ್ತೆಗೆ ಡಾಂಬರು ಹಾಕಿಲ್ಲ, ಮೂಲಸೌಕರ್ಯ ಒದಗಿಸುವ ಕಾಮಗಾರಿಯೂ ನಡೆಯಬೇಕಿದೆ,'' ಎಂದು ಅವರು ಒತ್ತಾಯಿಸಿದರು.

''ಒತ್ತುವರಿಯಾಗಿರುವುದರಿಂದ ಸಮರ್ಪಕವಾಗಿ ನೀರು ಹರಿದು ಹೋಗುತ್ತಿಲ್ಲ, ಪುರಸಭೆ ಸಭೆಯಲ್ಲಿ ಈ ಬಗ್ಗೆ ಗಮನಸೆಳೆದಿದ್ದೇನೆ. ಆದರೂ ಅಧಿಕಾರಿಗಳು ಈ ಬಗ್ಗೆ ಗಮನಹರಿಸುತ್ತಿಲ್ಲ,'' ಎಂದು 5ನೇ ವಾರ್ಡ್ ಪುರಸಭೆ ಸದಸ್ಯ ಪುನೀತ್ ದೂರಿದರು.

ಮೈಸೂರು ಒಡೆಯರ ಕಾಲದ ಶಾಸನ ಪತ್ತೆ

ಯಲಹಂಕ: ಹೆಸರಘಟ್ಟ ಹೋಬಳಿಯ ದಿಬ್ಬೂರು ಹಾಗೂ ಯಲಹಂಕ ಸಮೀಪದ ನಾಗಮಂಗಲ ಗ್ರಾಮಗಳಲ್ಲಿ ಮೈಸೂರು ಇಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸೇರಿದ ಅಪರೂಪದ ಶಾಸನಗಳು ಇತ್ತೀಚೆಗೆ ಪತ್ತೆಯಾಗಿವೆ.

ಇತಿಹಾಸ ತಜ್ಞ ಡಾ.ವಿವೇಕಾನಂದ ಸಜ್ಜನ್ ಹಾಗೂ ಶಾಸನ ತಜ್ಞ ಕೆ.ಧನಪಾಲ್ ಅವರ ತಂಡದ ಕ್ಷೇತ್ರಕಾರ್ಯದ ವೇಳೆ ಇತಿಹಾಸ ಸಂಶೋಧಕ ಎಂ. ನರೇಂದ್ರ ಅವರು ಈ ಶಾಸನಗಳನ್ನು ಗುರುತಿಸಿದ್ದಾರೆ. ಇವೆರಡೂ ಶಾಸನಗಳು ಕ್ರಿ.ಶ. 1,750ರ ಅವಧಿಯದ್ದಾಗಿವೆ ಎಂದು ಅಂದಾಜಿಸಲಾಗಿದೆ.

''ಶಾಸನಗಳಲ್ಲಿ ಶ್ರೀರಂಗಪಟ್ಟಣದ ಪಶ್ಚಿಮ ಶ್ರೀರಂಗನಾಥ ಸ್ವಾಮಿಯವರ ಕ್ಷೇತ್ರ ಎಂಬ ಉಲ್ಲೇಖವಿದೆ. ಶಾಸನದ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಚಿತ್ರಗಳನ್ನು ಕೆತ್ತಲಾಗಿದ್ದು, ಮಧ್ಯಭಾಗದಲ್ಲಿ ಮೈಸೂರು ಒಡೆಯರ ವಿಶೇಷ ಸಂಕೇತವಾದ ಕೀರ್ತಿಮುಖ ಚಿಹ್ನೆ ಇದೆ. ಅದರ ಜತೆಗೆ ಎಡಭಾಗದಲ್ಲಿ ಸುದರ್ಶನ ಚಕ್ರ, ಬಲಭಾಗದಲ್ಲಿ ಶಂಖ ಹಾಗೂ ಮಧ್ಯದಲ್ಲಿ ವೈಷ್ಣವ ಪರಂಪರೆಯ ನಾಮದ ಚಿಹ್ನೆ ಕೆತ್ತಲಾಗಿದೆ. ಮೈಸೂರು ಒಡೆಯರು ವಿಷ್ಣುವಿನ ಆರಾಧಕರಾಗಿದ್ದರೂ ಶಿವನ ಆರಾಧನೆಗೂ ಸಮಾನ ಪ್ರೋತ್ಸಾಹ ನೀಡಿ ಸಮನ್ವಯತೆಯನ್ನು ಕಾಪಾಡಿಕೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ,'' ಎಂದು ಸಂಶೋಧಕ ಎಂ. ನರೇಂದ್ರ ವಿವರಿಸಿದರು.

''ಇಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ. 1750ರಲ್ಲಿ ದಿಬ್ಬೂರು ಹಾಗೂ ನಾಗಮಂಗಲ ಗ್ರಾಮಗಳನ್ನು ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಪೂಜಾ ಕೈಂಕರ್ಯಕ್ಕಾಗಿ ದಾನವಾಗಿ ನೀಡಿರುವುದನ್ನು ಇವು ದೃಢಪಡಿಸುತ್ತವೆ,'' ಎಂದು ಕೆ. ಧನಪಾಲ್ ಹಾಗೂ ಎಂ. ನರೇಂದ್ರ ಅಭಿಪ್ರಾಯಪಟ್ಟಿದ್ದಾರೆ.

ಅರಿವಿನ ಕೊರತೆಯಿಂದ ದಿಬ್ಬೂರಿನ ಶಾಸನವನ್ನು ಗ್ರಾಮಸ್ಥರು ದೇವರ ವಿಗ್ರಹವೆಂದು ಭಾವಿಸಿ ಹಲವು ವರ್ಷಗಳಿಂದ ಪೂಜಿಸುತ್ತಾ ಬಂದಿದ್ದು, ನಂತರ ದೇವಾಲಯದ ಜೀರ್ಣೋದ್ಧಾರ ವೇಳೆ ಅದನ್ನು ಆಂಜನೇಯ ದೇವಾಲಯದ ಬಳಿಯ ಅರಳಿ ಮರದ ಬುಡದಲ್ಲಿ ಇರಿಸಲಾಗಿತ್ತು.

ಈ ಶಾಸನಗಳ ಪತ್ತೆಯಿಂದ ಯಲಹಂಕ ಪ್ರದೇಶದ ಇತಿಹಾಸ ಹಾಗೂ ಮೈಸೂರು ಒಡೆಯರ ಕಾಲದ ಧಾರ್ಮಿಕ ದತ್ತಿ ವ್ಯವಸ್ಥೆಯ ಕುರಿತು ಹೊಸ ಬೆಳಕು ಚೆಲ್ಲಿದಂತಾಗಿದೆ.

ಶ್ಯಾಮಣ್ಣ ಗಾರ್ಡನ್‌ನಲ್ಲಿ ತ್ಯಾಜ್ಯ ತೆರವು

ಬೆಂಗಳೂರು: ವಿಜಯನಗರ ಕ್ಷೇತ್ರದ ಶ್ಯಾಮಣ್ಣ ಗಾರ್ಡನ್‌ನಲ್ಲಿ ರಸ್ತೆ ಪಕ್ಕ ರಾಶಿ ಬಿದ್ದ ಕಸವನ್ನು ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದ್ದಾರೆ.

ವಿಜಯ IMPACT ಕರ್ನಾಟಕ

ಜೂ.16ರ ಸಂಚಿಕೆಯಲ್ಲಿ ವಿಜಯ ಕರ್ನಾಟಕವು 'ಪ್ಲೀಸ್, ಕೊಳಚೆಯಿಂದ ಮುಕ್ತಿ ಕೊಡಿಸಿ' ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟಿಸಿ ಕಸದ ಸಮಸ್ಯೆ ಕುರಿತು ಗಮನ ಸೆಳೆದಿತ್ತು. ವರದಿ ಗಮನಿಸಿದ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿ ಡಾ.ಕೆ.ವೈಷ್ಣವಿ ಅವರು ಅಗತ್ಯ ಕ್ರಮ ಕೈಗೊಳ್ಳುವಂತೆ ಪಾಲಿಕೆಗೆ ನಿರ್ದೇಶಿಸಿದ್ದರು. ಬಳಿಕ, ಪಶ್ಚಿಮ ನಗರ ಪಾಲಿಕೆ ಕಾಮಗಾರಿ ವಿಭಾಗದ ವತಿಯಿಂದ ತೆರವುಗೊಳಿಸಲಾಗಿದೆ. ಪೈಪ್‌ಲೈನ್ ರಸ್ತೆಯಲ್ಲಿ ಚರಂಡಿ ಹೂಳನ್ನು ತೆರವು ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಪಾಲಿಕೆ ತಿಳಿಸಿದೆ.

LOVE VK ❤ LOVE LIFE
ಸೋಮವಾರ, 29 ಜೂನ್ 2026 I ADVERTORIAL, ENTERTAINMENT INDUSTRY PROMOTIONAL FEATURE
ಲವಲVK

ಬಾಲಿವುಡ್ ನಟಿ ಹುಮಾ ಖುರೇಷಿ 'ಟಾಕ್ಸಿಕ್' ಸಿನಿಮಾದ ಫಸ್ಟ್‌ಕಟ್ ನೋಡಿ, 'ಇದು ಯಶ್ ಅಭಿಮನಿಗಳಿಗೆ ಬಿಗ್ಗೆಸ್ಟ್ ಟ್ರೀಟ್' ಎಂದು ಹೇಳಿದ್ದಾರೆ.

ಬಹುಭಾಷಾ ನಟಿ ಶ್ರಿಯಾ ಸರಣ್ ಇತ್ತೀಚೆಗೆ ಕಾಶ್ಮೀರಕ್ಕೆ ಭೇಟಿ ನೀಡಿ ಅಲ್ಲಿನ ಸಾಂಪ್ರದಾಯಿಕ ಉಡುಪು ಮತ್ತು ಆಭರಣಗಳಲ್ಲಿ ಕಂಗೊಳಿಸಿದ ಫೋಟೊಗಳು ವೈರಲ್ ಆಗಿವೆ.

ಸುದೀಪ್ ಲಕ್ಷುರಿ ಕಾರವಾನ್

ಐಷಾರಾಮಿ ಕಾರು, ಬೈಕ್, ಹೈಎಂಡ್ ವಾಹನಗಳು ಸೇರಿದಂತೆ ವಿಶಿಷ್ಟ ಲೈಫ್‌ಸ್ಟೈಲ್‌ಗೂ ಪ್ರತ್ಯೇಕ ಅಭಿಮಾನಿ ಬಳಗ ಹೊಂದಿರುವ ನಟ ಸುದೀಪ್ ಅವರ ಹೊಸ ಕಾರವಾನ್ ಈಗ ಅಭಿಮಾನಿಗಳ ಗಮನ ಸೆಳೆದಿದೆ. ಈ ಲಕ್ಷುರಿ ಕಾರವಾನ್ ಇಡೀ ಭಾರತೀಯ ಚಿತ್ರರಂಗದಲ್ಲೇ ಸಂಚಲನ ಸೃಷ್ಟಿಸಿದೆ. 6.5 ಕೋಟಿ ರೂಪಾಯಿ ಮೌಲ್ಯದ ಇದನ್ನು ಸ್ಯಾಂಡಲ್‌ವುಡ್‌ನ ಅತ್ಯಂತ ದುಬಾರಿ ಕಾರವಾನ್ ಎನ್ನಲಾಗುತ್ತಿದೆ.

ಖ್ಯಾತ ಆಟೊಮೊಬೈಲ್ ಡಿಸೈನರ್ ದಿಲೀಪ್ ಛಾಬ್ರಿಯಾ ನಿರ್ಮಿಸಿರುವ ಈ ಜಿಮ್ ಮಾಡ್ಯುಲರ್ ಕಾರವಾನ್‌ನಲ್ಲಿ ವಿಶಾಲ ವಿಶ್ರಾಂತಿ ಕೊಠಡಿ, ಮಲಗುವ ಕೋಣೆ, ಸಣ್ಣ ಕಚೇರಿ ವ್ಯವಸ್ಥೆ, ಅತ್ಯಾಧುನಿಕ ಮನರಂಜನಾ ಸೌಲಭ್ಯಗಳು ಹಾಗೂ ಸುದೀಪ್ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ವಿಶೇಷ ಅಲಂಕಾರಗಳಿವೆ. ನಟನ ವೈಯಕ್ತಿಕ ಅಭಿರುಚಿ, ಅಗತ್ಯಗಳು ಹಾಗೂ ಬಳಕೆಯನ್ನು ಗಮನದಲ್ಲಿರಿಸಿ ಈ ಕಾರವಾನ್ ಅನ್ನು ಸಂಪೂರ್ಣ ಕಸ್ಟಮೈಸ್ ಮಾಡಲಾಗಿದೆ. ಮಹಾರಾಷ್ಟ್ರದ ಪುಣೆಯಲ್ಲಿ ನಿರ್ಮಾಣವಾಗಿರುವ ಈ ವಾಹನದ ಪ್ರೀಮಿಯಂ ವಿನ್ಯಾಸ ಈಗ ಎಲ್ಲರ ಗಮನ ಸೆಳೆಯುತ್ತಿದೆ.

ಈ ಹೊಸ ಕಾರವಾನ್ ಮೇಲೆ ಅಳವಡಿಸಿರುವ 'ಕೆ' ಲೋಗೊ ನಟ ಸುದೀಪ್ ಹೆಸರಿನ ಮೊದಲ ಅಕ್ಷರ ಪ್ರತಿನಿಧಿಸುವ ಸಿಗ್ನೇಚರ್ ವಿನ್ಯಾಸವಾಗಿದೆ. ಇದೇ ಲೋಗೊವನ್ನು ಅವರು ತಮ್ಮ ವೈಯಕ್ತಿಕ ಕಾರುಗಳ ಮೇಲೂ ಮೂಡಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಕಿಚ್ಚ ಖರೀದಿಸಿರುವ ಈ ಹೊಸ ಕಾರವಾನ್‌ನ ಚಿತ್ರ ಮತ್ತು ವಿಡಿಯೊಗಳು ವೈರಲ್ ಆಗುತ್ತಿದ್ದು, ಅಭಿಮಾನಿಗಳು ವ್ಯಾಪಕ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ■

ಇನ್ಮೇಲೆ ಸ್ಯಾಂಡಲ್‌ವುಡ್ ರೊಮ್ಯಾಂಟಿಕ್

ಮುಂಗಾರಿನಲ್ಲಿ ಪ್ರಕೃತಿಯು ರೊಮ್ಯಾಂಟಿಕ್ ಮೂಡಿನಲ್ಲಿರುವಂತೆ ಸ್ಯಾಂಡಲ್‌ವುಡ್ ಕೂಡ ಯುಗಳ ಗೀತೆಗಳ ಗುಂಗಿನಲ್ಲಿ ಪ್ರೇಕ್ಷಕರನ್ನು ಗೆಲ್ಲುವ ಪ್ಲ್ಯಾನ್‌ನಲ್ಲಿದೆ.

ಕಿರಣ್ ಚಂದ್ರ
kiran.b@timesofindia.com

ಗಣೇಶ್ ಅಭಿನಯದ 'ಕೃಷ್ಣಂ ಪ್ರಣಯ ಸಖಿ' ಸಿನಿಮಾದ ರೊಮ್ಯಾಂಟಿಕ್ ಹಾಡು 'ದ್ವಾಪರಾ ದಾಟುತಾ' 2024ರಲ್ಲಿ ಅರ್ಧ ವರ್ಷ ಕಳೆದರೂ ಹುರುಪು ಕಾಣಿಸಿಕೊಳ್ಳದ ಸ್ಯಾಂಡಲ್‌ವುಡ್‌ಗೆ ಹೊಸ ಕಳೆ ತಂದುಕೊಟ್ಟಿತ್ತು. ಆ ಚಿತ್ರ ಕೂಡ ಬ್ಲಾಕ್‌ಬಸ್ಟರ್ ಆಗಿತ್ತು. 2025ರಲ್ಲೂ ಇದೇ ಪ್ರಯೋಗ ಫಲ ಕೊಟ್ಟಿತ್ತು. ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಚಿತ್ರದ ಕ್ಯಾಚಿ ಯುಗಳ ಗೀತೆ 'ಬ್ಯಾಂಗಲ್ ಬಂಗಾರಿ' ವೈರಲ್ ಆಗುವುದರ ಜತೆಗೆ ಜನರನ್ನು ಥಿಯೇಟರ್‌ಗೆ ಸೆಳೆಯುವಲ್ಲಿಯೂ ಗೆದ್ದಿತ್ತು. ಈಗ ಅಂಥದ್ದೇ ಪ್ರಯೋಗದಲ್ಲಿ ಎರಡು ಮಧುರ ರೊಮ್ಯಾಂಟಿಕ್ ಹಾಡುಗಳು ಮ್ಯಾಜಿಕ್ ಮಾಡಲು ಸಜ್ಜಾಗಿವೆ. ಇವು ಬಿಡುಗಡೆಯಾದ ಒಂದೇ ವಾರದಲ್ಲಿ ಜನರ ಮನ ಗೆದ್ದಿವೆ.

'ಅಯೋಗ್ಯ'ನ ಮುದ್ದು ಪುಟ್‌ಲಕ್ಷ್ಮಿ

2018ರಲ್ಲಿ 'ಏನಮ್ಮಿ ಏನಮ್ಮಿ' ಹಾಡಿನ ಮೂಲಕ ಚೊಚ್ಚಲ ಸಿನಿಮಾದಲ್ಲೇ ಗೆಲುವಿನ ಕುದುರೆ ಏರಿದ್ದ ನಿರ್ದೇಶಕ ಮಹೇಶ್ ಈಗ ಅದೇ ಅಯೋಗ್ಯನನ್ನು ಕರೆದುಕೊಂಡು ಎಂಟು ವರ್ಷಗಳ ನಂತರ ಮತ್ತೆ ಮೋಡಿ ಮಾಡಲು ಬಂದಿದ್ದಾರೆ. 'ಏನಮ್ಮಿ ಏನಮ್ಮಿ' ಹಾಡಿನ ಹಿಂದಿದ್ದ ಇಬ್ಬರು ಸಂಗೀತ ಮಾಂತ್ರಿಕರಾದ ಸಾಹಿತ್ಯ ರಚನೆಕಾರ ಬಹದ್ದೂರ್ ಚೇತನ್ ಹಾಗೂ ಸಂಗೀತ ನಿರ್ದೇಶಕ ಅರ್ಜುನ್ ಜನ್ಯರನ್ನು ಮತ್ತೆ ಅಖಾಡಕ್ಕಿಳಿಸಿ ಇನ್ನೊಂದು ಮೆಲೊಡಿಯಸ್ 'ಮುದ್ದು ಮುದ್ದು ಪುಟ್‌ಲಕ್ಷ್ಮಿ' ಹಾಡು ನೀಡಿದ್ದಾರೆ. 'ಅಯೋಗ್ಯ' ಸಿನಿಮಾ ಮೂಲಕ ಸೂಪರ್‌ಹಿಟ್ ಆದ ನಟ ನೀನಾಸಂ ಸತೀಶ್ ಹಾಗೂ ನಟಿ ರಚಿತಾ ರಾಮ್ ಜೋಡಿ ಮತ್ತೆ ಮಂಡ್ಯದ ಗದ್ದೆ ಸಾಲುಗಳಲ್ಲಿ ಚೇತನ್ ಬರೆದ ಕ್ಯಾಚಿ ಸಾಲುಗಳಿಗೆ ಭಜರಂಗಿ ಮೋಹನ್ ನೃತ್ಯ ನಿರ್ದೇಶನದಲ್ಲಿ ಹೆಜ್ಜೆ ಹಾಕಿದ್ದಾರೆ. ಈ ಬಾರಿ ಮಧುರ ಹಾಡಿನ ಟ್ರೆಂಡಿಂಗ್ ಸಿಂಗರ್ ಸಿದ್ ಶ್ರೀರಾಮ್ ಹಾಗೂ ಪೃಥ್ವಿ ಭಟ್ ಹಾಡಿದ್ದು, ಈ ಹಾಡು ಈ ವರ್ಷದ ಹಿಟ್ ಸಾಂಗ್ ಲಿಸ್ಟ್ ಸೇರುವ ಮುನ್ಸೂಚನೆ ನೀಡಿದೆ.

'ಲಕ್ಷ್ಮಿ ಪುತ್ರ'ನ ಲವ್ ಟೈಮ್

ಉಪಾಧ್ಯಕ್ಷ ಸಿನಿಮಾ ಮೂಲಕ ಹೀರೊ ಆಗಿರುವ ನಟ ಚಿಕ್ಕಣ್ಣ ಈಗ 'ಲಕ್ಷ್ಮಿ ಪುತ್ರ'ರಾಗಿದ್ದು, ಅವರ 'ಉಪಾಧ್ಯಕ್ಷ'ನನ್ನು ನೋಡಲು 'ನನಗೆ ನೀನು, ನಿನಗೆ ನಾನು' ಹಾಡಿನ ಆಮಂತ್ರಣ ನೀಡಿದ್ದ ಹಾಗೆಯೇ ಈಗ 'ಲಕ್ಷ್ಮಿ ಪುತ್ರ' ಚಿತ್ರ ವೀಕ್ಷಣೆಗೆ ಥಿಯೇಟರ್‌ಗೆ ಬರುವಂತಾಗಲು 'ಇನ್ಮೇಲೆ, ಇನ್ಮೇಲೆ' ಎಂಬ ಪ್ರೇಮಗೀತೆ ನೀಡಿದ್ದಾರೆ. ಇಂಥ ಹಾಡುಗಳಿಂದಲೇ ಸಿನಿಮಾ ಗೆಲ್ಲಿಸಿದ್ದ ನಿರ್ದೇಶಕ ಎ.ಪಿ. ಅರ್ಜುನ್ ಈಗ ತಮ್ಮ ನಿರ್ಮಾಣದ 'ಲಕ್ಷ್ಮಿ ಪುತ್ರ' ಸಿನಿಮಾಗೂ ಅಂಥದ್ದೇ ಮಧುರ ಹಾಡು ಬರೆದಿದ್ದು, ಅದಕ್ಕೆ ಅರ್ಜುನ್ ಜನ್ಯ ಮ್ಯೂಸಿಕ್ ಬೆರೆಸಿ, ದರ್ಶನ್ ಮೇಳವಂಕಿ ಹಾಗೂ ಪೃಥ್ವಿ ಭಟ್ ಗಾಯನ ಸೇರಿಸಿ ಪ್ರೇಕ್ಷಕರ ಮುಂದಿಟ್ಟಿದ್ದಾರೆ. ಈ ಹಾಡು ಕೂಡ ತನ್ನ ಮಾಧುರ್ಯತೆಯಿಂದ ಪ್ರೇಕ್ಷಕರ ಮನ ಗೆದ್ದಿದ್ದು, ಚಿಕ್ಕಣ್ಣನ ಜತೆ ವಂದಿತಾ ಗೌಡ ತೆರೆಯ ಮೇಲೆ ಈ ಹಾಡಿಗೆ ಜೀವ ತುಂಬಿದ್ದಾರೆ. ■

ಕನ್ನಡ ಚಿತ್ರರಂಗ ಗೆಲ್ಲಬೇಕು

ಸ್ಟಾರ್ ನಟರು ತಮ್ಮ ಹುಟ್ಟುಹಬ್ಬದ ದಿನ ತಮ್ಮ ಸಿನಿಮಾ ಮಾಸ್ ಪೋಸ್ಟರ್ ಅಥವಾ ಎಂಟ್ರಿ ಸಾಂಗ್ ಬಿಡುಗಡೆ ಮಾಡುವಂತೆ ಚಿತ್ರತಂಡವನ್ನು ಕೇಳುವುದು ಸಾಮಾನ್ಯ. ಸಿನಿಮಾ ತಂಡಗಳು ಕೂಡ ಅದನ್ನು ವಾಡಿಕೆಯಂತೆ ಪಾಲಿಸಿಕೊಂಡು ಬಂದಿವೆ. ಆದರೆ ಈ ಬಾರಿ ನೀನಾಸಂ ಸತೀಶ್ ತಮ್ಮ ಹುಟ್ಟುಹಬ್ಬದಂದು 'ಮುದ್ದು ಮುದ್ದು ಪುಟ್‌ಲಕ್ಷ್ಮಿ' ಹಾಗೂ ನಟ ಚಿಕ್ಕಣ್ಣ ತಮ್ಮ ಬರ್ತ್‌ಡೇ ದಿನ 'ಇನ್ಮೇಲೆ ಇನ್ಮೇಲೆ' ಎಂಬ ಲವ್ ಸಾಂಗ್‌ಗಳನ್ನು ರಿಲೀಸ್ ಮಾಡಿಸಿ ಹಳೆ ಪದ್ಧತಿಯನ್ನು ಬ್ರೇಕ್ ಮಾಡಿದ್ದಾರೆ. ಈ ಮೂಲಕ ತಮ್ಮ ಸಿನಿಮಾ ಗೆಲ್ಲಬೇಕು ಹಾಗೂ ಇದರಿಂದ ಚಿತ್ರೋದ್ಯಮಕ್ಕೂ ಒಳ್ಳೆಯದಾಗಬೇಕೆಂಬ ಉದ್ದೇಶ ಅವರಲ್ಲಿದೆ. ಇವೆರಡೂ ಸಿನಿಮಾಗಳು ಹಳೆ ಮೈಸೂರು ಹಾಗೂ ಮಂಡ್ಯ ಸೊಗಡನ್ನೇ ಒಳಗೊಂಡಿರುವುದು ವಿಶೇಷ.

ಸುನಿಯ ಥ್ರಿಲ್ಲರ್ ಮುಂಗಾರು ಮಳೆ!

ಸಿಂಪಲ್ ಸುನಿ ನಿರ್ದೇಶನದ 'ಮೋಡ ಕವಿದ ವಾತಾವರಣ' ಸಿನಿಮಾಗೆ ಜನರಿಂದ ಚಿತ್ರತಂಡದ ನಿರೀಕ್ಷೆಗೂ ಮೀರಿದ ರೆಸ್ಪಾನ್ಸ್ ಸಿಗುತ್ತಿದೆ. ಈ ಬಗ್ಗೆ ನಿರ್ಮಾಪಕ ರಮೇಶ್ ಮೈಸೂರು ಲವಲvkಯೊಂದಿಗೆ ಮಾತನಾಡಿದ್ದಾರೆ.

ಮಲ್ಲೇಶ
feedbacklvk@vijaykarnataka.com

ರಾಮ್ ಮೂವೀಸ್ ಬ್ಯಾನರ್‌ನಡಿಯಲ್ಲಿ ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೆಳವಾಡಿ ಹಾಗೂ ಗೋವಾ ರಮೇಶ್ ಜಂಟಿಯಾಗಿ ನಿರ್ಮಿಸಿರುವ 'ಮೋಡ ಕವಿದ ವಾತಾವರಣ' ಚಿತ್ರವು ಕಳೆದ ಶುಕ್ರವಾರ ಬಿಡುಗಡೆಯಾಗಿ ಮೊದಲ ವೀಕೆಂಡ್‌ನಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿದೆ. ಸಿಂಪಲ್ ಸುನಿ ನಿರ್ದೇಶನದಲ್ಲಿ ಶೀಲಮ್, ಮೋಕ್ಷಾ ಕುಶಾಲ್, ಸಾತ್ವಿಕಾ ರಾವ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರಕ್ಕೆ ಉತ್ತಮ ರೆಸ್ಪಾನ್ಸ್ ಬರುತ್ತಿದ್ದು, ಇದು ಈ ಚಿತ್ರ ಥಿಯೇಟರ್‌ನಲ್ಲಿ ಹೆಚ್ಚು ದಿನಗಳ ಕಾಲ ಪ್ರದರ್ಶನ ಕಂಡು ಜನರನ್ನು ರಂಜಿಸುವ ಸುಳಿವು ನೀಡಿದೆ.

ಈ ಬಗ್ಗೆ ಮಾತನಾಡಿರುವ ನಿರ್ಮಾಪಕ ರಮೇಶ್ ಮೈಸೂರು, 'ಈ ಸಿನಿಮಾದ ಶೂಟಿಂಗ್ ಶೇ.80ರಷ್ಟು ಪೂರ್ಣಗೊಂಡ ಮೇಲೆ ನನಗೆ ಇಷ್ಟವಾಗಿ ಅದನ್ನು ಖರೀದಿಸಿದೆ. ನನಗೆ ಆಗ ಆಗಿದ್ದ ಅನುಭವ ಈಗ ಪ್ರೇಕ್ಷಕರಿಗೂ ಆಗಿ ಅದನ್ನವರು ಹೇಳಿಕೊಳ್ಳುತ್ತಿದ್ದಾರೆ. ಒಬ್ಬರು ನನಗೆ, 'ಹರಿ ಹರ ಬ್ರಹ್ಮ ಬಂದರೂ, ಸೆಕೆಂಡ್ ಹಾಫ್‌ನಲ್ಲಿ ಆ ಮಿಸ್ಟರಿ ಮ್ಯಾನ್ ಯಾರೆಂದು ಹೇಳಲು ಆಗಲ್ಲ' ಎಂದಿದ್ದಾರೆ. ಅಷ್ಟರಮಟ್ಟಿಗೆ 'ಮೋಡ ಕವಿದ ವಾತಾವರಣ' ಸಿನಿಮಾ ಜನರನ್ನು ಎಂಗೇಜ್ ಮಾಡಿದೆ' ಎಂದಿದ್ದಾರೆ.

'ಲವ್ ಸ್ಟೋರಿಯಲ್ಲಿ ಇಷ್ಟು ಥ್ರಿಲ್ಲಿಂಗ್ ಅನುಭವ ಇರುತ್ತದೆ ಎಂಬುದನ್ನು ಪ್ರೇಕ್ಷಕರು ನಿರೀಕ್ಷೆಯೇ ಮಾಡಿರಲಿಲ್ಲ, ಅವರಿಗೂ ಯಾವ ಥರದ ಸಿನಿಮಾ ಬೇಕೆಂದು ತಿಳಿದಿರಲ್ಲ. ಆದರೆ ಇಂಥ ಚಿತ್ರ ಬಂದಾಗ ಅದನ್ನವರು ಮಿಸ್ ಮಾಡಿಕೊಳ್ಳುವುದಿಲ್ಲ. ಇನ್ನೊಬ್ಬರು ಈ ಸಿನಿಮಾವನ್ನು 'ಥ್ರಿಲ್ಲರ್ ಮುಂಗಾರು ಮಳೆ' ಎಂದು ಕರೆಯಬಹುದು ಎಂದರು. ಇದನ್ನು ನೋಡಿದವರೆಲ್ಲಾ ಚೆನ್ನಾಗಿದೆ ಎನ್ನುವ ರಿವ್ಯೂ ನೀಡುತ್ತಿದ್ದಾರೆ. ಇಂಟರ್ವಲ್‌ಗೆ ಮೊದಲು ಮಳೆ, ರೊಮ್ಯಾನ್ಸ್ ನೋಡುತ್ತಿದ್ದವರಿಗೆ ಈ ಸಿನಿಮಾದ ಸೆಕೆಂಡ್ ಹಾಫ್‌ನಲ್ಲಿ ಈ ರೀತಿ ಸೀಟಿನ ತುದಿಗೆ ಕೂರಿಸುವ ಟ್ವಿಸ್ಟ್ ಇರುತ್ತದೆ ಎನ್ನುವ ಊಹೆ ಕೂಡ ಇರುವುದಿಲ್ಲ, ಅದೀಗ ತುಂಬಾ ಮಜಾ ಕೊಡುತ್ತಿದೆ' ಎಂದು ಹೇಳಿದ್ದಾರೆ ನಿರ್ಮಾಪಕ ರಮೇಶ್. ■

> 'ಮೋಡ ಕವಿದ ವಾತಾವರಣ' ಸಿನಿಮಾ ಬಿಡುಗಡೆಯಾದ ಮೇಲೆ ಅದರ ಓಟಿಟಿ ರೈಟ್ಸ್ ಹಾಗೂ ಸ್ಯಾಟಲೈಟ್ಸ್ ರೈಟ್ಸ್‌ಗೆ ಬೇಡಿಕೆ ಬಂದಿದೆ. ಫ್ಯಾಮಿಲಿ ಪ್ರೇಕ್ಷಕರಿಗೆ ಒಂದು ದೊಡ್ಡ ಸಿನಿಮಾ ನೋಡಿದ ಅನುಭವವು ಇದರ ಸೆಕೆಂಡ್ ಹಾಫ್ ನೋಡಿದ ಮೇಲೆ ಆಗಿದೆ. ಈಗೀಗ ಓಟಿಟಿಗೆ ಫ್ಯಾಮಿಲಿಗಳು ಹೊಂದಿಕೊಳ್ಳುತ್ತಿವೆ. ಆದರೆ, ಅದಕ್ಕೂ ಮೀರಿದ ಅನುಭವ ಈ ಚಿತ್ರದಿಂದ ಸಿಕ್ಕಿದೆ ಎಂದೂ ಹೇಳಿದ್ದಾರೆ. ಇದರ ಕಥೆ ಯುವಜನಾಂಗದವರದ್ದಾಗಿದ್ದು, ಇಂಥ ಥ್ರಿಲ್ಲಿಂಗ್ ಲವ್ ಸ್ಟೋರಿ ನೋಡಿ ತುಂಬಾ ದಿನಗಳಾಗಿವೆ ಎಂಬಂಥ ಪ್ರತಿಕ್ರಿಯೆಗಳು ಬರುತ್ತಿವೆ.
>
>
>
> -ರಮೇಶ್ ಮೈಸೂರು । ನಿರ್ಮಾಪಕ

ಅಂದಗಾತಿಯರಿಗೆ ದುಪಟ್ಟಾ ಸೀರೆ

ಎಡ ಭುಜದ ಮೇಲೆ ಕಂಗೊಳಿಸುವ ಸೀರೆಯ ಸೆರಗಿನ ಅಂದಕ್ಕೆ ಪೈಪೋಟಿ ನೀಡಲು ಈಗ ಬಲ ಭುಜದ ಮೇಲೆ ಕುಳಿತು ಸೊಬಗು ಬೀರುವ ದುಪಟ್ಟಾ ಸೀರೆ ತಯಾರಾಗಿದೆ. ಇದರ ಸೊಬಗು ಯುವತಿಯರನ್ನು ಬಹುವಾಗಿ ಆಕರ್ಷಿಸಿದೆ.

ಶುಭಾ ವಿಕಾಸ್
shubha.hegde@timesofindia.com

ಲವಲVK Fashion ಗುರು

ಸೀರೆ ಹಾಗೂ ದುಪಟ್ಟಾ ಪರಸ್ಪರ ಬೇರೆಯೇ. ಆದರೆ ಈಗ ಅವೆರಡರ ಸಂಯೋಜನೆಯೊಂದಿಗೆ ಗಮನ ಸೆಳೆದಿದೆ ದುಪಟ್ಟಾ ಸೀರೆ. ಸಾಂಪ್ರದಾಯಿಕ ಚೌಕಟ್ಟನ್ನು ಉಳಿಸಿಕೊಂಡು ಆಧುನಿಕ ಸ್ಪರ್ಶ ಪಡೆದು ಆಗಾಗ ಗಮನ ಸೆಳೆಯುವ ಸೀರೆಗೆ ಈಗ ದುಪಟ್ಟಾ ಮೆರುಗು. ಈ ಮೂಲಕ ದುಪಟ್ಟಾ ಸೀರೆ ಸದ್ಯಕ್ಕೆ ಫ್ಯಾಷನ್ ಲೋಕದ ಸಡಗರ. ಸೀರೆಗೆ ದುಪಟ್ಟಾವನ್ನು ಕಲಾತ್ಮಕವಾಗಿ ಜೋಡಿಸುವ ಶೈಲಿ ಈಗ ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿದೆ. ಕಾನ್ಸ್ ಫಿಲ್ಮ್ ಫೆಸ್ಟಿವಲ್‌ನ ರೆಡ್ ಕಾರ್ಪೆಟ್‌ನಿಂದ ಹಿಡಿದು ಬಾಲಿವುಡ್ ಸಿನಿಮಾ ಪ್ರಚಾರ ಕಾರ್ಯಕ್ರಮಗಳವರೆಗೆ, ಇನ್‌ಸ್ಟಾಗ್ರಾಮ್ ರೀಲ್‌ಗಳವರೆಗೆ ಈಗ ದುಪಟ್ಟಾ ಸೀರೆಯದ್ದೇ ಹವಾ.

ಸೆಲೆಬ್ರಿಟಿ ಸ್ಟೈಲ್

ಇತ್ತೀಚೆಗೆ ನಟಿ ಜಾಹ್ನವಿ ಕಪೂರ್ ತಿಳಿ ನೀಲಿ ಬಣ್ಣದ ಷಿಫಾನ್ ಸೀರೆ ಧರಿಸಿದ್ದರು. ಅದಕ್ಕೆ ಅವರು ಮ್ಯಾಚ್ ಮಾಡಿದ್ದ ದುಪಟ್ಟಾ 90ರ ದಶಕದ ಬಾಲಿವುಡ್ ನಾಯಕಿಯರ ರೊಮ್ಯಾಂಟಿಕ್ ಹಾಗೂ ಕ್ಲಾಸಿಕ್ ವೈಬ್ ನೆನಪಿಸುವಂತಿತ್ತು. ರಿಯಾಲಿಟಿ ಶೋವೊಂದರಲ್ಲಿ ನಟಿ ಮೇಘನಾ ರಾಜ್ ಸೀರೆಯೊಂದಿಗೆ ದುಪಟ್ಟಾ ಮ್ಯಾಚ್ ಮಾಡಿದ್ದರು. ಇನ್ನೂ ಹಲವು ನಟಿಯರು ಈ ಸ್ಟೈಲ್‌ನಲ್ಲಿ ಮೋಡಿ ಮಾಡಿದ್ದಾರೆ. ಈಗ ಇದೇ ಸ್ಟೈಲ್ ಜನಸಾಮಾನ್ಯರನ್ನು ತಲುಪಿದ್ದು, ಸೀರೆ ಇನ್ನಷ್ಟು ಆಕರ್ಷಕವಾಗಿದೆ.

ಫ್ಯೂಷನ್ ಲುಕ್

ದುಪಟ್ಟಾ ಸೀರೆಯಲ್ಲಿ ಸೀರೆಯ ಗಾಂಭೀರ್ಯವೂ ಇರುತ್ತದೆ, ದುಪಟ್ಟಾದ ರಾಯಲ್ ಲುಕ್ ಕೂಡ ಸೇರಿಕೊಳ್ಳುತ್ತದೆ. ಇದರಲ್ಲಿ ಹಲವು ವಿಧಗಳಿವೆ. ಈ ಪೈಕಿ ಡಬಲ್ ಪಲ್ಲು ಸ್ಟೈಲ್ ಸೀರೆಯ ಸೆರಗನ್ನು ಒಂದು ಹೆಗಲ ಮೇಲೆ ಹಾಕಿ ಇನ್ನೊಂದು ಹೆಗಲಿನಿಂದ ದುಪಟ್ಟಾವನ್ನು ಕೆಳಗಿಳಿಸಿ ಸೀರೆಯ ನೆರಿಗೆಗಳ ನಡುವೆ ಸಿಕ್ಕಿಸುವ ವಿಧಾನ ರಾಯಲ್ ಮತ್ತು ರಿಚ್ ಲುಕ್ ನೀಡುತ್ತದೆ. ಸೀರೆಯ ಸೆರಗನ್ನು ಒಂದು ಕಡೆ ಹಾಕಿ ಮತ್ತೊಂದು ಕಡೆ ದುಪಟ್ಟಾವನ್ನು ಕುತ್ತಿಗೆಯ ಸುತ್ತ ಸ್ಟೈಲಿಶ್ ಆಗಿ ಸುತ್ತಿ ಅದಕ್ಕೆ ಸೊಂಟ ಪಟ್ಟಿ ಧರಿಸಿದರೆ ಇಂಡೋ-ವೆಸ್ಟರ್ನ್ ಫ್ಯೂಷನ್ ಲುಕ್ ನೀಡುತ್ತದೆ. ಸೀರೆಯನ್ನು ನೆರಿಗೆಗಳನ್ನಾಗಿ ಮಾಡಿ ಲಂಗದಂತೆ ಉಟ್ಟು ದುಪಟ್ಟಾವನ್ನು ಪ್ರತ್ಯೇಕವಾಗಿ ಸೆರಗಿನಂತೆ ಬಳಸುವುದರಿಂದ ಇದು ಸೀರೆಯನ್ನೇ ಲೆಹೆಂಗಾದಂತೆ ಪರಿವರ್ತಿಸುತ್ತದೆ. ಒಟ್ಟಿನಲ್ಲಿ ಸೀರೆಯನ್ನು ಒಂದೇ ಬಗೆಯಲ್ಲಿ ಉಡಲು ಬೇಸರ ಅಥವಾ ಒಂದೇ ಸೀರೆಯನ್ನು ಹಲವು ಬಾರಿ ಧರಿಸಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಇಷ್ಟವಿಲ್ಲ ಎಂದರೆ ಅದೇ ಸೀರೆಗೆ ದುಪಟ್ಟಾ ಟ್ವಿಸ್ಟ್ ಕೊಟ್ಟು ಹೊಸ ಫ್ಯಾಷನ್ ಸ್ಟೇಟ್‌ಮೆಂಟ್ ನೀಡಬಹುದು. ■

> ಸೀರೆ ಹಾಗೂ ದುಪಟ್ಟಾವನ್ನು ಒಟ್ಟಿಗೆ ಸೇರಿಸುವ ದುಪಟ್ಟಾ ಸೀರೆ ಕಲ್ಪನೆ ಇಂದಿನದ್ದಲ್ಲ, ರಾಣಿಯನ್ನು ಪ್ರತಿನಿಧಿಸುವ ಉಡುಗೆ ಇದು. ರಂಗಭೂಮಿಯಲ್ಲಿ ಈ ಪ್ರಯೋಗ ಹೆಚ್ಚು ನಡೆದಿದೆ. ಸಿರಿವಂತಿಕೆ ತೋರಿಸುವ ಸಿನಿಮಾ, ಧಾರಾವಾಹಿಗಳ ಪಾತ್ರದಲ್ಲೂ ಈ ಲುಕ್ ಸಹಜ. ದಕ್ಷಿಣ ಭಾರತದಲ್ಲಿ ಬಣ್ಣಗಳ ಸಂಯೋಜನೆ, ಫ್ಯಾಬ್ರಿಕ್ ಬಳಕೆಯಲ್ಲಿ ಅದ್ದೂರಿತನ ಕಂಡುಬಂದರೆ ಉತ್ತರ ಭಾರತದಲ್ಲಿ ಇದನ್ನೇ ಇನ್ನಷ್ಟು ಮೃದು ಬಣ್ಣ, ಸರಳ ರೂಪದಲ್ಲಿ ಉಡುತ್ತಾರೆ. ವಧುವಿನ ಅಲಂಕಾರದಲ್ಲಿ ಸಾಂಪ್ರದಾಯಿಕವಾಗಿದ್ದ ದುಪಟ್ಟಾ ಸೀರೆ ಈಗ ಇನ್ನಷ್ಟು ಆಧುನಿಕ ರೂಪ ಪಡೆದಿದೆ.
>
>
>
> -ಮಾನಸ ಲಿಂಗಯ್ಯ। ವಸ್ತ್ರ ವಿನ್ಯಾಸಕಿ

ಸ್ಟೈಲ್ ಮಾಡಿ

ಹಳೆಯ ಪ್ಲೈನ್ ಸೀರೆಗೆ ಗ್ರ್ಯಾಂಡ್ ಬನಾರಸಿ ಅಥವಾ ಹೆವಿ ಎಂಬ್ರಾಯ್ಡರಿ ದುಪಟ್ಟಾ ಸೇರಿಸಿದರೆ ಇಡೀ ಔಟ್‌ಫಿಟ್ ಹೊಸ ರೂಪ ಪಡೆಯುತ್ತದೆ. ದುಪಟ್ಟಾವನ್ನು ರಾಯಲ್ ಕೇಪ್ ತರಹ ಎರಡೂ ಹೆಗಲ ಮೇಲಿಂದ ಹಿಂದಕ್ಕೆ ಬಿಡಬಹುದು. ಷಿಫಾನ್ ಅಥವಾ ಆರ್ಗಾಂಜಾ ದುಪಟ್ಟಾಗಳು ಇದಕ್ಕೆ ಸೂಕ್ತ. ದುಪಟ್ಟಾವನ್ನು ಒಂದು ಹೆಗಲಿಗೆ ಮಾತ್ರ ಪಿನ್ ಮಾಡಿ ಉಳಿದ ಭಾಗವನ್ನು ರಾಜಕುಮಾರಿಯ ಗೌನ್‌ನಂತೆ ನೆಲ ಸ್ಪರ್ಶಿಸಲು ಬಿಡಿ. ಈ ಲುಕ್ ಪಾರ್ಟಿಗಳಿಗೆ ಒಪ್ಪುತ್ತದೆ. ಹತ್ತಿ ಸೀರೆಗಳ ಜೊತೆ ಹಗುರವಾದ ಷಿಫಾನ್ ದುಪಟ್ಟಾವನ್ನು ಕುತ್ತಿಗೆಯ ಸುತ್ತ ಸ್ಕಾರ್ಫ್‌ನಂತೆ ಲೂಸ್ ಆಗಿ ಸುತ್ತಿಕೊಳ್ಳುವ ಸ್ಟೈಲ್ ಲಂಚ್ ಡೇಟ್ ಅಥವಾ ಸಣ್ಣ ಪುಟ್ಟ ಪೂಜೆಗಳಿಗೆ ಸೂಕ್ತವಾಗುತ್ತದೆ. ಈ ಶೈಲಿಯಲ್ಲಿ ದುಪಟ್ಟಾ ಹಗುರವಾಗಿರಬೇಕು.

ಉಡುಗೆ ತೊಡುಗೆಯಲ್ಲಿ ಜೇಡರ ಬಲೆ!

ಇದು ಸ್ಪೈಡರ್ ಮ್ಯಾನ್ ಫ್ಯಾಷನ್

ಬಬಿತಾ ಎಸ್.
babitha.salian@timesofindia.com

ಹಾಲಿವುಡ್‌ನ ಜನಪ್ರಿಯ 'ಸ್ಪೈಡರ್ ಮ್ಯಾನ್' ಸಿನಿಮಾ ಸರಣಿಗಳಿಂದ ಪ್ರೇರಿತಗೊಂಡ ವಿನ್ಯಾಸಗಳು ಈಗಾಗಲೇ ಫ್ಯಾಷನ್ ಲೋಕದಲ್ಲಿ ಹಾಸುಹೊಕ್ಕಾಗಿವೆ. ಆದರೆ ಈ ಫ್ಯಾಷನ್ ಇತ್ತೀಚಿನವರೆಗೆ ಸ್ಪೈಡರ್ ಮ್ಯಾನ್ ಪಾತ್ರಧಾರಿಗಳ ಪ್ರಿಂಟ್‌ಗಳಿರುವ ಟೀ ಶರ್ಟ್, ಜೇಡರ ಬಲೆಯ ರೇಖೆಗಳಿರುವ ನೀಲಿ ಮತ್ತು ಕೆಂಪು ಮಿಶ್ರಿತ ಬಣ್ಣದ ಜರ್ಕಿನ್, ಕ್ಯಾಪ್, ಮಾಸ್ಕ್, ಹೂಡಿಗಳಿಗೆ ಸೀಮಿತಗೊಂಡಿತ್ತು. ಇಂಥ ವಿನ್ಯಾಸದಲ್ಲಿ ತರುಣಿಯರಿಗೆ ಹೆಚ್ಚಿನ ಆಯ್ಕೆಗಳು ಇರಲಿಲ್ಲ, ಆದರೆ ಈ ಬಾರಿ 'ಸ್ಪೈಡರ್ ಮ್ಯಾನ್: ಬ್ರಾಂಡ್ ನ್ಯೂ ಡೇ' ಸಿನಿಮಾ ಬಿಡುಗಡೆಯಾಗುವ ಮುನ್ನವೇ ಆ ಥೀಮ್‌ನ ಉಡುಪುಗಳು ವೈರಲ್ ಆಗಿವೆ.

ಈ ಚಿತ್ರದ ನಾಯಕಿ ಝೆಂಡಾಯ ಈಗಾಗಲೇ ತಮ್ಮ ಸಿನಿಮಾಗಳ ಥೀಮ್‌ನಲ್ಲಿಯೇ ಉಡುಪುಗಳನ್ನು ಧರಿಸುವ ಮೆಥಡ್ ಡ್ರೆಸ್ಸಿಂಗ್‌ಗೆ ಹೆಸರಾಗಿದ್ದಾರೆ. ಈ ಬಾರಿಯೂ ಅವರು ಇದರ ಪ್ರಚಾರ ಕಾರ್ಯಕ್ರಮಗಳಲ್ಲಿ ಸ್ಪೈಡರ್ ಮ್ಯಾನ್ ಥೀಮ್‌ನ ಉಡುಪುಗಳು ಮಾತ್ರವಲ್ಲದೆ, ಆಭರಣಗಳನ್ನೂ ಧರಿಸಿ ಸ್ಟೈಲ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅವರ ಈ ಫ್ಯಾಷನ್ ಯುವತಿಯರನ್ನು ಆಕರ್ಷಿಸಿದ್ದು, ಈ ರೀತಿಯೂ ಸ್ಪೈಡರ್ ಮ್ಯಾನ್ ಮೇಲಿನ ಅಭಿಮಾನವನ್ನು ತೋರಿಸಿಕೊಳ್ಳಬಹುದು ಎಂಬುದನ್ನು ನಟಿ ಝೆಂಡಾಯ ತೋರಿಸಿದ್ದಾರೆ.

ಯುವಕರು ಹೆಚ್ಚಾಗಿ ಧರಿಸುತ್ತಿದ್ದ ಸ್ಪೈಡರ್ ಮ್ಯಾನ್ ಪ್ರಿಂಟ್‌ಖಚಿತ ಟೀ ಶರ್ಟ್ ಅನ್ನು ಈ ಬಾರಿ ನಟಿ ಝೆಂಡಾಯ ಬಹಳ ಸ್ಟೈಲಿಶ್ ಆಗಿ ಧರಿಸಿದ್ದಾರೆ. ಫ್ರಾನ್ಸ್‌ನಲ್ಲಿ ನಡೆದ ರೆಡ್ ಕಾರ್ಪೆಟ್ ಕಾರ್ಯಕ್ರಮದಲ್ಲಿ ಅವರು ವಿಂಟೇಜ್ ಲುಕ್‌ನ ಸ್ಪೈಡರ್ ಮ್ಯಾನ್ ಚಿತ್ತಾರಗಳಿದ್ದ ಕಪ್ಪು ಬಣ್ಣದ ಟೀ ಶರ್ಟ್ ಧರಿಸಿ ಅಚ್ಚರಿ ಮೂಡಿಸಿದ್ದಾರೆ. ರೋಮ್‌ನಲ್ಲಿ ಅವರು ಮೈತುಂಬಾ ಜೇಡರ ಬಲೆಯಂಥ ವಿನ್ಯಾಸವಿದ್ದ ಪಾಚಿ ಹಸಿರು ಬಣ್ಣದ ಗೌನ್ ಧರಿಸಿದ್ದಾರೆ. ಇನ್ನೊಂದು ಕಾರ್ಯಕ್ರಮದಲ್ಲಿ ಅವರು ತೆರೆದ ಬೆನ್ನಿಗೆ ಜೇಡರ ಬಲೆಯಂಥ ಸಂಕೀರ್ಣ ವಿನ್ಯಾಸದ ಬೆಳ್ಳಿಯ ಆಭರಣ ಧರಿಸಿದ್ದು ವಿಶೇ ಈ ಆಭರಣ ಲುಕ್ ವೈರಲ್ ಆಗಿದೆ. ■

RNI No. KARKAN/2016/71628
Vol. 11 Issue no. 179
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. " © All Rights Reserved. Reproduction in whole or part without permission is prohibited.

ಆಫ್ರಿಕಾದ 8ನೇ ತಂಡವಾಗಿ ಕಾಂಗೊ ನಾಕೌಟ್ ಪ್ರವೇಶ

ಗುಂಪು ಹಂತದ ಅಂತಿಮ ಪಂದ್ಯದಲ್ಲಿ ಉಜ್ಬೇಕಿಸ್ತಾನ ವಿರುದ್ಧ 3-1 ಅಂತರದಲ್ಲಿ ಗೆಲುವು

ನಾಕೌಟ್ ಹಂತಕ್ಕೆ ಪ್ರವೇಶ ಪಡೆದ ಕಾಂಗೊ ಆಟಗಾರರ ಸಂಭ್ರಮದ ಪರಿ.

ಅಟ್ಲಾಂಟಾ: ಸ್ಫೂರ್ತಿದಾಯಕ ಪ್ರದರ್ಶನ ನೀಡಿದ ಕಾಂಗೊ ಡಿಆರ್ ಪ್ರಸಕ್ತ ಫಿಫಾ ವಿಶ್ವಕಪ್‌ನಲ್ಲಿ ಆಫ್ರಿಕಾದ 8ನೇ ತಂಡವಾಗಿ ನಾಕೌಟ್ ಪ್ರವೇಶಿಸಿದ ಸಾಧನೆ ಮಾಡಿದೆ. ವಿಶ್ವಕಪ್ ಇತಿಹಾಸದಲ್ಲಿ ಆಫ್ರಿಕಾ ತಂಡಗಳು ಇಷ್ಟು ಸಂಖ್ಯೆಯಲ್ಲಿ ನಾಕೌಟ್ ತಲುಪಿದ್ದು ಇದೇ ಮೊದಲು. ಒಂದೇ ಆವೃತ್ತಿಯಲ್ಲಿ ಆಫ್ರಿಕಾದ 2 ದೇಶಗಳು ಅರ್ಹತೆ ಗಳಿಸಿದ್ದು ಹಿಂದಿನ ದಾಖಲೆ.

ಶನಿವಾರ ರಾತ್ರಿ ನಡೆದ 'ಕೆ' ಗುಂಪಿನ ಪಂದ್ಯದಲ್ಲಿ ಕಾಂಗೊ ತಂಡ 3-1 ಗೋಲ್‌ಗಳ ಅಂತರದಿಂದ ಉಜ್ಬೇಕಿಸ್ತಾನ ತಂಡವನ್ನು ಪರಾಭವಗೊಳಿಸಿತು. ಕಾಂಗೊ ಪರ ಯೋನೆ ವಿಸ್ಸಾ (68ನೇ ನಿ.ಪೆನಾಲ್ಟಿ, 90+1ನೇ ನಿ.) ಮತ್ತು ಫಿಸ್ಟನ್ ಮಾಯೆಲ್ (78ನೇ ನಿ.) ಗೋಲ್ ಗಳಿಸಿದರೆ, ಉಜ್ಬೇಕಿಸ್ತಾನ ತಂಡದ ಪರ ಎಲ್ಡಾರ್ (10ನೇ ನಿ.) ಏಕೈಕ ಗೋಲ್ ಗಳಿಸಿದರು. 17 ದಿನಗಳ ಸ್ಪರ್ಧೆಯ ಬಳಿಕ ಮೊರಾಕ್ಕೊ, ದಕ್ಷಿಣ ಆಫ್ರಿಕಾ, ಸೆನೆಗಲ್, ಐವರಿ ಕೋಸ್ಟ್, ಘಾನಾ, ಕೇಪ್ ವರ್ದೆ, ಈಜಿಪ್ಟ್ ಮತ್ತು ಕಾಂಗೊ 32ನೇ ಸುತ್ತಿಗೆ ಮುನ್ನಡೆದ ತಂಡಗಳು. ಆಸ್ಟ್ರಿಯಾ ವಿರುದ್ಧ 3-3ರಲ್ಲಿ ಡ್ರಾ ಸಾಧಿಸಿದ ಅಲ್ಜೀರಿಯಾ ಕೂಡ ಅಂತಿಮ 32ರ ಘಟ್ಟಕ್ಕೆ ಮುನ್ನಡೆದ ಆಫ್ರಿಕಾ ದೇಶವಾಗಿದೆ.

ನಾಲ್ಕು ವರ್ಷಗಳ ಹಿಂದೆ ಕತಾರ್‌ನಲ್ಲಿ ನಡೆದ ವಿಶ್ವಕಪ್‌ನಲ್ಲಿ ಸೆಮಿಫೈನಲ್ ತಲುಪಿದ ಮೊದಲ ಆಫ್ರಿಕಾ ತಂಡ ಎಂಬ ಗೌರವ ಪಡೆದಿರುವ ಮೊರಾಕ್ಕೊ, ಈ ಬಾರಿ ತನ್ನ ಹಿಂದಿನ ಸಾಧನೆಯನ್ನು ಮೀರಿ ನಿಲ್ಲುವ ಗುರಿ ಹೊಂದಿದೆ. ಗುಂಪು ಹಂತದಲ್ಲಿ ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡದ ವಿರುದ್ಧ 1-1ರಲ್ಲಿ ಡ್ರಾ ಸಾಧಿಸಿರುವ ಮೊರಾಕ್ಕೊ ಆಫ್ರಿಕಾದ ಬಲಿಷ್ಠ ತಂಡಗಳಲ್ಲಿ ಒಂದಾಗಿದೆ. 2030ರ ವಿಶ್ವಕಪ್‌ಗೆ ಸಹ ಆತಿಥ್ಯ ವಹಿಸಲಿರುವ ಮೊರಾಕ್ಕೊ, ಮುಂದಿನ ಸುತ್ತಿನಲ್ಲಿ ನೆದರ್ಲೆಂಡ್ಸ್ ತಂಡದ ಕಠಿಣ ಸವಾಲು ಎದುರಿಸಲಿದೆ.

ಕೇವಲ ಆರು ಆಫ್ರಿಕಾ ದೇಶಗಳು ಮಾತ್ರ ವಿಶ್ವಕಪ್‌ನಲ್ಲಿ ನಾಕೌಟ್ ಮೆಟ್ಟಿಲೇರಿವೆ. 2014 ಮತ್ತು 2022ರಲ್ಲಿ ತಲಾ ಎರಡು ತಂಡಗಳು ಈ ಸಾಧನೆ ಮಾಡಿದ್ದು ಶ್ರೇಷ್ಠ ಎನಿಸಿದೆ. ಕೇಪ್ ವರ್ದೆ ಮತ್ತು ಕಾಂಗೊ ತಂಡಗಳು 32ನೇ ಸುತ್ತಿನಲ್ಲಿ ಸ್ಥಾನ ಪಡೆಯುವುದರೊಂದಿಗೆ ಆಫ್ರಿಕಾ ದೇಶಗಳ ಫುಟ್ಬಾಲ್ ಶಕ್ತಿ ಏನೆಂಬುದನ್ನು ಸಾಬೀತುಪಡಿಸಿವೆ. ಕಾಂಗೊ ಮುಂದಿನ ಸುತ್ತಿನಲ್ಲಿ ಬಲಿಷ್ಠ ಇಂಗ್ಲೆಂಡ್ ತಂಡದ ಕಠಿಣ ಸವಾಲು ಎದುರಿಸಲಿದೆ.

ಪಂದ್ಯದ ನಂತರ ಪ್ರತಿಕ್ರಿಯಿಸಿದ ಫಾರ್ವರ್ಡ್ ಆಟಗಾರ ಮಾಯೆಲೆ, ''ಕಾಂಗೊಗೆ ಇದು ನಿಜವಾಗಿಯೂ ಐತಿಹಾಸಿಕ ಕ್ಷಣ. ವಿಶ್ವಕಪ್‌ನಲ್ಲಿ ಮೊದಲ ಗೆಲುವು ಮತ್ತು ಮೊದಲ ನಾಕೌಟ್ ಹಂತ. ನಮ್ಮ ತಂಡದ ಸಾಧನೆಯು ದೇಶದೆಲ್ಲೆಡೆ ಸಂಭ್ರಮವನ್ನುಂಟು ಮಾಡಿದೆ. ನಾವು ಕಾಂಗೊ ಪ್ರಜೆಗಳಾಗಿರುವುದಕ್ಕೆ ಹೆಮ್ಮೆಪಡುತ್ತೇವೆ,'' ಎಂದು ಹೇಳಿದರು.

ಲಯೊನೆಲ್ ಮೆಸ್ಸಿ ಅಪೂರ್ವ ದಾಖಲೆ

ಡಲ್ಲಾಸ್: ಅರ್ಜೆಂಟೀನಾ ತಂಡದ ಸ್ಟಾರ್ ಆಟಗಾರ ಲಯೊನೆಲ್ ಮೆಸ್ಸಿ ಪ್ರಸಕ್ತ ವಿಶ್ವಕಪ್‌ನಲ್ಲಿ ವೈಯಕ್ತಿಕ ದಾಖಲೆಗಳನ್ನು ವಿಸ್ತರಿಸಿದ್ದಾರೆ. ಶನಿವಾರ ರಾತ್ರಿ ನಡೆದ ಗುಂಪು ಹಂತದ ತನ್ನ ಅಂತಿಮ ಪಂದ್ಯದಲ್ಲಿ ಪದಾರ್ಪಣೆ ತಂಡ ಜೋರ್ಡಾನ್ ವಿರುದ್ಧ ಗೋಲ್ ಗಳಿಸುವುದರೊಂದಿಗೆ ವಿಶ್ವಕಪ್‌ನ ಸತತ 7 ಪಂದ್ಯಗಳಲ್ಲಿ ಗೋಲ್ ಗಳಿಸಿದ ಮೊದಲ ಆಟಗಾರ ಎಂಬ ದಾಖಲೆ ಸೃಷ್ಟಿಸಿದ್ದಾರೆ. ಇದು ಅವರ ವಿಶ್ವಕಪ್‌ನ 19ನೇ ಹಾಗೂ ಹಾಲಿ ಆವೃತ್ತಿಯಲ್ಲಿ 6ನೇ ಗೋಲಾಗಿದೆ.

ಪಂದ್ಯದ ಆರಂಭಿಕ ಹಂತದಿಂದ ಹೊರಗುಳಿದಿದ್ದ ಮೆಸ್ಸಿ, ದ್ವಿತೀಯಾರ್ಧದ 80ನೇ ನಿಮಿಷದಲ್ಲಿ ಫ್ರೀ ಕಿಕ್ ಮೂಲಕ ಗೋಲ್ ಗಳಿಸಿ ತಂಡ ಅಜೇಯ ದಾಖಲೆಗೆ ನೆರವಾದರು. ಇದು ಅವರ ವೃತ್ತಿ ಬದುಕಿನ 72ನೇ ಹಾಗೂ ಅರ್ಜೆಂಟೀನಾ ಪರ 12ನೇ ಫ್ರೀ ಕಿಕ್ ಗೋಲಾಗಿದೆ. 39 ವರ್ಷದ ಮೆಸ್ಸಿ ಸದ್ಯ 123 ಅಂತಾರಾಷ್ಟ್ರೀಯ ಗೋಲ್ ಗಳಿಸಿದ್ದು, ಸಾರ್ವಕಾಲಿಕ ಗೋಲ್ ಗಳಿಕೆಯ ಪಟ್ಟಿಯಲ್ಲಿ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ(145 / 202 ಪಂದ್ಯ) ನಂತರದ ಸ್ಥಾನದಲ್ಲಿದ್ದಾರೆ. ವಿಶ್ವಕಪ್‌ನ ಸತತ ಆರು ಪಂದ್ಯಗಳಲ್ಲಿ ಗೋಲ್ ಗಳಿಸಿದ ಮೂವರಲ್ಲಿ ಮೆಸ್ಸಿ ಒಬ್ಬರಾಗಿದ್ದರು. ಫ್ರಾನ್ಸ್‌ನ ಸ್ಟ್ರೈಕರ್ ಫಾಂಟೈನ್ ಮತ್ತು ಬ್ರೆಜಿಲ್‌ನ ಜೈರ್‌ಜಿನ್ಹೋ ಉಳಿದಿಬ್ಬರು.

3-1ರಲ್ಲಿ ಜೋರ್ಡಾನ್ ತಂಡವನ್ನು ಮಣಿಸಿದ ಕಳೆದ ಬಾರಿಯ ಚಾಂಪಿಯನ್ ಅರ್ಜೆಂಟೀನಾ ತಂಡ 32ನೇ ಸುತ್ತಿನಲ್ಲಿ ಪದಾರ್ಪಣೆ ತಂಡ ಕೇಪ್ ವರ್ದೆ ತಂಡವನ್ನು ಎದುರಿಸಲಿದೆ.

ಯುಎಸ್ ಓಪನ್ ಬ್ಯಾಡ್ಮಿಂಟನ್ ಫೈನಲ್‌ಗೆ ಕಿಡಂಬಿ ಶ್ರೀಕಾಂತ್

ಪುಲ್ಲೆರ್ಟನ್(ಯುಎಸ್‌ಎ): ಮೂರು ಗೇಮ್‌ಗಳ ಜಿದ್ದಾಜಿದ್ದಿನ ಹೋರಾಟದಲ್ಲಿ ಜಪಾನ್‌ನ ಯುಡೈ ಒಕಿಮೊಟೊ ಅವರನ್ನು ಹತ್ತಿಕ್ಕಿದ ಭಾರತದ ಸ್ಟಾರ್ ಆಟಗಾರ ಕಿಡಂಬಿ ಶ್ರೀಕಾಂತ್, ಇಲ್ಲಿ ನಡೆಯುತ್ತಿರುವ ಯುಎಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ತಲುಪಿದ್ದಾರೆ.

2021ರ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ ಶ್ರೀಕಾಂತ್, ಸೆಮಿಫೈನಲ್ ಪಂದ್ಯಲ್ಲಿ 22-20, 15-21, 21-19 ಗೇಮ್‌ಗಳಿಂದ ವಿಶ್ವದ 33ನೇ ರ‍್ಯಾಂಕ್‌ನ ಒಕಿಮೊಟೊ ವಿರುದ್ಧ 72 ನಿಮಿಷಗಳ ಹೋರಾಟದಲ್ಲಿ ಗೆದ್ದು ಬೀಗಿದರು. ಇದರೊಂದಿಗೆ ಹಾಲಿ ಋತುವಿನಲ್ಲಿ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿದರು.

ಶ್ರೀಕಾಂತ್ ಪ್ರಶಸ್ತಿಗಾಗಿ ವಿಶ್ವದ ಮಾಜಿ ನಂ.1 ಆಟಗಾರ ಚೈನೀಸ್ ತೈಪೆಯ ಸು ಯಿ ಯಾಂಗ್ ಅವರ ಸವಾಲು ಎದುರಿಸಲಿದ್ದಾರೆ. ಈ ಮಧ್ಯೆ, ರೌನಕ್ ಚೌಹಾಣ್ ಉಪಾಂತ್ಯದಲ್ಲಿ ಮುಗ್ಗರಿಸಿದ ಕಾರಣ ಚೊಚ್ಚಲ ಸೂಪರ್ 300 ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ಕನಸು ಭಗ್ನಗೊಂಡಿದೆ.

ಭಾರತ-ಶ್ರೀಲಂಕಾ 'ಎ' ನಡುವಿನ ಪಂದ್ಯ ಡ್ರಾ

ಗಾಲೆ(ಶ್ರೀಲಂಕಾ): ಆರಂಭಿಕ ಟೆಸ್ಟ್‌ನ 2ನೇ ಇನಿಂಗ್ಸ್‌ನಲ್ಲಿ ದೇವದತ್ ಪಡಿಕ್ಕಲ್ ಸಮಯೋಚಿತ ಅರ್ಧ ಶತಕ ಗಳಿಸಿದ ಪರಿಣಾಮ ಭಾರತ 'ಎ' ತಂಡ ಭಾನುವಾರ ಇಲ್ಲಿ ಮುಕ್ತಾಯಗೊಂಡ ಶ್ರೀಲಂಕಾ 'ಎ' ವಿರುದ್ಧದ ಪಂದ್ಯವನ್ನು ಡ್ರಾ ಮಾಡಿಕೊಂಡಿದೆ.

ಶ್ರೀಲಂಕಾ ಒಡ್ಡಿದ್ದ 312 ರನ್‌ಗಳ ಗುರಿ ಬೆನ್ನಟ್ಟಿದ್ದ ಭಾರತ, ವಿಕೆಟ್ ನಷ್ಟವಿಲ್ಲದೆ 48 ರನ್‌ಗಳಿಂದ ದ್ವಿತೀಯ ಇನಿಂಗ್ಸ್ ಮುಂದುವರಿಸಿತು. ತಂಡದ ಪರ ಪಡಿಕ್ಕಲ್ (67) ಮತ್ತು ಆಯುಷ್ ಪಾಂಡೆ(38), ಹರ್ಷ್ ದುಬೆ (29) ಕೊಡುಗೆ ನೀಡಿದರು. ಇವರ ಸಾಹಸದಿಂದ ಭಾರತ 57 ಓವರ್‌ಗಳಲ್ಲಿ 8 ವಿಕೆಟ್‌ಗೆ 189 ರನ್ ಗಳಿಸಿದ್ದಾಗ ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ಸಮ್ಮತಿಸಲಾಯಿತು. ಶ್ರೀಲಂಕಾ ಪರ ಎಡಗೈ ಸ್ಪಿನ್ನರ್ ದುಲಿಮ್ ಸುದೀರಾ 49ಕ್ಕೆ 5 ವಿಕೆಟ್ ಪಡೆದು ಮಿಂಚಿದರು.

ನಿವೃತ್ತಿಗೆ ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ ನಿರ್ಧಾರ

ನ್ಯಾಟಿಂಗ್‌ಹ್ಯಾಮ್: ನ್ಯೂಜಿಲೆಂಡ್ ವಿರುದ್ಧದ ಮೂರನೇ ಟೆಸ್ಟ್ ನಂತರ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳುವುದಾಗಿ ಇಂಗ್ಲೆಂಡ್ ಕ್ರಿಕೆಟ್ ತಂಡದ ನಾಯಕ ಬೆನ್ ಸ್ಟೋಕ್ಸ್ ಭಾನುವಾರ ಹೇಳಿದ್ದಾರೆ.

ಟ್ರೆಂಟ್ ಬ್ರಿಡ್ಜ್‌ನಲ್ಲಿ ನಡೆಯುತ್ತಿರುವ ಟೆಸ್ಟ್‌ನ 4ನೇ ದಿನದ ಮಧ್ಯೆದಲ್ಲಿ ಅವರು ಈ ಘೋಷಣೆ ಮಾಡಿದ್ದಾರೆ. 2019ರಲ್ಲಿ 50 ಓವರ್‌ಗಳ ವಿಶ್ವಕಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಜಯ ಗಳಿಸಿದ ಇಂಗ್ಲೆಂಡ್ ತಂಡದ ಪ್ರಮುಖ ಆಟಗಾರನಾಗಿದ್ದ ಸ್ಟೋಕ್ಸ್, 2022ರ ಟಿ20 ವಿಶ್ವಕಪ್ ವಿಜೇತ ಇಂಗ್ಲೆಂಡ್ ತಂಡದ ಸದಸ್ಯರೂ ಆಗಿದ್ದಾರೆ.

ಸದ್ಯ 121 ಟೆಸ್ಟ್ ಪಂದ್ಯಗಳನ್ನಾಡಿರುವ ಅವರು, ಗರಿಷ್ಠ 258 ಸೇರಿದಂತೆ 7228 ರನ್ ಗಳಿಸಿದ್ದಾರೆ. ಇದರಲ್ಲಿ 14 ಶತಕ ಹಾಗೂ 37 ಅರ್ಧ ಶತಕಗಳು ಸೇರಿವೆ. ಅವರು 2023 ಮತ್ತು 2022ರಲ್ಲಿ ಕ್ರಮವಾಗಿ ಕೊನೆಯದಾಗಿ ಏಕದಿನ ಮತ್ತು ಟಿ20 ಪಂದ್ಯಗಳನ್ನಾಡಿದ್ದಾರೆ.

ಆಂಗ್ಲರ ಪರ ಹ್ಯಾರಿ ಕೇನ್ ಸಾರ್ವಕಾಲಿಕ ದಾಖಲೆ

ನ್ಯೂಜೆರ್ಸಿ: ಪನಾಮ ತಂಡದ ವಿರುದ್ಧ ಗೋಲ್ ದಾಖಲಿಸಿದ ಹ್ಯಾರಿ ಕೇನ್, ಇಂಗ್ಲೆಂಡ್ ಪರ ಅತ್ಯಧಿಕ ಗೋಲು ಗಳಿಸಿದ ಆಟಗಾರರಾಗಿ ಹೊರಹೊಮ್ಮಿದರು.

ಶನಿವಾರ ರಾತ್ರಿ ನಡೆದ 'ಎಲ್' ಗುಂಪಿನ ಪಂದ್ಯದಲ್ಲಿ ಇಂಗ್ಲೆಂಡ್ ತಂಡ 2-0 ಅಂತರದಲ್ಲಿ ಪನಾಮ ತಂಡವನ್ನು ಮಣಿಸಿತು. ಪಂದ್ಯದ 67ನೇ ನಿಮಿಷದಲ್ಲಿ ಗೋಲ್ ಗಳಿಸಿದ ಕೇನ್, ವಿಶ್ವಕಪ್‌ನಲ್ಲಿ ವೈಯಕ್ತಿಕ 11ನೇ ಗೋಲ್ ಗಳಿಸಿದ ಸಾಧನೆ ಮಾಡಿದರು. ಈ ಮೂಲಕ 10 ಗೋಲ್ ಗಳಿಸಿ ಸಾರ್ವಕಾಲಿಕ ದಾಖಲೆ ಹೊಂದಿದ್ದ ಗ್ಯಾರಿ ಲೈನ್ಕರ್ ಅವರ ದಾಖಲೆಯನ್ನು ಮುರಿದರು. ಇಂಗ್ಲೆಂಡ್ ಪರ 82ನೇ ಅಂತಾರಾಷ್ಟ್ರೀಯ ಗೋಲ್ ಗಳಿಸಿದ ಕೇನ್, ಹಾಲಿ ಟೂರ್ನಿಯ ಗುಂಪು ಹಂತದಲ್ಲಿ ಸದ್ಯ 3 ಗೋಲ್ ಗಳಿಸಿದ್ದು, ನಾಕೌಟ್ ಹಂತದಲ್ಲೂ ತಂಡದ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದಾರೆ.

ಮಿಂಚದ ಕ್ರಿಸ್ಟಿಯಾನೊ ರೊನಾಲ್ಡೊ

ಅಂಕ ಹಂಚಿಕೊಂಡ ಪೋರ್ಚುಗಲ್-ಕೊಲಂಬಿಯಾ

ನಿರಾಸೆಯಲ್ಲಿ ಕ್ರಿಸ್ಟಿಯಾನೊ ರೊನಾಲ್ಡೊ

ಮಯಾಮಿ: ತಂಡದ ಕಾರ್ಯತಂತ್ರಗಳನ್ನು ಪರಿಪೂರ್ಣವಾಗಿ ಕಾರ್ಯಗತಗೊಳಿಸಿದ ಕೊಲಂಬಿಯಾ ತಂಡ ಫಿಫಾ ವಿಶ್ವಕಪ್‌ನ ತನ್ನ ಅಂತಿಮ ಗುಂಪು ಪಂದ್ಯದಲ್ಲಿ ಪ್ರಬಲ ಪೋರ್ಚುಗಲ್ ತಂಡದ ವಿರುದ್ಧ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು. ತಾರಾ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ, ನೀರಸ ಪ್ರದರ್ಶನ ನೀಡಿದ ಪರಿಣಾಮ ಪೂರ್ಣ ಅಂಕಗಳಿಸಲು ಪೋರ್ಚುಗಲ್ ವಿಫಲಗೊಂಡಿತು. ಹೀಗಾಗಿ ಅಜೇಯ ದಾಖಲೆಯೊಂದಿಗೆ ಒಟ್ಟು 7 ಅಂಕಗಳನ್ನು ಕಲೆಹಾಕಿದ ಕೊಲಂಬಿಯಾ ತಂಡ 'ಕೆ' ಗುಂಪಿನ ಅಗ್ರಸ್ಥಾನಿಯಾಗಿ ಮುಂದಿನ ಹಂತಕ್ಕೆ ಮುನ್ನಡೆಯಿತು. ಪೋರ್ಚುಗಲ್ ಕೂಡ ಎರಡು ಮತ್ತು ಒಂದು ಗೆಲುವಿನೊಂದಿಗೆ ಗುಂಪಿನ ಎರಡನೇ ತಂಡವಾಗಿ ಅಂತಿಮ 32ರ ಸುತ್ತಿಗೆ ಲಗ್ಗೆ ಹಾಕಿತು.

ಪಂದ್ಯದ ಬಳಿಕ ಪ್ರತಿಕ್ರಿಯಿಸಿದ ಕೊಲಂಬಿಯಾ ಕೋಚ್ ನೇಸ್ಟೋರ್ ಲಾರೆಂಜೊ, ''ಪಂದ್ಯದ ವೇಳೆ ನಮಗೆ ಹಲವು ಬಾರಿ ಗೋಲ್ ಗಳಿಸುವ ಅವಕಾಶಗಳಿದ್ದವು. ಆದರೆ ಇದರ ಲಾಭ ಪಡೆಯಲು ನಮಗೆ ಸಾಧ್ಯವಾಗಲಿಲ್ಲ. ಆದಾಗ್ಯೂ ಬಲಿಷ್ಠ ತಂಡದ ವಿರುದ್ಧ ನಮ್ಮ ಪ್ರದರ್ಶನ ಅದ್ಭುತವಾಗಿತ್ತು ಎಂದು ನಾನು ಭಾವಿಸುತ್ತೇನೆ,'' ಎಂದು ಹೇಳಿದರು. ಕೊಲಂಬಿಯಾ ಜುಲೈ 3ರಂದು ನಾಕೌಟ್ ಪಂದ್ಯದಲ್ಲಿ ಘಾನಾ ತಂಡವನ್ನು ಎದುರಿಸಲಿದ್ದರೆ, ಪೋರ್ಚುಗಲ್ ತಂಡ ಕ್ರೊಯೇಷ್ಯಾ ವಿರುದ್ಧ ಆಡಲಿದೆ.

ನಾಕೌಟ್ ಪಂದ್ಯಗಳು

ಜರ್ಮನಿ vs ಪರಾಗ್ವೆ
ಮಂಗಳವಾರ ನಸುಕಿನ 2ಕ್ಕೆ
ಸ್ಥಳ: ಬೋಸ್ಟನ್

ನೆದರ್ಲೆಂಡ್ಸ್ vs ಮೊರಾಕ್ಕೊ
ಮಂಗಳವಾರ ಬೆಳಗ್ಗೆ 6:30ಕ್ಕೆ
ಸ್ಥಳ: ಮಾಂಟೆರ್ರಿ

ಐವರಿ ಕೋಸ್ಟ್ vs ನಾರ್ವೆ
ಮಂಗಳವಾರ ರಾತ್ರಿ 10:30ಕ್ಕೆ
ಸ್ಥಳ: ಡಲ್ಲಾಸ್

ನೇರ ಪ್ರಸಾರ: ಯುನೈಟೆಡ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಸೋರಿಯಾಸಿಸ್ ನಿವಾರಣೆ ಸುಲಭ

ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವ ಕಾಯಿಲೆಗಳಲ್ಲಿ ಸೋರಿಯಾಸಿಸ್ ಕೂಡ ಒಂದು. ಹಾಗಂತ ಇದು ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ. ಈ ಕಾಯಿಲೆಗೆ ಚರ್ಮದ ತಳದ ಪದರುಗಳ ಜೀವಕೋಶ ವಿಪರೀತ ವಿಭಜನೆಯಾಗುವುದೇ ಕಾರಣ. ಸಾಮಾನ್ಯವಾಗಿ ಚರ್ಮವು ಹಳೆಯ ಪದರ ತೆಗೆದುಹಾಕಿ ಹೊಸ ಪದರ ರೂಪಿಸಿಕೊಳ್ಳುವುದಕ್ಕೆ ಕೆಲವು ದಿನಗಳ ಸಮಯ ತೆಗೆದುಕೊಳ್ಳುತ್ತದೆ. ಆದರೆ ಈ ಕ್ರಿಯೆ ಸೋರಿಯಾಸಿಸ್‌ನಲ್ಲಿ ಬಲು ಬೇಗ ಮುಗಿಯುತ್ತದೆ ಹಾಗೂ ಈ ಸಮಯದಲ್ಲಿ ಉದುರಿ ಹೋಗಬೇಕಾದ ಹಳೆಯ ಚರ್ಮದ ಪದರವು ಹಾಗೇ ಉಳಿದು ಹೊಸ ಚರ್ಮದ ಪದರ ರಚನೆಯಾಗುತ್ತದೆ. ಇದರಿಂದ ಚರ್ಮದ ಮಡಿಕೆಗಳು ನಿರ್ಮಾಣವಾಗುತ್ತವೆ.

ಡಾ. ಶ್ರೀಕಾಂತ್ ಮೋರ್ಲಾವರ್
ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಸಂಸ್ಥೆಯ ಅಧ್ಯಕ್ಷ

ಐದು ವಿಧ: ಕೆಲವು ಗುಣಲಕ್ಷಣಗಳನ್ನು ಆಧರಿಸಿ ಸೋರಿಯಾಸಿಸ್ ಅನ್ನು ಪ್ಲೇಕ್ ಸೋರಿಯಾಸಿಸ್, ಗಟ್ಟೇಟ್ ಸೋರಿಯಾಸಿಸ್, ಪುಸ್ಟ್ಯುಲ್ಯರ್ ಸೋರಿಯಾಸಿಸ್, ಇನ್ವರ್ಸ್ ಸೋರಿಯಾಸಿಸ್, ಎರಿಥ್ರೋಡರ್ಮಿಕ್ ಸೋರಿಯಾಸಿಸ್ ಎಂಬ ಐದು ವಿಧಗಳನ್ನಾಗಿ ವಿಂಗಡಿಸಲಾಗಿದೆ.

ಪ್ರಮುಖ ಲಕ್ಷಣ: ತಲೆ, ಮೊಣಕೈ, ಮೊಣಕಾಲು, ಅಂಗೈ, ಪಾದ ಹಾಗೂ ಹೊಟ್ಟೆಯ ಮೇಲ್ಭಾಗದ ಚರ್ಮದ ಮೇಲಿನ ಚರ್ಮ ಕೆಂಪಗಾಗುವುದು, ಸಾಧಾರಣದಿಂದ ಅತಿ ತೀವ್ರ ತುರಿಕೆ, ಚರ್ಮ ಒಡೆದು ತೀವ್ರ ನೋವು, ಸೋರಿಯಾಸಿಸ್ ತಲೆಯಲ್ಲಿದ್ದರೆ ಹೊಟ್ಟು ಹಾಗೂ ಕೂದಲು ಉದುರುವಿಕೆ, ಅಂಗೈ ಪಾದಗಳ ಚರ್ಮ ಹೊಟ್ಟಿನ ರೂಪದಲ್ಲಿ ಉದುರುವುದು ಮತ್ತು ಸೋರಿಯಾಸಿಸ್ ತೀವ್ರವಿದ್ದಾಗ ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ.

ಹೋಮಿಯೋಕೇರ್ ಚಿಕಿತ್ಸೆ: ಹೋಮಿಯೋಕೇರ್‌ನಲ್ಲಿರುವ ಕಾನ್ಸ್ಟಿಟ್ಯೂಷನಲ್ ಚಿಕಿತ್ಸೆಯು ರೋಗಿಯ ದೈಹಿಕ ಸಮಸ್ಯೆ ಮತ್ತು ಮಾನಸಿಕ ಬದಲಾವಣೆಗಳು ಹಾಗೂ ಭಾವನಾತ್ಮಕ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿ ನೀಡುವಂತಹದ್ದಾಗಿದೆ. ಇದು ಕೇವಲ ರೋಗ ಲಕ್ಷಣವಷ್ಟೇ ಅಲ್ಲದೆ ರೋಗಿಯ ಸಂಪೂರ್ಣ ಆರೋಗ್ಯಕ್ಕೆ ಕಾರಣವಾಗುತ್ತದೆ. ಈ ರೀತಿಯ ರೋಗ ಲಕ್ಷಣಗಳಿಂದ ಬಳಲುತ್ತಿದ್ದ ಅನೇಕರು ಹೋಮಿಯೋಕೇರ್ ಚಿಕಿತ್ಸೆಯಿಂದ ಗುಣಮುಖರಾಗಿದ್ದಾರೆ ಎಂದಿದ್ದಾರೆ ಈ ಸಂಸ್ಥೆಯ ತಜ್ಞರು.

ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಕರ್ನಾಟಕದಲ್ಲಿನ ಶಾಖೆಗಳು: ಬೆಂಗಳೂರು (ಜಯನಗರ, ಮಲ್ಲೇಶ್ವರ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಕಲಬುರಗಿ, ಶಿವಮೊಗ್ಗ, ತುಮಕೂರು, ಹಾಸನ. ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ. ■

ಸೋರಿಯಾಸಿಸ್‌ಗೆ ಕಾರಣ

ಎಚ್‌ಐವಿ, ಸ್ಟ್ರೆಪ್ಟೋಕೋಕಲ್ ಸೋಂಕು, ಅತಿ ಚಳಿ, ದೈಹಿಕ ಗಾಯ, ಮಾನಸಿಕ ಒತ್ತಡ, ದೈಹಿಕ ವ್ಯಾಯಾಮದ ಕೊರತೆ, ದೇಹದ ರೋಗ ನಿರೋಧಕ ಶಕ್ತಿ ಕುಗ್ಗುವುದು ಸೋರಿಯಾಸಿಸ್‌ಗೆ ಕಾರಣವಾಗಿವೆ. ಸಂಶೋಧಕರ ಪ್ರಕಾರ, ತದ್ರೂಪಿ ಅವಳಿಯಲ್ಲಿ ಈ ಸಮಸ್ಯೆ ಶೇ. 70ರಷ್ಟು ಕಂಡುಬಂದರೆ, ಅವಳಿಯಲ್ಲದವರಲ್ಲಿ ಶೇ. 30ರಷ್ಟು ಅಪಾಯದ ಸಾಧ್ಯತೆ ಇದೆ. ಜೀವನಶೈಲಿಯೂ ಇದಕ್ಕೆ ಕಾರಣವಾಗಿದ್ದು ವಿಪರೀತ ಮದ್ಯಪಾನ, ಧೂಮಪಾನ ಮತ್ತು ಬೊಜ್ಜಿನಿಂದ ಈ ಸಮಸ್ಯೆ ತಲೆದೋರುತ್ತದೆ. ಕೆಲವು ಔಷಧಗಳ ದೀರ್ಘಕಾಲದ ಸೇವನೆ ಕೂಡ ಸೋರಿಯಾಸಿಸ್‌ಗೆ ಪ್ರೇರೇಪಣೆ ನೀಡುತ್ತದೆ.

ಉಚಿತ ಸಮಾಲೋಚನೆ: 955 000 1133
ಉಚಿತ ಕರೆಗೆ: 1800 108 1212
ವೆಬ್‌ಸೈಟ್: www.homeocare.in

(ಈ ಕ್ಷೇತ್ರದಲ್ಲಿ ತಜ್ಞರ ತಿಳಿವಳಿಕೆಯನ್ನು ಆಧರಿಸಿದ ಬರಹ)

ಸಸ್ಯಗಳಿಗೆ ಕಾಡುವ ಕೀಟಬಾಧೆ

ಲವಲVK GARDEN ಲೋಕ

ಗಿಡಗಳು ಒಂದು ಹಂತಕ್ಕೆ ಬೆಳೆಯಲು ಶುರು ಮಾಡಿದ ಬಳಿಕ ಅವುಗಳ ಸೊಪ್ಪು, ಹಣ್ಣು, ತರಕಾರಿಗಳನ್ನು ತಿನ್ನಲು ನಾವು ಎದುರು ನೋಡುತ್ತಿರುತ್ತೇವೆ. ಅದೇ ಸಂದರ್ಭದಲ್ಲಿಯೇ ನಮಗಿಂತ ಮೊದಲು ಕೆಲವು ಅತಿಥಿಗಳು ಕೂಡ ಅವುಗಳನ್ನು ತಿನ್ನಲು ಹಾತೊರೆಯುತ್ತಾರೆ. ಅವುಗಳೇ ಸಸ್ಯಗಳ ರಸ ಹೀರುವ ಕೀಟಗಳು!

ಅನೇಕ ತರಹದ ಕೀಟಗಳು ಇದ್ದು, ಅವು ನಾವು ಬೆಳೆಸುತ್ತಿರುವ ಸಸ್ಯಗಳ ರಸ ಹೀರಿ ಅವುಗಳ ಬೆಳವಣಿಗೆಯನ್ನೇ ಕುಂಠಿತಗೊಳಿಸುತ್ತವೆ. ಎಷ್ಟೋ ಸಲ ಈ ಕೀಟಬಾಧೆ ನಿಯಂತ್ರಿಸಲಾಗದೆ ಹೊಸಬರು ತೋಟ ಮಾಡುವುದನ್ನೇ ನಿಲ್ಲಿಸುತ್ತಾರೆ. ಹೀಗಾಗಿ ಕೈತೋಟ ಮಾಡಲು ತುಂಬ ತಾಳ್ಮೆಯ ಅವಶ್ಯಕತೆ ಇದೆ. ಕೀಟ ನಿರ್ವಹಣೆ ಅಷ್ಟು ಕಷ್ಟವೇನಲ್ಲ, ಆದರೆ ನಾವು ಸಮಯಕ್ಕೆ ಸರಿಯಾಗಿ ಗಮನಿಸದೆ ಹೋದರೆ ಒಳ್ಳೆಯ ಆಹಾರ ಸವಿಯುತ್ತ ಕೀಟಗಳು ತುಂಬಾ ಕಡಿಮೆ ಸಮಯದಲ್ಲಿ ಅಲ್ಲಿ ತಮ್ಮ ಸಂಖ್ಯೆ ಹೆಚ್ಚಿಸಿದಾಗ ಪರಿಸ್ಥಿತಿ ನಮ್ಮ ಕೈಮೀರಿ ಹೋಗಿರುತ್ತದೆ. ಆಗ ಸಸ್ಯವನ್ನು ಕಿತ್ತೆಸೆಯುವುದು ಬಿಟ್ಟು ಬೇರೇನೂ ಉಪಾಯವಿಲ್ಲ.

ಎಲೆಗಳನ್ನು ಮೇಲಿನಿಂದ ನೋಡಿದರೆ ಕೀಟದ ಇರುವಿಕೆಯ ಬಗ್ಗೆ ಏನೂ ತಿಳಿಯುವುದಿಲ್ಲ. ಇದಕ್ಕಾಗಿ ಎಲೆಗಳ ಹಿಂಭಾಗ ಗಮನಿಸಬೇಕು. ಅದೇ ಅವುಗಳಿಗೆ ಒಳ್ಳೆಯ ಆಶ್ರಯ ತಾಣ. ರಸ ಹೀರುವ ಕೀಟಗಳು ಬಂದಿವೆ ಅಥವಾ ಬರುತ್ತವೆ ಅಂತ ತಿಳಿಯುವ ಇನ್ನೊಂದು ವಿಧಾನವಿದೆ. ನಿಮ್ಮ ಗಿಡಗಳ ಮೇಲೆ ಇರುವೆಗಳು ಅಡ್ಡಾಡುತ್ತಿವೆ ಅಂದರೆ ಕೀಟಗಳು ಅಲ್ಲಿ ಮನೆ ಮಾಡಿವೆ ಅಂತಲೇ ಅರ್ಥ! ಕೀಟಗಳು ಸ್ರವಿಸುವ ಸಿಹಿ ಪದಾರ್ಥ ತಿನ್ನಲು ಇರುವೆಗಳ ದಂಡು ಅಲ್ಲಿಗೆ ಬಂದಿರುತ್ತವೆ. ಕೀಟಗಳ ಸಣ್ಣ ಮರಿಗಳನ್ನು ಕೂಡ ಗಿಡಗಳ ಮೇಲೆ ಅಲ್ಲಲ್ಲಿ ಸಾಗಿಸುವ ಕೆಲಸವನ್ನು ಕೂಡ ಇರುವೆಗಳು ಮಾಡುತ್ತವೆ. ಹೀಗಾಗಿ ನೀವು ಮಾಡಬೇಕಾಗಿರುವ ಮೊದಲ ಕೆಲಸವೆಂದರೆ ಇರುವೆಗಳನ್ನು ಗಿಡಗಳ ಬಳಿ ಬರದಂತೆ ತಡೆಯುವುದು. ■

-ಗುರುಪ್ರಸಾದ ಕುರ್ತಕೋಟಿ

ದಿನ ಭವಿಷ್ಯ

ಶ್ರೀಪತಿ ಭಟ್
ಆಚಾರ್ಯ
ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.

ದೂ: 9513747474

ಸಿಂಹ, ತುಲಾ, ಮೀನ ಈ ರಾಶಿಯವರಿಗೆ ರೋಚಕ ಯೋಗ

ಮೇಷ: ಹಿರಿಯ ಮಗನ ಸಹಾಯದಿಂದ ಗಣ್ಯರ ಪರಿಚಯ ಮತ್ತು ಸಹಾಯ ದೊರೆತು ಹೊಸ ಯೋಜನೆಗಳಿಗೆ ಅನುಕೂಲ ತೋರಿಬರಲಿದೆ. ವಾದ ಮಾಡುವ ಅಭ್ಯಾಸದಿಂದ ಸಂಬಂಧ ಹಾಳು ಮಾಡಿಕೊಳ್ಳುವ ಲಕ್ಷಣಗಳಿವೆ. **ಶುಭ ಸಂಖ್ಯೆ:** 7, **ಬಣ್ಣ:** ನೀಲಿ
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಅಂಗಡಿಯಲ್ಲಿ ಕಳ್ಳತನ ನಡೆಯುತ್ತಿರುವುದನ್ನು ಗಮನಿಸುವಿರಿ. ರಕ್ಷಣೆಗಾಗಿ ಕ್ರಮ ಕೈಗೊಳ್ಳುವುದು ಉತ್ತಮ. ಅದೃಷ್ಟವನ್ನು ಪರೀಕ್ಷಿಸಿಕೊಳ್ಳಬಹುದು. ಜಮೀನಿನ ಕೆಲಸಗಳು ತೊಂದರೆ ಇಲ್ಲದೇ ನೆರವೇರಲಿದೆ. **ಶುಭ ಸಂಖ್ಯೆ:** 1, **ಬಣ್ಣ:** ಪಾಚಿ ಹಸಿರು
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಅಭಿವೃದ್ಧಿಯನ್ನು ನೋಡಿ ಬಂಧುಗಳು ಶತ್ರುಗಳಾಗುವರು. ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸುವುದರಿಂದ ಬಹುಮಾನ ಪಡೆಯುವಿರಿ. ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗಲಿದ್ದೀರಿ. **ಶುಭ ಸಂಖ್ಯೆ:** 5, **ಬಣ್ಣ:** ಗುಲಾಬಿ
(ಕ, ಕಿ, ಕು, ಘ, ಙ, ಚ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಆಮೆಗತಿಯಲ್ಲಿ ನಡೆಯುತ್ತಿರುವ ಜಮೀನಿನ ಕೆಲಸಗಳನ್ನು ತ್ವರಿತಗತಿಯಲ್ಲಿ ನಡೆಸಿಕೊಡುವಂತೆ ಕೆಲಸಗಾರರಲ್ಲಿ ಕೇಳಿಕೊಳ್ಳಿ. ಸಹೋದರರಲ್ಲಿನ ಸಂಬಂಧಗಳು ಗಟ್ಟಿಗೊಳ್ಳಲಿದೆ. **ಶುಭ ಸಂಖ್ಯೆ:** 2, **ಬಣ್ಣ:** ಕಿತ್ತಳೆ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಯಾವುದಕ್ಕೂ ಆತುರಪಡಬೇಡಿ. ಭಾವನೆಗಳ ಜೊತೆಗೆ ಅಭಿಪ್ರಾಯವೂ ಬದಲಾಗುವ ಕಾಲ. ಯಾವುದೇ ವಿಷಯದಲ್ಲಿ ಆತುರದ ನಿರ್ಧಾರ ಸರಿಯಲ್ಲ, ಸಂಜೆ ಅಚ್ಚರಿಯ ಸುದ್ದಿ ಕೇಳುವಿರಿ. **ಶುಭ ಸಂಖ್ಯೆ:** 8, **ಬಣ್ಣ:** ಹಳದಿ
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಕಾರ್ಯಕ್ಷೇತ್ರದಲ್ಲಿನ ಸನ್ನಿವೇಶವನ್ನು ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಿ. ಮಗನ ಇಂದಿನ ಅನಿರೀಕ್ಷಿತ ಬದಲಾವಣೆ ಅಚ್ಚರಿ ತರುತ್ತದೆ. ಶುಭ ಫಲಕ್ಕಾಗಿ ಈಶ್ವರನನ್ನು ಆರಾಧಿಸಿ. **ಶುಭ ಸಂಖ್ಯೆ:** 6, **ಬಣ್ಣ:** ಕಂಚು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಹೆಚ್ಚಿನ ಸಂಪಾದನೆ ಮಾಡುವ ಬಗ್ಗೆ ಯೋಚನೆ ಬರಲಿದೆ. ರಾಸಾಯನಿಕ ವಸ್ತುಗಳ ವ್ಯಾಪಾರಗಳಲ್ಲಿ ಲಾಭ ಕಾಣಲಿದ್ದೀರಿ. ಶೀತ ಬಾಧೆಯಿಂದ ಪೂರ್ವ ನಿಯೋಜಿತ ಕಾರ್ಯಗಳೆಲ್ಲವೂ ಸ್ತಬ್ಧವಾಗುವುದು. **ಶುಭ ಸಂಖ್ಯೆ:** 3, **ಬಣ್ಣ:** ಖಾಕಿ
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೇ ಸೊರಗಿದ್ದರೆ ಹೆಚ್ಚಿನ ವರಮಾನ ಮಾರ್ಗ ಕಾಣಲಿದೆ. ವಿದ್ಯಾಭ್ಯಾಸದಲ್ಲಿ ಉದಾರತೆ ತೋರುತ್ತಿದ್ದ ವಿದ್ಯಾರ್ಥಿಗಳಿಗೆ ಆಸಕ್ತಿ ಉಂಟಾಗಲಿದೆ. **ಶುಭ ಸಂಖ್ಯೆ:** 9, **ಬಣ್ಣ:** ಕಡುಕೆಂಪು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಸ್ವಾರ್ಥವಾಗಿ ಯೋಚಿಸಿ ಅಧಿಕಾರ ದುರುಪಯೋಗ ಮಾಡಿಕೊಳ್ಳಬೇಡಿ. ದೇಹಕ್ಕೆ ಅವಶ್ಯಕತೆ ಇರುವಷ್ಟು ನಿದ್ರೆ, ವಿಶ್ರಾಂತಿಯನ್ನು ಮಾಡುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. **ಶುಭ ಸಂಖ್ಯೆ:** 4, **ಬಣ್ಣ:** ಬೂದು
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಗುತ್ತಿಗೆದಾರರಿಗೆ ಕಾರ್ಯಭಾರ ಪ್ರಾರಂಭವಾಗುವುದು. ವ್ಯವಹಾರದ ವಿಚಾರದಲ್ಲಿ ಅನುಭವ ಅಗತ್ಯ. ಅನಿವಾರ್ಯವಾಗಿ ಶಿಕ್ಷಣ ನಿಲ್ಲಿಸಿದವರಿಗೆ ಮುಂದುವರಿಸಲು ಸಹಾಯ ದೊರೆಯಲಿದೆ. **ಶುಭ ಸಂಖ್ಯೆ:** 7, **ಬಣ್ಣ:** ನೇರಳೆ
(ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಬದಲಾದ ದಿನಚರಿಯಿಂದ ಅಥವಾ ಅನವಶ್ಯಕ ಮಾತಿನಿಂದ ಉದ್ವೇಗ ಉಂಟಾಗಬಹುದು. ಸಾರ್ವಜನಿಕ ಸ್ಥಳಗಳಲ್ಲಿ ಗೌರವವನ್ನು ಕಾಪಾಡಿಕೊಳ್ಳುವ ಬಗ್ಗೆ ಗಮನವಿರಲಿ. ಕುಲದೇವರ ಸೇವೆಯಿಂದ ಫಲ ಲಭಿಸಲಿದೆ. **ಶುಭ ಸಂಖ್ಯೆ:** 5, **ಬಣ್ಣ:** ಸುವರ್ಣ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಕೆಲಸ ಕಾರ್ಯಗಳಿಗೆ ಬೇಕಾದ ಸೂಕ್ತ ವ್ಯಕ್ತಿಯನ್ನು ಹುಡುಕುವಲ್ಲಿ ವಿಫಲರಾಗುವ ಮುನ್ಸೂಚನೆ ಸಿಗುವುದು. ರಕ್ತದ ಒತ್ತಡ, ಮೂತ್ರ ಸಂಬಂಧದ ದೋಷಗಳ ಬಗ್ಗೆ ಜಾಗ್ರತೆ ವಹಿಸಿ. ಸುಭ ಸುದ್ದಿ ಕೇಳುವಿರಿ. **ಶುಭ ಸಂಖ್ಯೆ:** 1, **ಬಣ್ಣ:** ಕಂದು
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಲವಲVK ವೆಲ್ನೆಸ್ ಟಿಪ್ಸ್

ತ್ವಚೆಯ ಕಾಂತಿ ಹೆಚ್ಚಿಸುವ ಪಪ್ಪಾಯಿ ಮಾಸ್ಕ್

ಮುಖದ ಚರ್ಮಕ್ಕೆ ಹೊಸ ಕಾಂತಿ ಕೊಡುವ ವಿಷಯದಲ್ಲಿ, ಪಪ್ಪಾಯಿ ಹಣ್ಣಿನ ತಿರುಳಿನಿಂದ ಮಾಡಿದ ಫೇಸ್ ಮಾಸ್ಕ್ ಅತ್ಯಂತ ಪರಿಣಾಮಕಾರಿಯಾಗಿದೆ. ಇದನ್ನು ಮನೆಯಲ್ಲಿಯೇ ಸುಲಭವಾಗಿ ಮಾಡಬಹುದು.

- ಪಪ್ಪಾಯಿ ಹಣ್ಣಿನಲ್ಲಿರುವ ಪಪೇನ್ ಎಂಜೈಮ್ ಎಂಬ ಅಂಶ ಅತ್ಯುತ್ತಮ ಕ್ಲೆನ್ಸರ್ ಆಗಿ ಕೆಲಸ ಮಾಡುತ್ತದೆ. ಇದರಿಂದ ತ್ವಚೆ ಆಳದವರೆಗೆ ಶುದ್ಧವಾಗಿ ಹೊಸ ಕಾಂತಿ ಮೂಡುತ್ತದೆ.
- ಪಪ್ಪಾಯಿ ತಿರುಳಿನ ಫೇಸ್ ಮಾಸ್ಕ್ ತ್ವಚೆಯ ಮೇಲಿರುವ ಕಲೆಗಳನ್ನು ದೂರವಾಗಿಸಿ ಕಳಾಹೀನ ಮುಖಕ್ಕೆ ಹೊಳಪು ನೀಡುತ್ತದೆ. ಜಿಡ್ಡಿನಂಶವಿರುವ ತ್ವಚೆಯವರಿಗೆ ಪಪ್ಪಾಯಿ ಫೇಶಿಯಲ್ ಉತ್ತಮ.
- ಪಪ್ಪಾಯಿಯ ರಸ ಹಾಗೂ ಓಟ್‌ಮೀಲ್ ಅನ್ನು ಜೇನುತುಪ್ಪ ಅಥವಾ ಮೊಸರಿನ ಜೊತೆ ಕಲಸಿ ಮುಖದ ಮೇಲೆ ಲೇಪಿಸಿ. ಇದು ಒಣಗಿದ ಮೇಲೆ ತಣ್ಣೀರಿನಲ್ಲಿ ಮುಖ ತೊಳೆಯಿರಿ.
- ಕಣ್ಣಿನ ಸುತ್ತ ಕಪ್ಪು ವರ್ತುಲಗಳಿದ್ದರೆ ಪಪ್ಪಾಯಿ ಹಾಗೂ ಸೌತೆಕಾಯಿ ಮಿಶ್ರಣ ಮಾಡಿ ಕಣ್ಣಿನ ಕೆಳಗೆ ಹಚ್ಚಿಕೊಂಡರೆ ಉತ್ತಮ ಪರಿಣಾಮ ಬೀರುವುದು. ■

ವಿಜಯಬಂಧ - 7992



ಎಡದಿಂದ ಬಲಕ್ಕೆ

2 ಹಿಂದೆ ನಡೆದು ಹೋದ ಅದ್ದೂರಿತನದ ನೆನಪು 5
6 ಮಹಿಷನ ಮೇಲೇರಿ ಬಂದ ಈತ ಘನತೆಯನ್ನು ಹೊಂದಿದವನು 3
7 ತುರಗವನ್ನು ಏರಿ ಬಂದ ಬುದ್ಧಿವಂತ 3
8 ನಗರದ ಮನುಜನಲ್ಲಿನ ಸಂದೇಶವಾಹಕ ತಂತು 2
10 ನಗಾರಿ ನುಡಿಸಿದಾಗ ಕೇಳಿ ಬಂದ ಹಾಡುಗಾರಿಕೆ 2
11 ಸರ್ಕಾರದವರೇ ದಯಪಾಲಿಸಿದ ಮಾಲೆ 2
13 ನೇಮ ನಿಷ್ಠೆಯಿಂದ ನಿರ್ಮಿಸಿದ ಗೃಹ 2
14 ರಾಜನಿಗೆ ಕಪ್ಪಕಾಣಿಕೆ ಅರ್ಪಿಸಿ ಆಳಿದ ದೊರೆ 3
15 ಸಮಾಗಮದ ಮಾನ ಹೆಚ್ಚು ಕಡಿಮೆಯಿಲ್ಲದಂತಿದೆ 3
16 ಬಿಳಲುಗಳಿಂದ ಗಟ್ಟಿಯಾಗುವ ವೃಕ್ಷ 2
17 ಜನಗಣತಿ ಜೊತೆಯಲ್ಲಿ ಲೆಕ್ಕ ಹಾಕಿದ ಆಭರಣ 2
19 ಸವಾರಿ ಮಾಡಿದ್ದು ಖಂಡಿತ ತಪ್ಪಲ್ಲ 2
20 ಕೌರವನಲ್ಲಿ ಕೇಳಿದ ಶಬ್ದ 2
22 ಐತಿಹಾಸಿಕ ರಾಜವಂಶದ ಜೊತೆಯಾದ ನವಿಲು 3
24 ಜೀವವಿದ್ದರೆ ನಡೆಸಬಹುದಾದ ಬದುಕು 3
25 ಪ್ರತಿ ನಿತ್ಯ ಕಿರಣ ಬೀರುವ ಸೂರ್ಯ 5

ಮೇಲಿನಿಂದ ಕೆಳಕ್ಕೆ

1 ಸರಸವಾಗಿ ನಡೆಸಿದ ಬದುಕು ಏರುಪೇರಿಲ್ಲದಂತಿದೆ 4
2 ಗಹನವಾದ ವಿಷಯದ ಕಡೆ ಹರಿಸಿದ ಲಕ್ಷ್ಯ 3
3 ವೈರಮುಡಿಯನ್ನು ದ್ವೇಷಿಸಿದ ಶತ್ರು 2
4 ಕವಚ ತೊಟ್ಟು ನೀಡಿದ ಮಾತು 3
5 ಅವರ ಈ ಗೃಹ ರಾಜನ ನಿವಾಸ 4
9 ಬೆಳ್ಳಿಯ ಲೋಹದಿಂದ ಕೂಡಿದ ಬೆಟ್ಟ 5
10 ವಾಯುವಿನಲ್ಲಿ ನಡೆದ ಯುದ್ಧ 5
12 ಸಾಲಗಾರ ಅಡಗಿಕೊಳ್ಳಲು ಸೂಕ್ತ ಈ ಪಾತಾಳಲೋಕ 3
13 ಮನಕ್ಕೆ ಆನನ ತೊಡಗಿಸಿದಾಗ ಎಲ್ಲವೂ ಅರ್ಥವಾಯಿತು 3
16 ಗಮ ಗಮಿಸುತ್ತಾ ಬಂದ ಬಗೆ 4
18 ಗಜದ ಅಳತೆ ಹಾಕಿದಾಗ ಈ ಗಣಪ ಬಂದ 4
19 ಸರ ಪಡೆಯಲು ಅನುಸರಿಸಿದ ಪಾಳಿ 3
21 ಜೀರಿಗೆ ತಿಂದಾಗ ಬಂದ ಸಚಿವ 3
23 ಹವ್ಯಾಸದಂತೆ ಭಾರತ ಬರೆದ ಋಷಿ 2

ವಿಜಯಬಂಧ | 7991

ಎಡದಿಂದ ಬಲಕ್ಕೆ: 1.ಮಂಗಲಪಾತಕ 5.ಕತ್ತೆ 6.ಕಲ್ಲುಪ್ಪು 7.ಪರವು 8.ಭಾಗವತ 10.ಕವಂಲಿನಿ 13.ಕವಂತಿಗ 16.ಸರದಾರ 18.ಜಮುನಾ 19.ಪತಾಕಿ 20.ಕೋತಿ 21.ವಿಮಾನಸೌಕರ್ಯ.

ಮೇಲಿನಿಂದ ಕೆಳಕ್ಕೆ: 2.ಗರ್ವಭಂಗ 3.ಪಾಶುಪತ 4.ಕಕಮಕ 5.ಕಪ್ಪುಇಲಿ 8.ಭಾಜಕ 9.ವಸತಿ 11.ವಾಧುರ 12.ನಿಖರ 14.ಮಠಪತಿ 15.ಗಜಕವಿ 16.ಸನಾತನ 17.ದಾರ್ಶನಿಕ.

ಅ.ನಾ. ಪ್ರಹ್ಲಾದರಾವ್

ವೈವಿಧ್ಯ

ನಿಮ್ಮ ಫಿಟ್ನೆಸ್ ಪ್ರಿಯ ಆತ್ಮೀಯರಿಗೆ ಸಾಮಾನ್ಯವೆನಿಸುವ ಡಂಬೆಲ್ಸ್, ಬ್ಯಾಂಡ್ ಕೊಡುವ ಬದಲು ಮಸಾಜ್ ಬಾಲ್, ಸಾಫ್ಟ್‌ಫೋಮ್ ರೋಲರ್, ಸ್ಟ್ರೆಚ್ ಸ್ಟ್ರಾಪ್‌ನಂಥ ಮಸಲ್ ರಿಲ್ಯಾಕ್ಸ್ ಮತ್ತು ಜಿಮ್ ರಿಕವರಿ ಟೂಲ್ಸ್ ಕಿಟ್ ಕೊಡಬಹುದು.

ದಾಲ್ ಸರೋವರ ಅತ್ಯಾಕರ್ಷಕ ಪ್ರವಾಸ ತಾಣ. ಆದರೆ ಅದರ ಹಿಂದಿನ ವ್ಯಾಪಾರಿ ಮನೋಭಾವ, ಅಸುರಕ್ಷತೆ ಪ್ರವಾಸಿಗರಲ್ಲಿ ಆತಂಕ ಮೂಡಿಸುತ್ತದೆ.

ದಾಲ್ ಸರೋವರದ ದಲಾಲ್ ಯಾನ

ಅನಿಲ್ ಕುಮಾರ್ ಬಿ.ಎನ್.
anil.kumar2@timesofindia.com

ಶ್ರೀನಗರದ ಪೂರ್ವ ಬದಲಿಯಲ್ಲಿ, ಹಸಿರು ಬೆಟ್ಟಗಳ ನಡುವೆ, ಪ್ರಶಾಂತವಾಗಿ ಹರಡಿಕೊಂಡಿರುವ ದಾಲ್ ಸರೋವರದ ಸೌಂದರ್ಯ ವರ್ಣನಾತೀತ. ಇಲ್ಲಿನ ಶಿಕಾರಾ ಅಂದರೆ ದೋಣಿಯ ವಿಹಾರ ಪ್ರವಾಸಿಗರಿಗೆ ಜೀವಮಾನದ ಮರೆಯಲಾಗದ ಅನುಭವವನ್ನು ನೀಡುತ್ತದೆ. ತೇಲುವ ಮಾರುಕಟ್ಟೆಗಳು, ಹೌಸ್‌ಬೋಟ್‌ಗಳು ಮತ್ತು ಸೂರ್ಯಾಸ್ತದ ದೃಶ್ಯಗಳು ಮಂತ್ರಮುಗ್ಧರನ್ನಾಗಿಸುತ್ತವೆ. ಸರೋವರದ ಅಲೆಗಳ ಮೇಲೆ ತೇಲುತ್ತಾ, ಪ್ರಕೃತಿಯ ಮಡಿಲಲ್ಲಿ ಕಳೆಯುವ ಆ ಕ್ಷಣಗಳು ಅಕ್ಷರಶಃ ಬೇರೆ ಲೋಕಕ್ಕೆ ಕೊಂಡೊಯ್ಯುತ್ತವೆ.

ಈ ಪ್ರಕೃತಿ ಸೌಂದರ್ಯದ ಹೊದಿಕೆಯ ಕೆಳಗೆ ಪ್ರವಾಸಿಗರನ್ನು ಬೆಚ್ಚಿಬೀಳಿಸುವ ಕರಾಳ ವಾಸ್ತವ ಅಡಗಿದೆ. ದಾಲ್ ಸರೋವರದ ವಿಹಾರ ಎಷ್ಟೇ ಆಹ್ಲಾದಕರವಾಗಿದ್ದರೂ, ಇಲ್ಲಿ ಸುರಕ್ಷತೆಯೆಂಬುದು ಮರೀಚಿಕೆ. ಪ್ರತಿದಿನ ಸಾವಿರಾರು ಪ್ರವಾಸಿಗರು ದೋಣಿಗಳಲ್ಲಿ ವಿಹಾರ ಮಾಡುತ್ತಾರೆ. ಆದರೆ ಆ ದೋಣಿಗಳಲ್ಲಿ ಲೈಫ್ ಜಾಕೆಟ್‌ಗಳಾಗಲೀ, ರಕ್ಷಣಾ ಟ್ಯೂಬ್‌ಗಳಾಗಲಿ ಅಥವಾ ಯಾವುದೇ ತುರ್ತು ರಕ್ಷಣಾ ಸಾಮಗ್ರಿಗಳಾಗಲಿ ಹುಡುಕಿದರೂ ಸಿಗುವುದಿಲ್ಲ. ಇದು ಒಂದು ದೋಣಿಗಷ್ಟೇ ಸೀಮಿತವಾಗದೆ, ಪ್ರತಿ ಶಿಕಾರಾದ್ದೂ ಅದೇ ಕಥೆ. ನೀರಿನಲ್ಲಿ ಓಲಾಡುತ್ತಾ ಸಾಗುವಾಗ ಕನಿಷ್ಠ ಮಟ್ಟದ ಅನಾಹುತ ಸಂಭವಿಸಿದರೂ, ಪ್ರವಾಸಿಗರ ಪ್ರಾಣಕ್ಕೆ ಯಾವುದೇ ಖಾತರಿ ಇಲ್ಲ.

ಲೈಫ್ ಜಾಕೆಟ್ ಇಲ್ಲದೆ ನಡೆಯುವ ಈ ದೋಣಿ ವಿಹಾರ, ಇತ್ತೀಚೆಗಷ್ಟೇ ಮಧ್ಯಪ್ರದೇಶದಲ್ಲಿ ನಡೆದ ಭೀಕರ ದೋಣಿ ದುರಂತದ ಕರಾಳ ನೆನಪುಗಳನ್ನು ಮತ್ತೆ ಕಣ್ಣೆದುರು ತರುತ್ತದೆ. ಜಬಲ್‌ಪುರದ ಬಾರ್ಗಿ ಅಣೆಕಟ್ಟಿನಲ್ಲಿ ಏಕಾಏಕಿ ಬೀಸಿದ ಬಿರುಗಾಳಿಗೆ ಸಿಲುಕಿ ಪ್ರವಾಸಿಗರಿದ್ದ ಕ್ರೂಸ್ ದೋಣಿಯೊಂದು ಮುಳುಗಿತ್ತು. ಆ ದುರಂತದಲ್ಲಿ ಮುಗ್ಧ ಮಕ್ಕಳು ಸೇರಿದಂತೆ 13 ಮಂದಿ ಜಲಸಮಾಧಿಯಾಗಿದ್ದರು. ದೋಣಿ ಮುಳುಗುವ ಕೊನೆ ಕ್ಷಣದವರೆಗೂ ಮತ್ತು ನೀರು ದೋಣಿಯೊಳಗೆ ನುಗ್ಗುವವರೆಗೂ ಪ್ರವಾಸಿಗರಿಗೆ ಲೈಫ್ ಜಾಕೆಟ್‌ಗಳನ್ನು ನೀಡದೇ ಇದ್ದದ್ದೇ ಆ ದುರಂತದ ತೀವ್ರತೆ ಹೆಚ್ಚಾಗಲು ಕಾರಣವಾಗಿತ್ತು ಎಂದು ಬದುಕುಳಿದವರು ಆಕ್ರೋಶ ವ್ಯಕ್ತಪಡಿಸಿದ್ದರು. ಆ ಘಟನೆಯ ಭೀಕರತೆ ಇನ್ನೂ ಮಾಸುವ ಮುನ್ನವೇ, ದಾಲ್ ಸರೋವರದಲ್ಲಿ ಕನಿಷ್ಠ ರಕ್ಷಣಾ ಕವಚಗಳಿಲ್ಲದೆ ನಡೆಯುತ್ತಿರುವ ಈ ದೋಣಿ ವಿಹಾರಗಳು, ಯಾವುದೇ ಕ್ಷಣದಲ್ಲಿ ಸಂಭವಿಸಬಹುದಾದ ಮತ್ತೊಂದು ದುರಂತಕ್ಕೆ ಆಹ್ವಾನ ನೀಡುವಂತೆ ಕಾಣುತ್ತವೆ. ಅಲ್ಲದೆ ದೋಣಿ ವಿಹಾರಕ್ಕೆ ಊಟಿ, ಕೊಡೈಕೆನಾಲ್ ಮುಂತಾದೆಡೆ ಇರುವಂತೆ ಯಾವುದೇ ನಿಗದಿತ ದರವಾಗಲಿ, ಅಧಿಕೃತ ಟಿಕೆಟ್ ಕೌಂಟರ್‌ಗಳಾಗಲಿ ಇಲ್ಲ. ಹೊಸದಾಗಿ ಬರುವ ಪ್ರವಾಸಿಗರೇ ಇವರ ಮುಖ್ಯ ಬೇಟೆ. ದೋಣಿ ಚಾಲಕರು ಪ್ರವಾಸಿಗರನ್ನು ನೋಡಿಕೊಂಡು, ತಮ್ಮ ಇಷ್ಟಬಂದಂತೆ ಭಾರಿ ಮೊತ್ತದ ಹಣವನ್ನು ಪೀಕುತ್ತಾರೆ. ಕೇಳಿದ್ದನ್ನು ಕೊಡುವಂತಹ ಅಸಹಾಯಕ ಸ್ಥಿತಿ ಪ್ರವಾಸಿಗರದ್ದು. ತೀರಾ ಚೌಕಾಸಿ ಮಾಡಿದರೆ, ಸುಮ್ಮನೆ ಒಂದು ಸುತ್ತು ಸುತ್ತಿಸಿ ದಡ ಸೇರಿಸುತ್ತಾರೆ. ಕೇಳಿದಷ್ಟು ಹಣ ಕೊಟ್ಟರೆ ಸುಮಾರು ಒಂದೂವರೆ ತಾಸು ಭರ್ಜರಿ ಪ್ರಯಾಣ. ಇಷ್ಟಾದರೂ ದಾಲ್ ಲೇಕ್ ಒಂದು ಸುತ್ತು ಆಗುವುದೇ ಇಲ್ಲ. ಏಕೆಂದರೆ ಇಡೀ ದಾಲ್ ಸರೋವರ ಸುತ್ತಲು ಇಡೀ ಒಂದು ದಿನ ಬೇಕಾಗಬಹುದು.

ಸಿಂಡಿಕೇಟ್ ದರ್ಬಾರು: ಇದು ಕೇವಲ ದೋಣಿ ಚಾಲಕರಿಂದ ಮಾತ್ರ ನಡೆಯುವ ದಂಧೆಯಲ್ಲ; ನೀವು ಬಾಡಿಗೆಗೆ ಪಡೆಯುವ ಕ್ಯಾಬ್ ಚಾಲಕನಿಂದಲೇ ಈ ಸುಲಿಗೆಯ ಜಾಲ ಶುರುವಾಗುತ್ತದೆ. ಈ ಕ್ಯಾಬ್ ಚಾಲಕರು ಪ್ರವಾಸಿಗರನ್ನು ಸರೋವರದ ಯಾವುದೋ ಹತ್ತಿರದ ಪ್ರವೇಶ ದ್ವಾರಗಳಿಗೆ ಕರೆದೊಯ್ಯುವುದಿಲ್ಲ, ಬದಲಾಗಿ ತಮಗೆ ಕಮಿಷನ್ ಕೊಡುವ, ಈಗಾಗಲೇ ನಿಗದಿಯಾಗಿರುವ ನಿರ್ದಿಷ್ಟ ಜೆಟ್ಟಿಗಳಿಗೆ ಮಾತ್ರ ಕರೆದೊಯ್ಯುತ್ತಾರೆ.

ಪ್ರತಿ ಬೋಟ್ ಜೆಟ್ಟಿಯಲ್ಲೂ ಮಧ್ಯವರ್ತಿಗಳ ಹಾವಳಿ ಇರುತ್ತದೆ. ಇವರೇ ಇಡೀ ದೋಣಿ ವಿಹಾರದ ವ್ಯಾಪಾರವನ್ನು ನಿಯಂತ್ರಿಸುವ ಕಿಂಗ್‌ಪಿನ್‌ಗಳು. ಯಾರು ಯಾವ ದೋಣಿಯನ್ನು ಹತ್ತಬೇಕು, ಎಷ್ಟು ಹಣ ವಸೂಲಿ ಮಾಡಬೇಕು ಎಂಬುದನ್ನೆಲ್ಲ ಈ ಮಧ್ಯವರ್ತಿಗಳೇ ನಿರ್ಧರಿಸುತ್ತಾರೆ. ಇವರೆಲ್ಲರೂ ಸೇರಿಕೊಂಡು ಒಂದು ಸಂಘಟಿತ ಸಿಂಡಿಕೇಟ್‌ನಂತೆ ಅಲಿಖಿತ ನಿಯಮಗಳ ಮೂಲಕ ಇಡೀ ವ್ಯವಸ್ಥೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ■

ಸರೋವರದ ನಡುವೆ ತೇಲುವ ಮಾರುಕಟ್ಟೆ

ದೋಣಿ ಹತ್ತಿದ ಕೂಡಲೇ ಅಲ್ಲಿ ವ್ಯಾಪಾರ ಜೋರಾಗುತ್ತದೆ. ಕಾಫಿ, ಟೀ, ಕುರುಕಲು ತಿಂಡಿಯಿಂದ ಹಿಡಿದು, ಹುಕ್ಕಾಗಳವರೆಗೆ ಸಣ್ಣ ಬೋಟುಗಳಲ್ಲಿ ತೇಲುವ ಅಂಗಡಿಗಳು ಮುತ್ತಿಗೆ ಹಾಕುತ್ತವೆ. ಏನೂ ಬೇಡವೆಂದು ಮುಂದೆ ಸಾಗಿದರೆ, ಅರ್ಧ ಗಂಟೆಯೊಳಗೆ ತೇಲುವ ಬಜಾರ್ ಪ್ರತ್ಯಕ್ಷವಾಗುತ್ತದೆ. ಅಲ್ಲಿ ಹೋಟೆಲ್‌ಗಳಿಂದ ಹಿಡಿದು ಉಡುಪು, ಆಟಿಕೆ ಅಂಗಡಿಗಳವರೆಗೂ

ಎಲ್ಲವೂ ಇರುತ್ತವೆ. ಅದರಲ್ಲಿ ಈಗಾಗಲೇ ಕಮಿಷನ್ ಫಿಕ್ಸ್ ಆಗಿರುವ ಅಂಗಡಿಯ ಮುಂದೆ ಬೋಟ್ ನಿಲ್ಲುತ್ತದೆ. 'ಖರೀದಿಸದಿದ್ದರೂ ಇಳಿದು ನೋಡಿ' ಎಂದು ಉರ್ದು ಮಿಶ್ರಿತ ಹಿಂದಿಯಲ್ಲಿ ಚಾಲಕನ ಶಿಫಾರಸು. ಅದೂ ಬೇಡವೆಂದರೆ ದ್ವೀಪದಂತಿರುವ ಅಂಗಡಿಗಳ ನಡುವಲ್ಲೇ ಶಿಕಾರಾ ಮುಂದುವರಿಯುತ್ತದೆ. ವರ್ಷದ ಕೆಲವೇ ತಿಂಗಳ ಕಾಲ ಇರುವ ಪೀಕ್ ಸೀಸನ್‌ನಲ್ಲಿ ಮಾತ್ರ ದಾಲ್ ಸರೋವರದಲ್ಲಿ ವ್ಯಾಪಾರ ಭರಾಟೆ ಇರುತ್ತದೆ. ಚಳಿಗಾಲದಲ್ಲಿ ಇಡೀ ಸರೋವರ ಹೆಪ್ಪುಗಟ್ಟಿ, ದೊಡ್ಡ ಮೈದಾನದಂತಾಗುತ್ತದೆ. ಹೀಗಾಗಿ ವರ್ಷದ ದುಡಿಮೆಯನ್ನು ಕೆಲವೇ ತಿಂಗಳಲ್ಲಿ ಮಾಡುವ ಧಾವಂತ ಶಿಕಾರಾಗಳದ್ದು.

ಹಾಟ್ ಗರ್ಲ್ ಸೀರೆ ಕ್ರೇಜ್

ಸಾಂಪ್ರದಾಯಿಕ ನೋಟದ ಜತೆಗೆ ಗ್ಲಾಮರಸ್ ಆಗಿಯೂ ಕಾಣಬೇಕೆಂದು ಬಯಸುವವರಿಗೆ ಹಾಟ್ ಗರ್ಲ್ ಸೀರೆಗಳು ಹೇಳಿಮಾಡಿಸಿದಂತಿವೆ.

ಪಂಚಮಿ ಬಾಕಿಲಪದವು
feedbacklvk@vijaykarnataka.com

ಸೀರೆ ಭಾರತೀಯ ಮಹಿಳೆಯರ ಸಾಂಪ್ರದಾಯಿಕ ಉಡುಪಾದರೂ ಕಾಲಕ್ಕೆ ತಕ್ಕಂತೆ ಅದನ್ನು ಧರಿಸುವ ಶೈಲಿ ಬದಲಾಗುತ್ತಿದೆ. ಇತ್ತೀಚೆಗೆ ಫ್ಯಾಷನ್ ಜಗತ್ತಿನಲ್ಲಿ ಹಾಟ್ ಗರ್ಲ್ ಸೀರೆ ಟ್ರೆಂಡ್ ಗಮನ ಸೆಳೆಯುತ್ತಿದೆ. ಮುಖ್ಯವಾಗಿ ಜೆನ್ ಜೀ ತರುಣಿಯರಿಗೆ ಇಂಥ ಸೀರೆ ಪ್ರಿಯವಾಗಿದೆ. ಕೆಲವು ವಿಶೇಷತೆಗಳಿರುವ ಇಂಥ ಸೀರೆಗಳು ಧರಿಸಿದವರ ಆತ್ಮವಿಶ್ವಾಸ ಹೆಚ್ಚಿಸುತ್ತವೆ.

ಹಗುರ ಉಡುಪು: ಹಾಟ್ ಗರ್ಲ್ ಸೀರೆಯಲ್ಲಿ ಬಟ್ಟೆಯ ಆಯ್ಕೆ ಪ್ರಮುಖವಾಗಿರುತ್ತದೆ. ಇದಕ್ಕಾಗಿ ಭಾರವಾದ ರೇಷ್ಮೆ ಅಥವಾ ಕಾಟನ್ ಸೀರೆಗಳ ಬದಲಿಗೆ ದೇಹದ ಆಕಾರಕ್ಕೆ ಸುಲಭವಾಗಿ ಒಪ್ಪುವ ಹಗುರ ಫ್ಯಾಬ್ರಿಕ್‌ಗಳನ್ನು ಆರಿಸಬೇಕು. ಷಿಫಾನ್, ಜಾರ್ಜೆಟ್ ಸೀರೆಗಳು ದೇಹದ ಕರ್ವ್‌ಗಳನ್ನು ಹೈಲೈಟ್ ಮಾಡುತ್ತವೆ. ಇದರೊಂದಿಗೆ ರೇಷ್ಮೆಯಂತಹ ಮೃದುತ್ವ ಹಾಗೂ ಹೊಳಪು ನೀಡುವ ಸ್ಯಾಟಿನ್, ಪಾರದರ್ಶಕ ಲುಕ್ ನೀಡುವ ನೆಟ್ ಸೀರೆಗಳು ಗ್ಲಾಮರಸ್ ಆಗಿ ಕಾಣುತ್ತವೆ.

ಬ್ಲೌಸ್ ಡಿಸೈನ್: ಆಧುನಿಕ ಶೈಲಿಯಲ್ಲಿ ಸೀರೆಗಿಂತ ಹೆಚ್ಚು ಬ್ಲೌಸ್ ಡಿಸೈನ್‌ಗಳು ಎದ್ದು ಕಾಣುತ್ತವೆ. ಸ್ಲೀವ್‌ಲೆಸ್, ಸ್ಟ್ರಾಪ್‌ಲೆಸ್, ಬ್ಯಾಕ್‌ಲೆಸ್, ಹಾಲ್ಟರ್ ನೆಕ್ ಹಾಗೂ ಕ್ರಾಪ್ ಟಾಪ್ ಮಾದರಿಯ ಬ್ಲೌಸ್‌ಗಳು ಸೀರೆಗೆ ವೆಸ್ಟರ್ನ್ ಮತ್ತು ಬೋಲ್ಡ್ ಲುಕ್ ನೀಡುತ್ತವೆ. ಇದು ಉಡುವವರ ಆತ್ಮವಿಶ್ವಾಸ ಬಿಂಬಿಸುತ್ತದೆ.

ಉಡುವ ಶೈಲಿ: ಸೀರೆ ಧರಿಸುವಾಗ ದೊಡ್ಡ ನೆರಿಗೆಗಳನ್ನು ಮಾಡುವ ಬದಲು ಕಿರಿದಾದ ನೆರಿಗೆಗಳನ್ನು ಮಾಡಬೇಕು. ಸೀರೆಯನ್ನು ಲೋ ವೇಯ್ಸ್ಟ್ ಅಂದರೆ ಸೊಂಟದ ಭಾಗದ ಕೆಳಗೆ ಉಡುವುದು ಹಾಟ್ ಗರ್ಲ್ ಸೀರೆಯ ಮುಖ್ಯ ಲಕ್ಷಣ. ಇದು ಸೀರೆಯ ಗಾಂಭೀರ್ಯವನ್ನು ಇಮ್ಮಡಿಸುತ್ತದೆ.

ಬಣ್ಣಗಳ ಆಯ್ಕೆ: ಅತಿಯಾದ ಜರಿ, ಹೆವಿ ಎಂಬ್ರಾಯ್ಡರಿ ಅಥವಾ ದೊಡ್ಡ ಬಾರ್ಡರ್‌ಗಳ ವಿನ್ಯಾಸ ಹಾಟ್ ಗರ್ಲ್ ಸೀರೆ ಟ್ರೆಂಡ್‌ನಲ್ಲಿ ಇರುವುದಿಲ್ಲ. ಬದಲಿಗೆ ಇಡೀ ಸೀರೆ ಒಂದೇ ಬಣ್ಣದಿಂದ ಕೂಡಿರುವ ವಿನ್ಯಾಸಕ್ಕೆ ಆದ್ಯತೆ ನೀಡಬೇಕು. ಕಪ್ಪು, ಕಡು ಕೆಂಪು, ವೈನ್ ಕಲರ್ ಅಥವಾ ತಿಳಿ ಪ್ಯಾಸ್ಟಲ್ ಬಣ್ಣಗಳು ಈ ಲುಕ್‌ಗೆ ಹೆಚ್ಚು ಸೂಕ್ತ. ಸರಳ ಬಾರ್ಡರ್ ಅಥವಾ ಸಣ್ಣದಾಗಿ ಹೊಳೆಯುವ ಚಮಕಿ ವರ್ಕ್ ಈ ಸೀರೆಗಳ ಸೌಂದರ್ಯ ಹೆಚ್ಚಿಸುತ್ತದೆ.

ಗ್ಲಾಮರಸ್ ನೋಟ

ಕನಿಷ್ಠ ಆಭರಣ: ಭಾರವಾದ ಒಡವೆಗಳ ಬದಲಿಗೆ ಕೇವಲ ಒಂದೇ ಒಂದು ಆಭರಣ ಧರಿಸಿ ಹಾಟ್ ಲುಕ್ ಹೆಚ್ಚಿಸಬಹುದು. ಬ್ಲೌಸ್ ವಿನ್ಯಾಸ ಭಿನ್ನವಾಗಿದ್ದರೆ ಕುತ್ತಿಗೆಗೆ ಏನನ್ನೂ ಧರಿಸದೆ ದೊಡ್ಡ ಕಿವಿಯೋಲೆ ಮಾತ್ರ ಧರಿಸಬೇಕು. ಸೀರೆ ತೀರಾ ಸರಳವಾಗಿದ್ದರೆ ಕುತ್ತಿಗೆಗೆ ಸ್ಟೈಲಿಶ್ ಚೋಕರ್, ಸಣ್ಣ ಕಿವಿಯೋಲೆ ಧರಿಸಿ ಆಕರ್ಷಕವಾಗಿ ಕಾಣಬಹುದು. ■

ಮೇಕಪ್ ಮತ್ತು ಹೇರ್‌ಸ್ಟೈಲ್

ಮುಖದ ಲಕ್ಷಣ ಹೆಚ್ಚಾಗಿಸಲು ಮೇಕಪ್ ಮುಖ್ಯ. ಈ ನಿಟ್ಟಿನಲ್ಲಿ ಹಾಟ್ ಗರ್ಲ್ ಸೀರೆ ಲುಕ್‌ಗೆ ಕಣ್ಣುಗಳಿಗೆ ಸ್ಮೋಕಿ ಐಸ್ ಅಥವಾ ಬೋಲ್ಡ್ ಐಲೈನರ್, ತುಟಿಗಳಿಗೆ ಡಾರ್ಕ್ ಲಿಪ್‌ಸ್ಟಿಕ್ ಹಚ್ಚಿದರೆ ಉತ್ತಮ. ಬ್ಲೌಸ್‌ನ ವಿನ್ಯಾಸ ಹೈಲೈಟ್ ಮಾಡಲು ಕೂದಲನ್ನು ಸ್ಲೀಕ್‌ಬನ್ ಅಥವಾ ಮಾಡರ್ನ್ ಆಗಿ ಕಾಣಲು ಓಪನ್ ಹೇರ್ ಸ್ಟೈಲ್ ಆಯ್ಕೆ ಮಾಡಬಹುದು.

ವಿಕ ವಾರೆವಾ! ಈ ಜಗ ಬಲು ಸೋಜಿಗ

■ ಧೀರಜ್ ಪೊಯ್ಯೆಕಂಡ

ಫುಟ್ಬಾಲ್ ಮ್ಯಾಚ್ ನೋಡಲು ₹41 ಲಕ್ಷ ಸಂಬಳ

ಇಡೀ ದಿನ ಟಿವಿ ನೋಡ್ತಾ ಇದ್ರೆ 'ಕೆಲಸ ಇಲ್ದೋರು' ಅನ್ನುವ ಬಿರುದು ಸಿಕ್ಕಿಬಿಡುತ್ತದೆ. 'ದಿನಪೂರ್ತಿ ಟಿವಿ ನೋಡೋದೇನು? ಏನಾದ್ರೂ ಕೆಲಸ ಮಾಡ್ಬಾರ್ದಾ' ಅನ್ನುವ ಪುಕ್ಕಟೆ ಸಲಹೆಯೂ ಸಿಗುತ್ತದೆ. ಆದರೆ, ಅಮೆರಿಕದ ಇಬ್ಬರು ಯುವಕರಿಗೆ ಟಿವಿ ನೋಡುವುದಕ್ಕೆಂದೇ ಸಂಬಳ ಸಿಗುತ್ತಿದೆ. ಅದು ಕೂಡ ಚಿಲ್ಲರೆ ಸಂಬಳವಲ್ಲ, 39 ದಿನಗಳಿಗೆ ಬರೋಬ್ಬರಿ 41 ಲಕ್ಷ ರೂಪಾಯಿ!

ಇದು ಆಸ್ಟಿನ್ ಫ್ರಾಂಕ್ಲಿನ್ ಮತ್ತು ಕೆವಿನ್ ಅಕೋಟೋ ಎಂಬ ಇಬ್ಬರು ಅದೃಷ್ಟವಂತರ ಕಥೆ.

ಇವರ ಕೆಲಸ ಫಿಫಾ ವಿಶ್ವಕಪ್ ಪಂದ್ಯಗಳನ್ನು ನೋಡುವುದು. 39 ದಿನ 104 ಪಂದ್ಯಗಳನ್ನೂ ನೋಡಬೇಕು. ಅದಕ್ಕಾಗಿ ಇವರಿಗೆ 41 ಲಕ್ಷ ವೇತನ ಸಿಗಲಿದೆ. ಫಾಕ್ಸ್ ಸ್ಪೋರ್ಟ್ಸ್ ಎಂಬ ಸ್ಪೋರ್ಟ್ಸ್ ಚಾನಲ್‌ನ ಪ್ರಚಾರ ತಂತ್ರ ಇದು. ಕೂತು ಮ್ಯಾಚ್ ನೋಡಿದರೆ ಸಂಬಳ ಕೊಡುತ್ತೇವೆ ಎಂದು ಚಾನಲ್ ಹೇಳಿದಾಗ ಸಾವಿರಾರು ಅರ್ಜಿಗಳು ಬಂದಿದ್ದವು. ಅದರಲ್ಲಿ ಆಯ್ಕೆಯಾದವರು ಆಸ್ಟಿನ್ ಮತ್ತು ಕೆವಿನ್. ಅವರು ಈಗ ನ್ಯೂಯಾರ್ಕ್‌ನ 'ಟೈಮ್ಸ್ ಸ್ಕ್ವೇರ್' ಮಧ್ಯದಲ್ಲಿ ಇಟ್ಟಿರುವ ಪಾರದರ್ಶಕವಾದ ಗಾಜಿನ ಮನೆಯಲ್ಲಿ ಕೂತು ಫುಟ್ಬಾಲ್ ಪಂದ್ಯಗಳನ್ನು ನೋಡುತ್ತಿದ್ದಾರೆ.

ಅಂದಹಾಗೆ ಹೀಗೆ ಕೂತು ಮ್ಯಾಚ್ ನೋಡುವುದು ಅಂದುಕೊಂಡಷ್ಟು ಸುಲಭವಿಲ್ಲವಂತೆ. 39 ದಿನಗಳಲ್ಲಿ ದಿನಕ್ಕೆ ಐದಾರು ಪಂದ್ಯಗಳನ್ನು ನೋಡುವುದಕ್ಕಾಗಿ ಕೆವಿನ್ ಮತ್ತು ಆಸ್ಟಿನ್ ನಾಲ್ಕೈದು ಸ್ಟ್ರಾಂಗ್ ಕಾಫಿ ಹೊಟ್ಟೆಗೆ ಇಳಿಸಿಕೊಳ್ಳುತ್ತಿದ್ದಾರಂತೆ. ಈ ಕಾಫಿ ಹಣವನ್ನೂ ಚಾನಲ್‌ನವರೇ ಕೊಡುತ್ತಿದ್ದಾರಂತೆ!

ಕರಡಿಯಾಗಲು ಅವಕಾಶ!

ಚೀನಾದ ಹೆನಾನ್ ಪ್ರಾಂತ್ಯದ 'ಲುವೋಹೆ ವೈಲ್ಡ್ ಲೈಫ್ ಝೂ' ಒಂದು ಉದ್ಯೋಗ ಜಾಹೀರಾತು ನೀಡಿ ಇಂಟರ್‌ನೆಟ್‌ನಲ್ಲಿ ಧೂಳೆಬ್ಬಿಸಿದೆ. ವರ್ಷಕ್ಕೆ 14 ಲಕ್ಷ ರೂಪಾಯಿ ವೇತನದ ಕೆಲಸ ಇದು. ಮಾಡಬೇಕಿರುವುದು ಕರಡಿ ಕೆಲಸ! ಅಂದರೆ, ಕರಡಿ ಥರ ಕಾಸ್ಟ್ಯೂಮ್ ಹಾಕಿಕೊಂಡು ಮೃಗಾಲಯದಲ್ಲಿ ಬಿದ್ದುಕೊಂಡಿರುವುದು. ಯಾವ

ಕಾರಣಕ್ಕೂ ಮಾತನಾಡಬಾರದು. ಯಾರಾದರೂ 'ಲೇಯ್ ಕರಡಿ' ಅಂದ್ರೆ, 'ಯಾವನೋ ಕರಡಿ... ನೀನ್ ಕರಡಿ, ನಿನ್ನಜ್ಜ ಕರಡಿ' ಎಂದೆಲ್ಲ ಹೇಳಬಾರದು. ದಿನಕ್ಕೆ ಆರು ಗಂಟೆ ಕರಡಿ ವೇಷ ಹಾಕಿಕೊಂಡಿರಬೇಕು. ವಾರಕ್ಕೆ ಒಮ್ಮೆ ರಜೆ ಇದೆ. 18 ವರ್ಷ ಮೇಲ್ಪಟ್ಟ ಯಾರು ಬೇಕಾದರೂ ಲಿಂಗಭೇದವಿಲ್ಲದೆ ಕರಡಿಯಾಗಬಹುದು ಎಂದು ಜಾಹೀರಾತಿನಲ್ಲಿ ಹೇಳಲಾಗಿತ್ತು. ಇದನ್ನು ನೋಡಿದ ಕೂಡಲೇ ನೂರಾರು ಜನರ ಕರಡಿಯಾಗುವುದಕ್ಕೆ 'ಕಾಮೆಂಟ್ ಬಾಕ್ಸ್‌ನಲ್ಲಿ ಕೈ ಎತ್ತಿದ್ದಾರೆ!' ಸದ್ಯ ಈ ಉದ್ಯೋಗವೂ ಭರ್ತಿಯಾಗಿದೆ. ಕರಡಿಯಾಗಿ ಆಯ್ಕೆಯಾದವರಿಗೆ, 'ನೀವೀಗ ಕಷ್ಟಪಟ್ಟು ಬಿದ್ಕೊಂಡಿದ್ದರೆ ಪ್ರಮೋಶನ್ ಸಿಗ್ತದೆ. ಆಗ ನೀವು ಸಿಂಹದ ವೇಷ ಹಾಕಬಹುದು' ಎಂದು ಬಾಸ್ ಹೇಳುತ್ತಿದ್ದಾರಂತೆ.

ಏಜ್ ಈಸ್ ಜಸ್ಟ್ ಎ ನಂಬರ್

ವಯಸ್ಸು ಕೇವಲ ನಂಬರ್ ಅಷ್ಟೇ ಅನ್ನುವ ಮಾತು ನಿಜವೆನ್ನಿಸುವಂತಹ ಘಟನೆಗಳು ಕೆಲವೊಮ್ಮೆ ನಡೆಯುತ್ತವೆ. ಅಂತಹದ್ದೇ ಒಂದು ಸುದ್ದಿ ಇದು.

ಅಂಕಿತ್ ಎಂಬ ಯುವಕರೊಬ್ಬರು ತಮ್ಮ ಇಳಿವಯಸ್ಸಿನ ತಾತನನ್ನು 18 ಸಾವಿರ ಅಡಿ ಎತ್ತರದಿಂದ ಸ್ಕೈಡೈವ್ ಮಾಡಿಸಿದ್ದಾರೆ. ಹಾಗಂತ ಈ ಅಜ್ಜ ಆಕಾಶದಿಂದ

ಭೂಮಿಗೆ ಜಿಗಿಯುತ್ತಿರುವುದು ಇದೇ ಮೊದಲೇನಲ್ಲ, ಕಳೆದ ಬಾರಿ ಇವರು 15 ಸಾವಿರ ಅಡಿಯಿಂದ ಡೈವ್ ಮಾಡಿದ್ದರು. ಈ ಬಾರಿ ಮೊಮ್ಮಗನೊಂದಿಗೆ ಆಸ್ಟ್ರೇಲಿಯಾಗೆ ತೆರಳಿದವರು ಅಲ್ಲಿ ಇನ್ನೂ ಮೂರು ಸಾವಿರ ಅಡಿ ಮೇಲೆ ಹೋಗಿ 18 ಸಾವಿರ ಅಡಿ ಎತ್ತರದಿಂದ ಜಿಗಿದಿದ್ದಾರೆ. ಈ ಸಂದರ್ಭ ಮೊಮ್ಮಗ 'ಭಯ ಆಗ್ತಾ ಇದ್ಯಾ' ಎಂದು ಕೇಳಿದ್ದಾರೆ. ಅದಕ್ಕೆ ಅಜ್ಜ, 'ಯಾವನಿಗೆ ಭಯಾ? ನಾವ್ ಗೊತ್ತಿಲ್ಲಾ' ಎಂದು ಡೈಲಾಗ್ ಹೊಡೆದಿದ್ದಾರೆ. ಅಷ್ಟೇ ಅಲ್ಲದೆ, ವಿಮಾನದಿಂದ ಜಿಗಿದು ಆಕಾಶದಲ್ಲಿ ತೇಲುತ್ತಿರುವಾಗ ಅಜ್ಜ ಫುಲ್ ಜೋಶ್‌ನಲ್ಲಿ 'ಜೈ ಹಿಂದ್, ಜೈ ಭಾರತ್, ಜೈ ಹರಿಯಾಣ' ಎಂದು ಗಟ್ಟಿಯಾಗಿ ಘೋಷಣೆ ಕೂಗಿದ್ದಾರೆ. ಈ ಎಂಟೆದೆ ಬಂಟ ಅಜ್ಜನನ್ನು ನೋಡಿ ಯುವಕರೂ ನಾಚುತ್ತಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಮತ್ತೆ ಯುದ್ಧ ಭೀತಿ

ಅಮೆರಿಕ-ಇರಾನ್ ದಾಳಿ, ಪ್ರತಿದಾಳಿ | ಶಾಂತಿ ಒಪ್ಪಂದ ಮಾತುಕತೆ ಬಹಿಷ್ಕರಿಸುವ ಎಚ್ಚರಿಕೆ ನೀಡಿದ ಟೆಹರಾನ್

ಟೆಹರಾನ್: ಶಾಂತಿ ಒಪ್ಪಂದದ ಮಾತುಕತೆಯ ನಡುವೆಯೂ ಅಮೆರಿಕ-ಇರಾನ್ ಮಧ್ಯೆ ಸಂಘರ್ಷ ತೀವ್ರಗೊಂಡಿದೆ. ಉಭಯ ದೇಶಗಳ ದಾಳಿ, ಪ್ರತಿದಾಳಿಯಿಂದ ಮಧ್ಯಪ್ರಾಚ್ಯ ಬಿಕ್ಕಟ್ಟು ಮತ್ತೆ ಬಿಗಡಾಯಿಸಿದೆ. ಅನಿವಾರ್ಯವಾದರೆ ಸೇನಾ ಕಾರ್ಯಾಚರಣೆ ಮುಂದುವರಿಯಲಿದೆ ಎಂಬ ಅಮೆರಿಕ ಅಧ್ಯಕ್ಷರ ಮಾತು, ಯುದ್ಧದ ಭೀತಿಯನ್ನು ಮತ್ತಷ್ಟು ಹೆಚ್ಚಿಸಿದೆ.

ಹರ್ಮುಜ್ ಜಲಸಂಧಿಯಲ್ಲಿ ಸಂಚರಿಸುತ್ತಿದ್ದ ಹಡಗುಗಳ ಮೇಲೆ ದಾಳಿ ಬೆನ್ನಿಗೆ ಇರಾನ್‌ನ 10 ಪ್ರಮುಖ ಸೇನಾ ನೆಲೆಗಳ ಮೇಲೆ ಅಮೆರಿಕ ವೈಮಾನಿಕ ದಾಳಿ ನಡೆಸಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೂಚನೆಯಂತೆ ಇರಾನ್ ಕಣ್ಗಾವಲು ವ್ಯವಸ್ಥೆ, ಸೇನಾ ಮೂಲಸೌಲಭ್ಯ, ವಾಯು ರಕ್ಷಣಾ ನೆಲೆಗಳು, ಡ್ರೋನ್, ಕ್ಷಿಪಣಿ ಸಂಗ್ರಹಾಗಾರಗಳ ಮೇಲೆ ಅಮೆರಿಕ ಪಡೆಗಳು ದಾಳಿ ನಡೆಸಿವೆ. ದಕ್ಷಿಣ ಇರಾನ್‌ನ ಸಿರಿಕ್ ಸೇರಿ ಹಲವು ಕಡೆ ಬಾಂಬ್ ಸ್ಫೋಟದ ಸದ್ದುಗಳು ಕೇಳಿ ಬಂದಿವೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ''ಜಲಮಾರ್ಗದಲ್ಲಿ ವಾಣಿಜ್ಯ ಹಡಗುಗಳ ಸುಗಮ ಸಂಚಾರಕ್ಕೆ ಅಡ್ಡಿಪಡಿಸಿದ ಇರಾನಿಯನ್ ನೌಕಾದಳದ ಆಯಕಟ್ಟಿನ ನೆಲೆಗಳ ಮೇಲೆ ದಾಳಿ ನಡೆಸಲಾಗಿದೆ,'' ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ಖಚಿತಪಡಿಸಿದೆ.

ಇರಾನ್ ಪ್ರತೀಕಾರದ ದಾಳಿ

ಅಮೆರಿಕ ದಾಳಿಗೆ ಪ್ರತೀಕಾರ ತೀರಿಸಿಕೊಂಡಿರುವ ಇರಾನ್, ನೆರೆಯ ಬಹರೇನ್, ಕುವೈತ್ ದೇಶಗಳಲ್ಲಿರುವ ಅಮೆರಿಕ ಸೇನಾ ನೆಲೆಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ. ಶಾಂತಿ ಒಪ್ಪಂದದ ಸೂತ್ರದಂತೆ ಅಮೆರಿಕ ಮುಂದುವರಿಯದಿದ್ದರೆ ಮಾತುಕತೆ ಬಹಿಷ್ಕರಿಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ.

ಬಹರೇನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. 8 ಅಂತಸ್ತಿನ ಕಟ್ಟಡಕ್ಕೆ ಕ್ಷಿಪಣಿ ಅಪ್ಪಳಿಸಿದೆ. ಸ್ಫೋಟದ ರಭಸಕ್ಕೆ ಕಟ್ಟಡದ ಮೇಲಿನ ಮಹಡಿ ಧ್ವಂಸಗೊಂಡಿದೆ. ಹಲವು ಮನೆಗಳ ಕಿಟಕಿ, ಗಾಜುಗಳು ಪುಡಿಪುಡಿಯಾಗಿವೆ. ಆದರೆ, ಯಾವುದೇ ಸಾವು ನೋವು ಸಂಭವಿಸಿಲ್ಲ ಎಂದು ಬಹರೇನ್ ಒಳಾಡಳಿತ ಸಚಿವಾಲಯ ಖಚಿತಪಡಿಸಿದೆ.

ಕುವೈತ್‌ನಲ್ಲಿರುವ ಅಮೆರಿಕ ಸೇನಾ ನೆಲೆ ಗುರಿಯಾಗಿಸಿಕೊಂಡು ಇರಾನ್ ಖಂಡಾಂತರ ಕ್ಷಿಪಣಿ ದಾಳಿ ನಡೆಸಿದೆ. ದೇಶದ ವಾಯು ರಕ್ಷಣಾ ವ್ಯವಸ್ಥೆ ಕ್ಷಿಪಣಿ ದಾಳಿಯನ್ನು ವಿಫಲಗೊಳಿಸಿದೆ. ಯಾವುದೇ ಹಾನಿ ಉಂಟಾಗಿಲ್ಲ ಎಂದು ಕುವೈತ್ ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.

ಸಮರ ಭೀತಿ ಹೆಚ್ಚಿಸಿದ ಟ್ರಂಪ್ ಮಾತು

''ಮಧ್ಯಂತರ ಕದನ ವಿರಾಮ ಒಪ್ಪಂದದ ಷರತ್ತು ಪಾಲಿಸದಿದ್ದರೆ ಇರಾನ್ ವಿರುದ್ಧದ ಸೇನಾ ಕಾರ್ಯಾಚರಣೆಯನ್ನು ಪುನರಾರಂಭಿಸಲಾಗುವುದು. ಬಲ ಪ್ರಯೋಗದ ಮೂಲಕವಾದರೂ ಸರಿ, ಇರಾನ್ ಸರ್ವನಾಶ ಮಾಡಲಾಗುವುದು,'' ಎಂಬ ಡೊನಾಲ್ಡ್ ಟ್ರಂಪ್ ಹೇಳಿಕೆ ಮತ್ತೊಮ್ಮೆ ಯುದ್ಧದ ಭೀತಿ ಹೆಚ್ಚಿಸಿದೆ. ''ಸಂಘರ್ಷ ಕೊನೆಗಾಣಿಸಲು ಇರಾನ್‌ಗೆ ಒಂದು ಅವಕಾಶ ನೀಡಲಾಗಿದೆ. ಒಪ್ಪಂದದ ನಿಯಮದಂತೆ ಇರಾನಿಯನ್ ಆಡಳಿತ ನಡೆದುಕೊಳ್ಳದಿದ್ದರೆ ಆರಂಭಿಸಲಾದ ಸೇನಾ ಕಾರ್ಯಾಚರಣೆಯನ್ನು ಮತ್ತಷ್ಟು ಬಲದ ಮೂಲಕ ಪೂರ್ಣಗೊಳಿಸಲಾಗುವುದು. ಪರಿಸ್ಥಿತಿ ಕೈ ಮೀರಿದರೆ ಇಸ್ಲಾಮಿಕ್ ಇರಾನ್ ಗಣರಾಜ್ಯ ಭೂಪಟದಿಂದ ನಾಪತ್ತೆಯಾಗಲಿದೆ,'' ಎಂದು ಎಚ್ಚರಿಕೆ ನೀಡಿದ್ದಾರೆ.

ಹರ್ಮುಜ್‌ಗೆ ಪರ್ಯಾಯ ಬೇಡ

''ಹರ್ಮುಜ್ ಜಲಸಂಧಿಗೆ ಪರ್ಯಾಯ ಮಾರ್ಗ ಹುಡುಕುವ ಪ್ರಯತ್ನ ಮಧ್ಯಪ್ರಾಚ್ಯ ಬಿಕ್ಕಟ್ಟನ್ನು ಮತ್ತಷ್ಟು ಬಿಗಡಾಯಿಸಲಿದೆ,'' ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘುಚಿ ಬೆದರಿಕೆ ಹಾಕಿದ್ದಾರೆ.

ಇರಾಕ್ ಪ್ರವಾಸ ಕೈಗೊಂಡಿರುವ ಅಬ್ಬಾಸ್ ಅರಾಘುಚಿ, ''ಕಳೆದ ಕೆಲವು ದಿನಗಳಿಂದ ಹರ್ಮುಜ್‌ನಲ್ಲಿ ಇರಾನ್ ಒಪ್ಪಿತ ವ್ಯವಸ್ಥೆ ಮೀರಿ ಜಲಮಾರ್ಗದಲ್ಲಿ ಹೊಸ ಹಾಗೂ ಪ್ರತ್ಯೇಕ ವ್ಯವಸ್ಥೆ ರೂಪಿಸಿಕೊಳ್ಳುತ್ತಿರುವುದು ಕಂಡುಬಂದಿದೆ. ಅನುಮತಿ ಇಲ್ಲದೇ ಹಡಗುಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸುತ್ತಿರುವುದು ಟ್ರ್ಯಾಕಿಂಗ್ ವ್ಯವಸ್ಥೆಯಲ್ಲಿ ಪತ್ತೆಯಾಗಿದೆ. ಪ್ರತ್ಯೇಕ ವ್ಯವಸ್ಥೆ ರೂಪಿಸಿಕೊಳ್ಳುವ ಪ್ರಯತ್ನ ಹರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವ ಪ್ರಯತ್ನಗಳಿಗೆ ಹಿನ್ನಡೆಯಾಗಬಹುದು,'' ಎಂದು ಎಚ್ಚರಿಕೆ ನೀಡಿದರು.

ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೆಚ್ಚುಗೆ

ರಕ್ಷಣಾ ಕ್ಷೇತ್ರದಲ್ಲಿ ಭಾರತ ಸ್ವಾವಲಂಬಿ

ಹೊಸದಿಲ್ಲಿ: ಭಾರತವು ರಕ್ಷಣೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದರು.

ಮಾಸಿಕ ಬಾನುಲಿ ಭಾಷಣ 'ಮನ್ ಕಿ ಬಾತ್'ನ 135ನೇ ಸಂಚಿಕೆಯಲ್ಲಿ ಮೋದಿ ಅವರು, ರಕ್ಷಣಾ ಕ್ಷೇತ್ರದಲ್ಲಿ 'ಮೇಕ್ ಇನ್ ಇಂಡಿಯಾ' ಅಭಿಯಾನದ ಮೂಲಕ ಭಾರತ ಸಾಧಿಸಿರುವ ಪ್ರಮುಖ ಸಾಧನೆಗಳನ್ನು ಜನತೆ ಮುಂದಿಟ್ಟರು. ದೇಶದಲ್ಲಿ ತಯಾರಿಸಲಾದ ಸಿ-295 ಸೇನಾ ಸರಕು ಸಾರಿಗೆ ವಿಮಾನದ ಚೊಚ್ಚಲ ಯಶಸ್ವಿ ಹಾರಾಟ ಮತ್ತು

ದೇಶೀಯ ತಂತ್ರಜ್ಞಾನದ ಲಾಂಗ್-ರೇಂಜ್ ಲ್ಯಾಂಡ್ ಅಟ್ಯಾಕ್ ಕ್ರೂಸ್ ಮಿಸೈಲ್ (ಎಲ್‌ಆರ್‌ಎಲ್‌ಎಸಿಎಂ) ಯಶಸ್ವಿ ಪ್ರಯೋಗವನ್ನು ಉಲ್ಲೇಖಿಸಿದ ಮೋದಿ, ಭಾರತ ಈಗ ಜಲ, ವಾಯು ಹಾಗೂ ಭೂ ಗಡಿ ರಕ್ಷಣೆಯಲ್ಲಿ ದೊಡ್ಡ ಮಟ್ಟದಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದು ಮೆಚ್ಚುಗೆ ಸೂಚಿಸಿದರು.

''ಮೇಡ್ ಇನ್ ಇಂಡಿಯಾ ಅಭಿಯಾನದಡಿ ದೇಶದಲ್ಲಿ ನಿರ್ಮಿಸಲಾದ ಸಿ-295 ಸೇನಾ ಸರಕು ಸಾರಿಗೆ ವಿಮಾನ ಜೂನ್ 10ರಂದು ಚೊಚ್ಚಲ ಹಾರಾಟವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇಂಥ 40 ವಿಮಾನಗಳನ್ನು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ ಲಿಮಿಟೆಡ್ ಹಾಗೂ ಏರ್‌ಬಸ್ ಸಹಯೋಗದಲ್ಲಿ ಗುಜರಾತಿನ ವಡೋದರಾದಲ್ಲಿ ನಿರ್ಮಿಸಲಾಗುತ್ತಿದೆ. ಇದು ಎಂಎಸ್‌ಎಂಇ ಮತ್ತು ಏರೋಸ್ಪೇಸ್ ಕ್ಷೇತ್ರಕ್ಕೆ ಹೊಸ ಶಕ್ತಿ ನೀಡುತ್ತಿದೆ. ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ,'' ಎಂದು ಮೋದಿ ಹೇಳಿದರು. ಭಾರತೀಯ ವಾಯುಪಡೆಗೆ 21,935 ಕೋಟಿ ರೂ. ವೆಚ್ಚದಲ್ಲಿ ಇಂಥ 56 ವಿಮಾನಗಳನ್ನು ಖರೀದಿಸಲಾಗುತ್ತಿದೆ ಎಂದೂ ಮಾಹಿತಿ ನೀಡಿದರು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಜೂನ್ 15ರಂದು ಒಡಿಶಾ ಕರಾವಳಿಯಲ್ಲಿ ನಡೆಸಿದ 'ಲಾಂಗ್-ರೇಂಜ್ ಲ್ಯಾಂಡ್ ಅಟ್ಯಾಕ್ ಕ್ರೂಸ್ ಮಿಸೈಲ್' ಯಶಸ್ವಿ ಪ್ರಯೋಗವು ಭಾರತದ ಶಕ್ತಿಗೆ ಬಲ ನೀಡಿದೆ ಎಂದರು.

ದೇಶದ ಕೀರ್ತಿ ಹೆಚ್ಚಿಸಿದ ಯೋಗ: ಇದೇ ವೇಳೆ, ಜೂನ್ 21ರಂದು ಜಗತ್ತಿನಾದ್ಯಂತ ಸಂಭ್ರಮದಿಂದ ಆಚರಿಸಲಾದ ಅಂತಾರಾಷ್ಟ್ರೀಯ ಯೋಗ ದಿನದ ಯಶಸ್ಸನ್ನು ಪ್ರಧಾನಿ ಕೊಂಡಾಡಿದರು. ಅಹಮದಾಬಾದ್‌ನಲ್ಲಿ ನಡೆದ 'ವಿಶ್ವ ಯೋಗ ಆಸನ ಚಾಂಪಿಯನ್‌ಶಿಪ್' ಜಾಗತಿಕ ಮಟ್ಟದಲ್ಲಿ ಭಾರಿ ಸದ್ದು ಮಾಡಿದೆ. ಈ ಕ್ರೀಡಾಕೂಟದಲ್ಲಿ ಭಾರತದ ಯೋಗಪಟುಗಳು 102 ಚಿನ್ನದ ಪದಕಗಳು ಸೇರಿದಂತೆ ಒಟ್ಟು 114 ಪದಕಗಳನ್ನು ಮುಡಿಗೇರಿಸಿಕೊಳ್ಳುವ ಮೂಲಕ ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡು ದೇಶದ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂದು ಪ್ರಶಂಸಿಸಿದರು.

ಮಣ್ಣಿನ ಗಣಪ ಖರೀದಿಸಿ

ಸೆಪ್ಟೆಂಬರ್‌ನಲ್ಲಿ ಬರಲಿರುವ ಗಣೇಶ ಚತುರ್ಥಿ ಹಬ್ಬದ ಕುರಿತು ಪ್ರಸ್ತಾಪಿಸಿದ ಮೋದಿ ಅವರು ಪರಿಸರ ಹಾಗೂ ಸಂಸ್ಕೃತಿ ರಕ್ಷಣೆ ದೃಷ್ಟಿಯಿಂದ ಸ್ಥಳೀಯ ಕುಶಲಕರ್ಮಿಗಳ ಕೈಚಳಕದಲ್ಲಿ ಮೂಡಿಬರುವ ಮಣ್ಣಿನ ಗಣಪಗಳನ್ನು ಖರೀದಿಸಿ, ಪೂಜಿಸಿ ಎಂದು ದೇಶವಾಸಿಗಳಿಗೆ ಕರೆ ನೀಡಿದರು. 'ಕ್ಯಾಚ್ ದಿ ರೇನ್' ಅಭಿಯಾನವನ್ನು ಬಲಪಡಿಸಲು ಮತ್ತು ಮಳೆಗಾಲದಲ್ಲಿ ಮಳೆನೀರಿನ ಪ್ರತಿಯೊಂದು ಹನಿಯನ್ನೂ ಸಂರಕ್ಷಿಸುವತ್ತ ಜನರು ಮುಂದಾಗಬೇಕು ಎಂದರು.

ಜಾಗತಿಕ ದಕ್ಷಿಣ ದೇಶಗಳ ಹಿತಾಸಕ್ತಿಗೆ ಬದ್ಧ

ಸಿಷೆಲ್ಸ್ ಸಂಸತ್ತು ಉದ್ದೇಶಿಸಿ ಮೋದಿ ಭಾಷಣ | ಪ್ರಧಾನಿಗೆ ಅತ್ಯುನ್ನತ ಪ್ರಶಸ್ತಿ ಪ್ರದಾನ

ವಿಕ್ಟೋರಿಯಾ: ಜಗತ್ತಿನ ದಕ್ಷಿಣದ ದೇಶಗಳು, ಅದರಲ್ಲೂ ದ್ವೀಪ ರಾಷ್ಟ್ರಗಳು ಹವಾಮಾನ ಬದಲಾವಣೆಯ ತೀವ್ರ ಪರಿಣಾಮಗಳನ್ನು ಎದುರಿಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಕಳವಳ ವ್ಯಕ್ತಪಡಿಸಿದರು.

ಸಿಷೆಲ್ಸ್ ಸಂಸತ್ತು ಉದ್ದೇಶಿಸಿ ಭಾಷಣ ಮಾಡಿದ ಮೋದಿ ಅವರು, ''ಅಭಿವೃದ್ಧಿಯು ಎಲ್ಲರನ್ನೂ ಒಳಗೊಂಡಿರಬೇಕು ಎಂಬ ಜಂಟಿ ದೃಷ್ಟಿಕೋನವನ್ನು ಭಾರತ ಮತ್ತು ಸಿಷೆಲ್ಸ್ ಹಂಚಿಕೊಂಡಿವೆ. ಜಾಗತಿಕ ದಕ್ಷಿಣದ ದೇಶಗಳ ಹಿತಾಸಕ್ತಿಗಳನ್ನು ಕಾಪಾಡಲು ಉಭಯ ದೇಶಗಳು ಬದ್ಧವಾಗಿವೆ,'' ಎಂದರು. ಹವಾಮಾನ ಬದಲಾವಣೆಗೆ ಅತ್ಯಂತ ಕಡಿಮೆ ಕೊಡುಗೆ ನೀಡಿರುವ ದೇಶಗಳು ಅದರ ಪರಿಣಾಮಗಳ ಅತಿ ದೊಡ್ಡ ಹೊರೆಯನ್ನು ಹೊರಬಾರದು,'' ಎಂದು ಹೇಳಿದರು. ಸಿಷೆಲ್ಸ್ ಸಂಸತ್ತು ಉದ್ದೇಶಿಸಿ ಮಾತನಾಡಿದ ಭಾರತದ ಮೊದಲ ಪ್ರಧಾನಿ ಎಂಬ ಹಿರಿಮೆಗೂ ಮೋದಿ ಪಾತ್ರರಾದರು.

ಸಿಷೆಲ್ಸ್‌ಗೆ ₹1,460 ಕೋಟಿ ಪ್ಯಾಕೇಜ್ ಘೋಷಣೆ

''ಭಾರತ ಮತ್ತು ಸಿಷೆಲ್ಸ್ ನಡುವಿನ ರಾಜತಾಂತ್ರಿಕ ಸಂಬಂಧಗಳು 50 ವರ್ಷ ಪೂರೈಸಿದ್ದರೂ, ಉಭಯ ದೇಶಗಳ ನಡುವಿನ ಪರಸ್ಪರ ಬದ್ಧತೆ ಮಾತ್ರ ಕಿಂಚಿತ್ತೂ ಬದಲಾಗಿಲ್ಲ'' ಎಂದು ಪ್ರತಿಪಾದಿಸಿದರು. ದಶಕಗಳಿಂದ ಉಭಯ ದೇಶಗಳ ರಕ್ಷಣಾ ಪಡೆಗಳು, ಕಡಲು ಕಾವಲು ಪಡೆಗಳು ಪರಸ್ಪರ ಸಹಕಾರದೊಂದಿಗೆ ಒಟ್ಟಿಗೆ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಹಿಂದೂ ಮಹಾಸಾಗರದಲ್ಲಿ ಭಾರತವು ಸಿಷೆಲ್ಸ್‌ಗೆ ವಿಶೇಷ ಸ್ಥಾನ ನೀಡಿದ್ದು, ಅದು ನಮ್ಮ ಬಾಂಧವ್ಯವನ್ನು ಬಲಪಡಿಸಿದೆ ಎಂದರು. ಇದೇ ವೇಳೆ ಮೋದಿ ಅವರು ಸಿಷೆಲ್ಸ್‌ಗೆ 1,460 ರೂ. ಕೋಟಿ ಪ್ಯಾಕೇಜ್ ಘೋಷಿಸಿದರು.

ಅವಕಾಶಗಳ ಸಾಗರ: ಇದಕ್ಕೂ ಮೊದಲು ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ ನಂತರ ಮೋದಿ ಅವರು, ''ಹಿಂದೂ ಮಹಾಸಾಗರವನ್ನು 'ಅವಕಾಶಗಳ ಸಾಗರ'ವನ್ನಾಗಿ ಮಾಡುವ ದೃಷ್ಟಿಕೋನವನ್ನು ಭಾರತ ಹೊಂದಿದೆ. ಹಿಂದೂ ಮಹಾಸಾಗರವು ಉಭಯ ದೇಶಗಳಿಗೆ ಮನೆ ಇದ್ದಂತೆ. ಅದರ ರಕ್ಷಣೆ, ಸುಸ್ಥಿರತೆ ಮತ್ತು ಸಮೃದ್ಧಿಯು ನಮ್ಮ ಜವಾಬ್ದಾರಿ,'' ಎಂದರು.

ಮೋದಿಗೆ 34ನೇ ಅಂತಾರಾಷ್ಟ್ರೀಯ ಗೌರವ

ಪರಿಸರ ಸಂರಕ್ಷಣೆಗಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಿಷೆಲ್ಸ್ ದೇಶದ ಅತ್ಯುನ್ನತ 'ಗಾರ್ಡಿಯನ್ ಆಫ್ ದಿ ಬ್ಲೂ ಹೊರೈಜನ್' ಪ್ರಶಸ್ತಿ ನೀಡಿ

ಗೌರವಿಸಲಾಗಿದೆ. ಸುಸ್ಥಿರ ಅಭಿವೃದ್ಧಿ ಮತ್ತು ಹಸಿರು ಬೆಳವಣಿಗೆಗೆ ಮೋದಿ ನೀಡಿದ ಕೊಡುಗೆಯನ್ನು ಈ ಪ್ರಶಸ್ತಿ ಶ್ಲಾಘಿಸಿದೆ. ಇದು ಮೋದಿ ಅವರು ವಿದೇಶಿ ರಾಷ್ಟ್ರದಿಂದ ಪಡೆದ 34ನೇ ಅಂತಾರಾಷ್ಟ್ರೀಯ ಗೌರವವಾಗಿದೆ. ಪ್ರಧಾನಿ ಮೋದಿ ಮೂರು ದಿನಗಳ ಸಿಷೆಲ್ಸ್ ಪ್ರವಾಸದಲ್ಲಿದ್ದು, ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಇದೇ ವೇಳೆ, ಭಾರತದಲ್ಲಿ ತಯಾರಿಸಿದ 'ಪಿಎಸ್ ಲೆಸ್‌ಪ್ವಾರ್' ಗಸ್ತು ನೌಕೆಯನ್ನು ಸಿಷೆಲ್ಸ್‌ಗೆ ಹಸ್ತಾಂತರಿಸಲಾಗಿದೆ. ಇದು ಎರಡೂ ದೇಶಗಳ ರಕ್ಷಣಾ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲಿದ್ದು, ಹಿಂದೂ ಮಹಾಸಾಗರ ಪ್ರದೇಶದ ಭದ್ರತೆಗೆ ಸಹಕಾರಿಯಾಗಲಿದೆ.

ಯುಪಿಐ ವ್ಯವಸ್ಥೆ ಸೇರಿ 19 ಒಪ್ಪಂದಗಳಿಗೆ ಸಹಿ

ಭಾರತ ಮತ್ತು ಸಿಷೆಲ್ಸ್ ನಡುವೆ ರಕ್ಷಣೆ, ಡಿಜಿಟಲ್ ಪಾವತಿ, ಬಾಹ್ಯಾಕಾಶ ಮತ್ತು ಆರೋಗ್ಯ ಸೇರಿದಂತೆ 19 ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ರಕ್ಷಣೆ, ಕಡಲ ಭದ್ರತೆ, ಡಿಜಿಟಲ್ ಪಾವತಿಗಳು, ಬಾಹ್ಯಾಕಾಶ, ಆರೋಗ್ಯ ಸೇವೆ, ಕೃಷಿ ಮತ್ತು ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರವನ್ನು ವಿಸ್ತರಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಭಾರತದ ಎಚ್‌ಎಲ್‌ಎಲ್ ಲೈಫ್ ಕೇರ್ ಲಿಮಿಟೆಡ್ ಮತ್ತು ಸಿಷೆಲ್ಸ್ ಆರೋಗ್ಯ ಸಚಿವಾಲಯದ ನಡುವೆ 'ಜನೌಷಧಿ ಯೋಜನೆ'ಯಡಿ ಒಪ್ಪಂದವಾಗಿದ್ದು, ಇದರ ಮೂಲಕ ಸಿಷೆಲ್ಸ್ ಜನತೆಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಭಾರತದ ಔಷಧಗಳು ಲಭ್ಯವಾಗಲಿವೆ.

ವೆನೆಜುವೆಲಾಗೆ ಭಾರತ ನೆರವಿನ ಹಸ್ತ

ಭೂಕಂಪದಿಂದ ಕಂಗೆಟ್ಟಿರುವ ವೆನೆಜುವೆಲಾಗೆ ಮಾನವೀಯ ನೆಲೆಯಲ್ಲಿ ಭಾರತವು 'ಆಪರೇಷನ್ ಅಮಿಸ್ತಾದ್' ಕಾರ್ಯಾಚರಣೆಯಡಿ 66 ಟನ್ ಪರಿಹಾರ ಸಾಮಗ್ರಿಯನ್ನು ವಾಯುಪಡೆಯ ಸಿ-17 ಗ್ಲೋಬ್‌ಮಾಸ್ಟರ್ ವಿಮಾನದ ಮೂಲಕ ರವಾನಿಸಿದೆ.

ನೀವೇ ಪೋಷಿಸಿದ ಉಗ್ರರನ್ನು ಮಟ್ಟ ಹಾಕಿ

ಪಾಕಿಸ್ತಾನಕ್ಕೆ ಭಾರತ ಖಡಕ್ ತಿರುಗೇಟು

ಹೊಸದಿಲ್ಲಿ: ಕರಾಚಿಯಲ್ಲಿ ಸೇನಾ ನೆಲೆ ಮೇಲೆ ನಡೆದ ಉಗ್ರ ದಾಳಿಯ ಹೊಣೆಯನ್ನು ಭಾರತದ ತಲೆಗೆ ಕಟ್ಟಲು ಯತ್ನಿಸಿದ ಪಾಕಿಸ್ತಾನಕ್ಕೆ ಭಾರತ ತಿರುಗೇಟು ನೀಡಿದೆ. ಆಧಾರರಹಿತ ಆರೋಪ ಮಾಡುವ ಬದಲು ನಿಮ್ಮ ನೆಲದಲ್ಲಿರುವ ಉಗ್ರರ ನೆಲೆಗಳನ್ನು ನಾಶಪಡಿಸುವತ್ತ ಗಮನ ಹರಿಸಿ, ನೀವೇ ಪೋಷಿಸಿದ ಉಗ್ರರನ್ನು ಮೊದಲು ಮಟ್ಟ ಹಾಕಿ ಎಂದು ಕುಟುಕಿದೆ.

''ಭಾರತದ ವಿರುದ್ಧ ಆಧಾರ ರಹಿತ ಆರೋಪ ಮಾಡುವ ಬದಲು ಒಡಲೊಳಗಿರುವ ಉಗ್ರ ಪೋಷಾಕು ಕಳಚಿಕೊಳ್ಳಿ. ದೇಶದೊಳಗಿನ ಆಂತರಿಕ ಸಂಘರ್ಷಕ್ಕೆ ಬೇರೆಯವರತ್ತ ಬೆರಳು ತೋರಿಸುವ ಮೊದಲು ಆತ್ಮಾವಲೋಕನ ಮಾಡಿಕೊಳ್ಳಿ. ಉಗ್ರ ಸಂಘಟನೆಗಳ ನಿರ್ಮೂಲನೆಗೆ ಕ್ರಮ ಕೈಗೊಳ್ಳಿ,'' ಎಂದು ಭಾರತ ಸರಕಾರ ಖಡಕ್ ಎಚ್ಚರಿಕೆ ನೀಡಿದೆ.

''ಕರಾಚಿಯ ಸಿಂಧ್ ರೇಂಜರ್ಸ್ ಮೇಲೆ ನಡೆದ ಉಗ್ರ ದಾಳಿಯಲ್ಲಿ ಭಾರತದ ಕೈವಾಡವಿದೆ ಎಂಬ ಪಾಕಿಸ್ತಾನದ ಆರೋಪ, 'ತಾನು ಕಳ್ಳ, ಪರರನ್ನು ನಂಬ' ಎಂಬ ಗಾದೆ ಮಾತಿನಂತಿದೆ. ಬೇರೆಯವರ ಮೇಲೆ ಆರೋಪ ಮಾಡುವ ಬದಲು ತಮ್ಮ ಭೂಪ್ರದೇಶದಲ್ಲಿರುವ ಉಗ್ರರ ವಿರುದ್ಧ ವಿಶ್ವಾಸಾರ್ಹ ಕ್ರಮ ಕೈಗೊಳ್ಳಲಿ. ಭಯೋತ್ಪಾದನೆಯನ್ನು ರಾಜ್ಯ ನೀತಿಯಾಗಿ ಬಳಸಿಕೊಳ್ಳುವ ಬದಲು ನಿರ್ಮೂಲನೆಗೆ ಕ್ರಮ ಕೈಗೊಳ್ಳುವುದು ಒಳಿತು,'' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿರುಗೇಟು ನೀಡಿದ್ದಾರೆ. ''ಉಗ್ರ ದಾಳಿಗೆ ಭಾರತ ಕಾರಣ ಎಂಬ ಪಾಕಿಸ್ತಾನದ ಆರೋಪ ಆಧಾರರಹಿತ. ಸುಳ್ಳು ಆರೋಪ ಮಾಡುವುದು ಪಾಕಿಸ್ತಾನದ ಚಾಳಿಯಾಗಿದೆ. ಸಲ್ಲದ ಆರೋಪಗಳನ್ನು ಭಾರತ ಸ್ಪಷ್ಟವಾಗಿ ತಿರಸ್ಕರಿಸುತ್ತದೆ,'' ಎಂದು ಜೈಸ್ವಾಲ್ ಹೇಳಿದ್ದಾರೆ.

ಕರಾಚಿಯಲ್ಲಿ ಮುಂಬಯಿ ಮಾದರಿ ದಾಳಿ: ಶನಿವಾರ ತಡರಾತ್ರಿ ಕರಾಚಿ ಮೇಲೆ ಉಗ್ರರು ದಾಳಿ ನಡೆಸಿದ್ದರು. 2028ರ ನವೆಂಬರ್ 28ರಂದು ಮುಂಬಯಿ ಮೇಲೆ ನಡೆದ ದಾಳಿಯಂತೆ ಸಿಂಧ್ ರೇಂಜರ್ಸ್ ಪ್ರಾಂತೀಯ ಕಚೇರಿ ಗುರಿಯಾಗಿಸಿಕೊಂಡು ಉಗ್ರರು ಗುಂಡಿನ ದಾಳಿ ನಡೆಸಿದ್ದರು. ನಂತರ, ಸ್ಫೋಟಕ ವಾಹನ ತುಂಬಿದ ವಾಹನವನ್ನು ನುಗ್ಗಿಸಿ ಆತ್ಮಾಹುತಿ ದಾಳಿ ನಡೆಸಿದ್ದರು. ಈ ವೇಳೆ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವೆ ಹಲವು ಸುತ್ತಿನ ಗುಂಡಿನ ಚಕಮಕಿ ನಡೆಯಿತು. 90 ನಿಮಿಷ ನಡೆದ ಕಾಳಗದಲ್ಲಿ ಆರು ಉಗ್ರರ ಹತರಾದರೆ, ಪಾಕ್ ಸೇನಾಪಡೆಯ ನಾಲ್ವರು ಯೋಧರು ಮೃತಪಟ್ಟಿದ್ದರು. ಅಫಘಾನಿಸ್ತಾನ ಮೂಲದ ಒಬ್ಬ ದಾಳಿಕೋರನನ್ನು ಭದ್ರತಾ ಪಡೆಗಳು ಬಂಧಿಸಿದ್ದವು. ದಾಳಿಯ ಹೊಣೆಯನ್ನು ಜಮಾತ್ ಉಲ್ ಅಹ್ರರ್ ಉಗ್ರ ಸಂಘಟನೆ ಹೊತ್ತುಕೊಂಡಿದೆ.

ವಿಕ ಈ ದಿನ ವಿಶೇಷ | ಜೂನ್ 29

ಅಂತಾರಾಷ್ಟ್ರೀಯ ಉಷ್ಣವಲಯ ದಿನ

ಪ್ರಪಂಚದ ಶೇ.40ರಷ್ಟು ಭೂ ಪ್ರದೇಶ ಉಷ್ಣವಲಯವಾಗಿದ್ದು, ಶೇ.80ರಷ್ಟು ಜೀವವೈವಿಧ್ಯವನ್ನು ತನ್ನಲ್ಲಿ ಹುದುಗಿಸಿಕೊಂಡಿದೆ. ಉಷ್ಣವಲಯ ಎದುರಿಸುತ್ತಿರುವ ಸವಾಲುಗಳು ಹಾಗೂ ಅದರ ಸಂರಕ್ಷಣೆ ಕುರಿತಾಗಿ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಿಶ್ವಸಂಸ್ಥೆ ಜೂನ್ 29ರಂದು ಅಂತಾರಾಷ್ಟ್ರೀಯ ಉಷ್ಣವಲಯ ದಿನವನ್ನಾಗಿ ಘೋಷಿಸಿದೆ.

ರಾಷ್ಟ್ರೀಯ ಅಂಕಿ-ಅಂಶ ದಿನ

ಪ್ರಶಾಂತಚಂದ್ರ ಮಹಾಲನೋಬಿಸ್ ಅವರು ಭಾರತದ ಅಂಕಿ-ಅಂಶ ಪಿತಾಮಹ ಎಂದೇ ಹೆಸರು ಗಳಿಸಿದ್ದಾರೆ.

ಭಾರತೀಯ ಅಂಕಿ-ಅಂಶ ಸಂಸ್ಥೆ (ಐಎಸ್‌ಐ) ಸ್ಥಾಪನೆಯಲ್ಲಿ ಅವರು ಮಹತ್ತರ ಪಾತ್ರ ನಿರ್ವಹಿಸಿದ್ದರು. ಅವರು 1893ರ ಜೂನ್ 29ರಂದು ಕೋಲ್ಕೊತಾದಲ್ಲಿ ಜನಿಸಿದರು. ಅವರ ಸ್ಮರಣಾರ್ಥ ಜೂನ್ 29ರಂದು ದೇಶದಲ್ಲಿ ರಾಷ್ಟ್ರೀಯ ಅಂಕಿಅಂಶ ದಿನವನ್ನಾಗಿ ಆಚರಿಸಲಾಗುತ್ತದೆ.

ಪ್ರತ್ಯೇಕ ವೈಮಾನಿಕ ಅಪಘಾತ, ಒಂದೇ ದಿನ 25 ಮಂದಿ ಸಾವು

ರಿಯಾದ್/ಪ್ಯಾರಿಸ್: ಸೌದಿ ಅರೇಬಿಯಾ ಮತ್ತು ಫ್ರಾನ್ಸ್‌ನಲ್ಲಿ ಭಾನುವಾರ ಸಂಭವಿಸಿದ ಎರಡು ಪ್ರತ್ಯೇಕ ವೈಮಾನಿಕ ಅಪಘಾತಗಳಲ್ಲಿ ಒಟ್ಟು 25 ಮಂದಿ ಮೃತಪಟ್ಟಿದ್ದಾರೆ.

ಸೌದಿಯಲ್ಲಿ ಕಾಪ್ಟರ್, ಫ್ರಾನ್ಸ್‌ನಲ್ಲಿ ವಿಮಾನ ಪತನ

ಸೌದಿ ಅರೇಬಿಯಾದ ತೈಲ ಸಂಸ್ಕರಣಾ ಕಂಪನಿ 'ಅರಾಮ್ಕೊ'ಗೆ ಸೇರಿದ ಹೆಲಿಕಾಪ್ಟರ್ ಭಾನುವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ಪತನಗೊಂಡಿದ್ದು, ಅದರಲ್ಲಿದ್ದ ಎಲ್ಲಾ 14 ಜನರು ಮೃತಪಟ್ಟಿದ್ದಾರೆ. ದೇಶದ ಪೂರ್ವ ಭಾಗದ ಬೃಹತ್ ತೈಲ ಸಂಸ್ಕರಣಾ ಘಟಕ ರಾಸ್ ತನುರಾ ಬಳಿ ಈ ಅವಘಡ ಸಂಭವಿಸಿದೆ. ಮೃತಪಟ್ಟ ಎಲ್ಲರೂ ಸೌದಿ ನಿವಾಸಿಗಳಾಗಿದ್ದು, ಕಾಪ್ಟರ್ ಪತನದ ಕಾರಣ ಪತ್ತೆಗೆ ತನಿಖೆ ನಡೆಸಲಾಗುತ್ತಿದೆ ಎಂದು ಸೌದಿ ಅರೇಬಿಯಾದ ಮಾಧ್ಯಮಗಳು ವರದಿ ಮಾಡಿವೆ.

'ಅರಾಮ್ಕೊ' ಸಂಸ್ಥೆಯು ಸೌದಿ ಅರೇಬಿಯಾದಲ್ಲಿ ಸುಮಾರು 60 ವಿಮಾನ ಮತ್ತು 21 ಹೆಲಿಕಾಪ್ಟರ್‌ಗಳನ್ನು ಕಾರ್ಯಾಚರಿಸುತ್ತದೆ. ಹರ್ಮುಜ್ ಉದ್ವಿಗ್ನತೆ ಕೊಂಚ ಕಡಿಮೆಯಾದ ಹಿನ್ನೆಲೆಯಲ್ಲಿ ಗಲ್ಫ್ ದೇಶಗಳು ತೈಲ ಉತ್ಪಾದನೆ ಹೆಚ್ಚಿಸಿರುವ ನಡುವೆಯೇ ಈ ಅವಘಡ ನಡೆದಿದೆ. ಅಪಘಾತಕ್ಕೆ ಕ್ಷಿಪಣಿ ದಾಳಿ ಕಾರಣವಿರಬಹುದೇ ಎಂಬ ಅನುಮಾನವೂ ಇದೆ.

ಇನ್ನು, ಫ್ರಾನ್ಸ್‌ನಲ್ಲಿ ಸ್ಕೈಡೈವಿಂಗ್ ವಿಮಾನ ಪತನಗೊಂಡು ಪೈಲಟ್ ಸೇರಿದಂತೆ 11 ಮಂದಿ ಮೃತಪಟ್ಟಿದ್ದಾರೆ. ಸ್ಕೈ ಡೈವಿಂಗ್ ತರಬೇತಿ ಶಾಲೆಯನ್ನು ನಿರ್ವಹಿಸುತ್ತಿದ್ದ ವಿಮಾನವು ಸ್ಥಳೀಯ ಕಾಲಮಾನ ಬೆಳಗ್ಗೆ 11ರ ಸುಮಾರಿಗೆ ನ್ಯಾನ್ಸಿ ನಗರದ ಸ್ಥಳೀಯ ವಿಮಾನ ನಿಲ್ದಾಣದಿಂದ ಟೇಕಾಫ್ ಆಗಿದ್ದು, ಮೇಲೆ ಹಾರಿದ ಕೆಲವೇ ಕ್ಷಣಗಳಲ್ಲಿ ಪತನಗೊಂಡಿದೆ. ವಿಮಾನದಲ್ಲಿ ಪೈಲಟ್ ಜತೆಗೆ ಐವರು ಸ್ಕೈಡೈವರ್ ವಿದ್ಯಾರ್ಥಿಗಳು, ಐವರು ಮಾರ್ಗದರ್ಶಕರು ಇದ್ದರು. ತಾಂತ್ರಿಕ ಕಾರಣದಿಂದ ವಿಮಾನ ಪತನಗೊಂಡಿರಬಹುದೆಂದು ಶಂಕೆ ವ್ಯಕ್ತಪಡಿಸಲಾಗಿದ್ದು, ಫ್ರೆಂಚ್ ಸರಕಾರ ತನಿಖೆಗೆ ಆದೇಶಿಸಿದೆ.

ದೇಣಿಗೆ ಕಳ್ಳರ ನಿವಾಸಗಳ ಮೇಲೆ ಪೊಲೀಸರ ದಾಳಿ

ಲಖನೌ: ಅಯೋಧ್ಯೆಯ ರಾಮ ಮಂದಿರದ ದೇಣಿಗೆ ಕಳ್ಳತನ ಪ್ರಕರಣ ಸಂಬಂಧ ಬಂಧಿತರಾಗಿರುವ ಎಂಟು ಆರೋಪಿಗಳ ನಿವಾಸಗಳ ಮೇಲೆ ಭಾನುವಾರ ದಾಳಿ ನಡೆಸಿರುವ ವಿಶೇಷ ತನಿಖಾ ದಳದ ಪೊಲೀಸರು ಶೋಧ ನಡೆಸಿದ್ದಾರೆ.

ಸ್ಥಳೀಯ ನ್ಯಾಯಾಧೀಶರ ಜತೆಗೂಡಿ ಆರೋಪಿಗಳಾದ ಲವ ಕುಶ್ ಮಿಶ್ರಾ, ಅವಿನಾಶ್ ಶುಕ್ಲಾ, ರಾಮಶಂಕರ್ ಯಾದವ್ ಸೇರಿದಂತೆ 8 ಆರೋಪಿಗಳ ಮನೆಗಳಲ್ಲಿ ಪೊಲೀಸರ ಆರು ತಂಡಗಳು ಶೋಧ ನಡೆಸಿವೆ. ಆರೋಪಿಗಳ ಜತೆಗೆ ಮನೆಯ ಸದಸ್ಯರನ್ನು ವಿಚಾರಣೆಗೆ ಒಳಪಡಿಸಿವೆ. ಆರೋಪಿಗಳ ಹಣಕಾಸು ವ್ಯವಹಾರ, ಆರೋಪಿಗಳ ಜತೆ ನಂಟು ಹೊಂದಿದ ಜನರು ಮತ್ತು ಅವರ ಸಂಶಯಾಸ್ಪದ ಚಟುವಟಿಕೆ ಕುರಿತು ನೆರೆಮನೆಯವರು, ಸ್ಥಳೀಯ ಜನರಿಂದ ಪೊಲೀಸರು ಮಾಹಿತಿ ಸಂಗ್ರಹಿಸಿದರು.

ಇದುವರೆಗೂ 80 ಲಕ್ಷ ರೂ. ನಗದು ಜಪ್ತಿ

80 ಲಕ್ಷ ರೂ. ನಗದು ಜಪ್ತಿ: ಎಂಟು ಆರೋಪಿಗಳ ನಿವಾಸಗಳ ಮೇಲೆ ದಾಳಿ ನಡೆಸಿರುವ ಪೊಲೀಸರು, ಮಹತ್ವದ ದಾಖಲೆಗಳು, ಕಳವು ಮಾಡಲಾದ ದೇಣಿಗೆ ಹಣ ವಶಪಡಿಸಿಕೊಂಡಿದ್ದಾರೆ. ತನಿಖಾಧಿಕಾರಿಗಳು ಇಲ್ಲಿಯವರೆಗೆ 79.85 ಲಕ್ಷ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ ಮೂಲಗಳು ತಿಳಿಸಿವೆ.

ಹಣದ ಕಳ್ಳ ಸಾಗಣೆ ಬಹಿರಂಗ: ಈ ಮಧ್ಯೆ, ದೇಣಿಗೆ ಹಣ ಕಳವು ತನಿಖೆ ಮುಂದುವರಿಸಿದ ಪೊಲೀಸರಿಗೆ ಮಹತ್ವದ ಸುಳಿವು ಲಭಿಸಿದೆ. ಆರೋಪಿಗಳಲ್ಲಿ ಒಬ್ಬ ಹಣ ಸಾಗಿಸುತ್ತಿರುವ 24 ಸೆಕೆಂಡ್‌ಗಳ ಸಿಸಿಟಿವಿ ದೃಶ್ಯ ಲಭಿಸಿದೆ. ಬಂಧಿತ ಆರೋಪಿಗಳಲ್ಲಿ ಒಬ್ಬನಾದ ಅವಿನಾಶ್ ಶುಕ್ಲಾ ಕಪ್ಪು ಬಣ್ಣದ ಬ್ಯಾಗ್‌ನಲ್ಲಿ ನಗದು ಸಾಗಿಸುತ್ತಿರುವುದು ಪತ್ತೆಯಾಗಿದೆ. ಕೆಲ ಆರೋಪಿಗಳ ಆಸ್ತಿ 100 ಪಟ್ಟು ಹೆಚ್ಚಾಗಿರುವುದು ತಿಳಿದುಬಂದಿದೆ.

ವಕೀಲರೇ ಸಿಗುತ್ತಿಲ್ಲ: ಆರೋಪಿಗಳ ಪರವಾಗಿ ನ್ಯಾಯಾಲಯದಲ್ಲಿ ವಕಾಲತ್ತು ವಹಿಸಲು ಅಯೋಧ್ಯೆ ವಕೀಲರ ಸಮುದಾಯ ನಿರಾಕರಿಸಿದೆ.

ಮಾನಸ ಸರೋವರ ಯಾತ್ರಿಕರಿಗೆ ಎಚ್ಚರಿಕೆ

ನೇಪಾಳದಲ್ಲಿ ಸಂಕಷ್ಟಕ್ಕೆ ಸಿಲುಕಿದ ಹಲವು ಪ್ರವಾಸಿಗರು

ಹೊಸದಿಲ್ಲಿ: ಮಾನಸ ಸರೋವರ ಯಾತ್ರಿಕರು ನಕಲಿ ಪ್ರವಾಸ ಆಯೋಜಕರಿಂದ ವಂಚನೆಗೆ ಒಳಗಾಗುವ ಸಾಧ್ಯತೆ ಬಗ್ಗೆ ಕೇಂದ್ರ ಸರಕಾರ ಯಾತ್ರಿಕರಿಗೆ ಎಚ್ಚರಿಕೆ ನೀಡಿದೆ.

ಪ್ರವಾಸ ಆಯೋಜಕರು ಅಧಿಕೃತವಾಗಿ ಸರಕಾರದಿಂದ ನೋಂದಣಿ ಮತ್ತು ಅನುಮೋದನೆ ಪಡೆದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಮತ್ತು ಅನಧಿಕೃತ ಟೂರಿಸ್ಟ್ ಆಪರೇಟರ್‌ಗಳ ವಂಚನೆ ಜಾಲಕ್ಕೆ ಸಿಲುಕದಂತೆ ಸರಕಾರ ಸೂಚಿಸಿದೆ. ನೇಪಾಳದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಹಲವರಿಂದ ನೆರವು ಕೋರಿ ಸರಣಿ ಕರೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಸರಕಾರ ಈ ಎಚ್ಚರಿಕೆ ನೀಡಿದೆ.

''ಖಾಸಗಿ ಪ್ರವಾಸ ಆಯೋಜಕರ ಮೂಲಕ ಕೈಲಾಸ ಮಾನಸ ಸರೋವರ ಯಾತ್ರೆಗೆ ತೆರಳಿರುವ ಹಲವು ಭಾರತೀಯರು ನೇಪಾಳದಲ್ಲಿ ತ್ರಿಶಂಕು ಸ್ಥಿತಿಗೆ ಸಿಲುಕಿದ್ದು, ನೆರವು ಯಾಚಿಸಿ ಕರೆ ಮಾಡುತ್ತಿದ್ದಾರೆ. ಎಂಟ್ರಿ ಪರ್ಮಿಟ್ ಮತ್ತು ಚೀನಾದ ವೀಸಾ ಪಡೆಯದೆಯೇ ಯಾತ್ರೆಗೆ ತೆರಳಿದರೆ ಅನುಮತಿ ನಿರಾಕರಿಸಲಾಗುತ್ತದೆ. ಪ್ರವಾಸ ಆರಂಭಿಸುವ ಮುನ್ನ ಯಾತ್ರಿಗಳು ಅಗತ್ಯ ಪ್ರವಾಸ ದಾಖಲೆಗಳು ಮತ್ತು ಅನುಮತಿಗಳನ್ನು ಪಡೆಯುವುದು ಕಡ್ಡಾಯ,'' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಈ ವರ್ಷ ಜೂನ್-ಆಗಸ್ಟ್ ಅವಧಿಯಲ್ಲಿ ಉತ್ತರಾಖಂಡದ ಲಿಪುಲೇಖ್ ಪಾಸ್ ಹಾಗೂ ಸಿಕ್ಕಿಂನ ನಾಥು ಲಾ ಪಾಸ್ ಮೂಲಕ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಘೋಷಿಸಿತ್ತು. ಭಾರತ-ಚೀನಾ ನಡುವೆ ಉದ್ವಿಗ್ನ ಸಂಬಂಧದ ಹಿನ್ನೆಲೆಯಲ್ಲಿ 2020ರಿಂದ ಸ್ಥಗಿತಗೊಂಡಿದ್ದ ಮಾನಸ ಸರೋವರ ಯಾತ್ರೆಯನ್ನು ಕಳೆದ ವರ್ಷದಿಂದ ಪುನರಾರಂಭಿಸಲಾಗಿದೆ.

ಈ ವರ್ಷ ಸ್ವದೇಶಕ್ಕೆ ವಾಪಸ್: ಹಸೀನಾ ವಿಶ್ವಾಸ

ಹೊಸದಿಲ್ಲಿ: ''ನಾನು ಅಧಿಕಾರಕ್ಕಾಗಿ ರಾಜಕಾರಣ ಮಾಡು'ವುದಿಲ್ಲ, ಜನರ ಕಲ್ಯಾಣ ನನ್ನ ಉದ್ದೇಶವಾಗಿದ್ದು, ನಾನು ಈ ವರ್ಷ ಬಾಂಗಾದೇಶಕ್ಕೆ ಹಿಂದಿರುಗುತ್ತೇನೆ,'' ಎಂದು ಬಾಂಗ್ಲಾದ ಮಾಜಿ ಪ್ರಧಾನಿ ಶೇಖ್ ಹಸೀನಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಖಾಸಗಿ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಹಸೀನಾ, ''ನಾನೇನೂ ದೇಶದಿಂದ ಶಾಶ್ವತವಾಗಿ ಓಡಿಬಂದಿಲ್ಲ, ಸದ್ಯ ಬಾಂಗ್ಲಾದೇಶ ಸರಕಾರವು ಕಾನೂನು ಸುವ್ಯವಸ್ಥೆ ಕಾಪಾಡಲು ವಿಫಲವಾಗಿದೆ. ಪ್ರಜೆಗಳ ಹಕ್ಕುಗಳ ರಕ್ಷಣೆ ಹಾಗೂ ಪ್ರಜಾಪ್ರಭುತ್ವ ಮೌಲ್ಯಗಳ ಮರುಸ್ಥಾಪನೆ ಮತ್ತು ತಮ್ಮ ಅವಾಮಿ ಲೀಗ್ ಪಕ್ಷದ ಕಾರ್ಯಕರ್ತರಲ್ಲಿ ಧೈರ್ಯ ತುಂಬಲು ಶೀಘ್ರ ಬಾಂಗ್ಲಾಗೆ ಮರಳುವೆ,'' ಎಂದು ಹೇಳಿದ್ದಾರೆ. ಹಾಗೆಯೇ, ಕಠಿಣ ಪರಿಸ್ಥಿತಿಯಲ್ಲಿ ತಮಗೆ ರಾಜಕೀಯ ಆಶ್ರಯ ನೀಡಿದ ಪ್ರಧಾನಿ ನರೇಂದ್ರ ಮೋದಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ''ಅವಾಮಿ ಲೀಗ್ ಪಕ್ಷವನ್ನು ನಾಯಕರಿಲ್ಲದಂತೆ ಮಾಡಲು ನ್ಯಾಯಾಂಗ ವ್ಯವಸ್ಥೆಯನ್ನು ರಾಜಕೀಯ ಸೇಡು ತೀರಿಸಿಕೊಳ್ಳುವ ಅಸ್ತ್ರವಾಗಿ ಬಳಸಲಾಗುತ್ತಿದೆ. ಈ ಹಿಂದೆಯೂ ಅಂತಹ ಪ್ರಯತ್ನ ನಡೆದಿದ್ದವು. ಆಗಲೂ ಅವರು ಸೋತಿದ್ದರು. ಈಗಲೂ ಸೋಲುತ್ತಾರೆ,'' ಎಂದಿದ್ದಾರೆ.

Quick ನ್ಯೂಸ್

- ನೀಟ್ ಪ್ರಶ್ನೆಪತ್ರಿಕೆ ಸೋರಿಕೆ, ಸಿಬಿಎಸ್‌ಇ ಡಿಜಿಟಲ್ ಮೌಲ್ಯಮಾಪನ ಎಡವಟ್ಟಿನ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯಿಸಿ ದಿಲ್ಲಿಯ ಜಂತರ್ ಮಂತರ್‌ನಲ್ಲಿ ಕಾಕ್ರೋಚ್ ಜನತಾ ಪಕ್ಷ ನಡೆಸುತ್ತಿರುವ ಪ್ರತಿಭಟನೆಗೆ ಕೈಜೋಡಿಸಿದ ಪರಿಸರ ಕಾರ್ಯಕರ್ತ ಸೋನಮ್ ವಾಂಗ್ಚುಕ್, ಉಪವಾಸ ಸತ್ಯಾಗ್ರಹ ಆರಂಭ
- ಸುಪ್ರೀಂ ಕೋರ್ಟ್ ಕೊಲಿಜಿಯಂ ಸದಸ್ಯರಾಗಿ ಹಿರಿಯ ನ್ಯಾಯಮೂರ್ತಿ ಪಿ.ಎಸ್.ನರಸಿಂಹ ನೇಮಕ. ಕಳೆದ ಐದು ವರ್ಷಗಳಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸಿದ ನ್ಯಾ.ಜೆ.ಕೆ.ಮಹೇಶ್ವರಿ ನಿವೃತ್ತರಾದ ಹಿನ್ನೆಲೆಯಲ್ಲಿ ಅವರ ಸ್ಥಾನಕ್ಕೆ ನರಸಿಂಹ ಅವರ ನೇಮಕವಾಗಿದೆ
- ಫ್ರಾನ್ಸ್‌ನಲ್ಲಿ ಹೆಚ್ಚಿದ ತಾಪಮಾನಕ್ಕೆ ಪ್ರಸಕ್ತ ವರ್ಷ (ಜೂನ್ 24ರವರೆಗೆ ದಾಖಲಾದ ಅಂಕಿ-ಅಂಶದ ಪ್ರಕಾರ) 1 ಸಾವಿರ ನಾಗರಿಕರು ಮೃತಪಟ್ಟಿದ್ದು, ಈ ಪೈಕಿ ಶೇ.85ರಷ್ಟು ಮಂದಿ ಹಿರಿಯ ನಾಗರಿಕರು ಎಂದು ಸರಕಾರ ಮಾಹಿತಿ ನೀಡಿದೆ. ಹಲವು ನಗರಗಳಲ್ಲಿ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿದೆ